ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿ ಖಾಸಗೀ ಜನರಿಗೆ ಸಿಮೆಂಟನ್ನು ಮಾರಾಟ ಮಾಡುತ್ತಿಲ್ಲ. ಅದರಿಂದ ಮಾನ್ಯ ಸದಸ್ಯರು ಹೇಳುತ್ತಿರುವ ಆಪಾದನೆಯಲ್ಲಿ ಸತ್ಯಾಂಶವಿಲ್ಲ, ನಿಜವಿಲ್ಲ, ಅದರಲ್ಲಿ ಹುರುಳಿಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ನಮ್ಮ ಹಾಸನ ತಾಲ್ಲೂಕ್ ಕೋಆಪರೇಟೀವ್ ಪ್ರೆಸ್ ಪ್ರೆಸಿಡೆಂಟರು ಭದ್ರಾವತಿಗೆ ಹೋಗಿ ಸಿಮೆಂಟನ್ನು ಕೇಳಿದಾಗ ಅವರು ಅಂದರೆ ಅಲ್ಲಿನ ಸೇಲ್ಸ್ ಮೇನೇಜರು ಹೆಚ್ಚು ಹಣವನ್ನು ಕೇಳಿದ್ದರಿಂದ, ಇದು ಕೋಆಪರೇಟೀವ್ ಸೊಸೈಟಿ ಆದುದರಿಂದ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಸಿಮೆಂಟನ್ನು ತರದೇ ಹಾಗೇ ವಾಪಸು ಬಂದಿದ್ದಾರೆ.

ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿ 3-4 ಜನ ಸೇಲ್ಸ್ ಮ್ಯಾನೇಜರಿದ್ದಾರೆ. ಅವರಲ್ಲಿ ಯಾರು ?

ಶ್ರೀ ಕೆ. ಎಚ್. ಹನುಮೇಗೌಡ.—ಅದನ್ನು ವಿಚಾರ ಮಾಡಿ ಹೇಳುತ್ತೇನೆ.

Budget Estimates for 1973-74, Demand for Grants

(Demand No. 6, 29, 30, 31, 31A, 30B, 32, 46, 47, 48, 50 and 50A

[Debate Continued]

ಶ್ರೀ ಬಿ. ಬೈರಪ್ಪಾಜಿ.—ಮಾನ್ಯ ಅಧ್ಯಕ್ಷರೇ, ನಾನು ನೆನ್ನೆಯ ದಿವಸ ಈ ಲೋಕೋಪಯೋಗಿ ಬೇಡಿಕೆಯ ಬಗ್ಗೆ ಮಾತನಾಡುತ್ತ ಈ ಸಣ್ಣ ನೀರಾವರಿ ಕಾಮಗಾರಿಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸಾಕಷ್ಟು ಗಮನವನ್ನು ಹಳೇ ಮೈಸೂರು ವಿಭಾಗಕ್ಕೆ ಹರಿಸಿಲ್ಲ ಎಂದು ಹೇಳುತ್ತ ಇದ್ದೆ. ಹಾಗೆ ಮಾಡಬಾರದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಳೆದ ಸಾರಿ ಮತ್ತು ಅದರ ಹಿಂದಿನ ಸಾರಿ ಅನೇಕ ಯೋಜನೆಗಳು ಮಂಜೂರಾಗಿದ್ದರೂ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸದೆ ಇದ್ದ ಕಾರಣ ಅವುಗಳನ್ನು ಕೈಬಿಡಬೇಕಾಯಿತು. ಆದರೆ ಹಾಗೆ ಕೈಬಿಡುವುದು ಸರಿಯಲ್ಲ. ಈಗಲೂ ಸಹಾ ಇನ್ನೊಂದು ಸಪ್ಲಿಮೆಂಟರಿ ಬಡ್ಜೆಟನ್ನು ತಯಾರು ಮಾಡಿ ನಮ್ಮ ಜಿಲ್ಲೆಗೆ ಮತ್ತು ಈ ಕ್ಷಾಮದ ಹಾವಳಿಗೆ ತುತ್ತಾಗಿರುವ ಚಿತ್ರದುರ್ಗ, ಕೋಲಾರ ಮತ್ತು ಹಾಸನ ಜಿಲ್ಲೆಗಳಿಗೂ ಅವುಗಳ ಹಿತವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಕೆಲವು ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀಮಾನ್ ಚೆನ್ನಬಸಪ್ಪನವರು ಈ ಇಲಾಖೆಯ ಅಧಿಕಾರವನ್ನು ವಹಿಸಿಕೊಂಡ ಮೇಲೆ ಇವರು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಮ್ಮಲ್ಲಿ ಅನೇಕ ಈ ಸಣ್ಣ ನೀರಾವರಿ ಯೋಜನೆಗಳು ಏನು ಫೀಸಿಬಲ್ ಅಲ್ಲ ಎಂದು, ಅವು ಕಾರ್ಯರೂಪಕ್ಕೆ ಬರುವುದಕ್ಕಾಗದೆ ಹಾಗೆಯೇ ಮೂಲೆಗೆ ಬಿದಿದ್ದುವು. ಅವುಗಳ ಖರ್ಚು ಎಕರೆಗೆ ಒಂದು ಸಾವಿರ ಅಥವಾ ಒಂದೂವರೆ ಸಾವಿರ ಬರಬೇಕೆಂಬ ಏನು ಒಂದು ನಿಗದಿಯಾಗಿತ್ತು ಅವನ್ನು ಪುನರ್ವಿಮರ್ಶೆ ಮಾಡಿ ಅದನ್ನು 2 ಸಾವಿರಕ್ಕೆ ಹೆಚ್ಚು ಮಾಡಿದ್ದಾರೆ. ಇದರಂತೆ, ಇವರೊಂದು ಆದೇಶವನ್ನು ಹೊರಡಿಸಿದ್ದರಿಂದ ಈ ದಿವಸ ಅನ್‌ಫೀಸಿಬಲ್ಲಾಗಿದ್ದ ಅನೇಕ ಕೆಲಸಗಳು ಫೀಸಿಬಲ್ ಆಗಿವೆ. ಇವುಗಳ ಬಗ್ಗೆ ಸರ್ಕಾರದವರು ಇನ್ನಾದರೂ ಒಂದು ನಿರ್ದಿಷ್ಟವಾದ ನಿಲುವನ್ನು ತಾಳಬೇಕೆಂದು ನಾನು ಹೇಳಬಯಸುತ್ತೇನೆ. ಇನ್ನು ಮೈನರ್ ನೀರಾವರಿ ಕಾಮಗಾರಿಗಳ ಸರ್ವೆ ಕಾರ್ಯ ಬಹಳ ನಿಧಾನವಾಗಿ ಮಂದಗತಿಯಿಂದ ಸಾಗುತ್ತಿದೆ. ಇದಕ್ಕೆ ತಕ್ಕಷ್ಟು ಸಿಬ್ಬಂದಿ ಇಲ್ಲ. ಬೆಂಗಳೂರು ಸರ್ಕಲ್‌ನಲ್ಲಿ ಈ ಸಣ್ಣ ನೀರಾವರಿಗಳ ಕೆಲಸದಲ್ಲಿ ಸಮರ್ಪಕವಾದ ಸರ್ವೆ ಕೆಲಸ ನಡೆದಿಲ್ಲ. ನಮ್ಮ ತಾಲ್ಲೂಕ್ ಒಂದರಲ್ಲೇ 45 ಕೆರೆಗಳ ಕೆಲಸ ನಿಂತುಹೋಗಿದೆ, ನಮ್ಮ ಜಿಲ್ಲೆಯಲ್ಲಿ ಹೀಗೆ ಸುಮಾರು 400-500 ಕೆರೆಗಳ ಕೆಲಸ ನಿಂತಿದೆ. ಹಿಂದೆ ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದ ಹಾಗೂ ಆದೇಶ ಕೊಟ್ಟಂಥ ಕೆಲವು ಕೆಲಸಗಳ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ ಎನ್ನುವುದನ್ನು ನಾನು ವಿಷಾದದಿಂದ ತಿಳಿಸಬೇಕಾಗಿದೆ. ಇದೇ ಸಭೆಯಲ್ಲಿ ಹಿಂದೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಬೆಂಗಳೂರು ಸರ್ಕಲ್ಲಿನಲ್ಲಿ ಒಂದು ಮೈನರ್ ಇರಿಗೇಷನ್ ಡಿವಿಜನ್ನನ್ನು ತೆರೆಯುವುದಾಗಿ ಮಾನ್ಯ ಸಚಿವರು ತಿಳಿಸಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಸಚಿವರೇ ಇಲ್ಲ. ಮಾನ್ಯ ನಂಜೇಗೌಡರದು ಮೇಜರ್ ಇರಿಗೇಷನ್ ಶಾಖೆ......

ಅಧ್ಯಕ್ಷರು.—ಮಾನ್ಯ ಸಚಿವರು ಹೇಳಿ ಹೋಗಿದ್ದಾರೆ. ಈಗ ಬರುತ್ತಾರೆ.

ಶ್ರೀ ಬಿ. ಬೈರಪ್ಪಾಜಿ.—ಇಲ್ಲಿ ಆದಷ್ಟು ಬೇಗ ಒಂದು ಮೈನರ್ ಡಿವಿಜನ್ ಸ್ಥಾಪನೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅದಕ್ಕೆ ಕೂಡಲೆ ಆದಷ್ಟು ಸಿಬ್ಬಂದಿಯನ್ನೂ ಕೂಡ ನೇಮಕ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಹಿಂದೆ ಇದೇ ಸಭೆಯಲ್ಲಿ ಹೇಗೆ ಈ ರಸ್ತೆಗಳನ್ನು 50 ಮೈಲಿಗಳ ಪ್ರಮಾಣದವರೆಗೂ ಪಿ.ಡಬ್ಲ್ಯೂ.ಡಿ. ಗೆ ಸೇರಿಸಿಕೊಳ್ಳಲಾಗುವುದೆಂದು ಹೇಳಿದ್ದರೋ ಅದೇ ರೀತಿಯಲ್ಲಿ ಈ ಸಾಲಿನಲ್ಲಿ ಉಳಿದ ಎಲ್ಲ ರಸ್ತೆಯನ್ನೂ ಅದಕ್ಕೆ ಸೇರಿಸುವಂತೆ ಹೇಗೆ ಒಂದು ತೀರ್ಮಾನ ತೆಗೆದುಕೊಂಡಿದ್ದಾರೋ ಅದೇ ರೀತಿಯಲ್ಲಿ ಈ ಮೈನರ್ ಕೆರೆಗಳ ವಿಚಾರದಲ್ಲೂ ಕೂಡ ಒಂದು ತೀರ್ಮಾನ ತೆಗೆದುಕೊಂಡು ಇದಕ್ಕೆ ಬೇಕಾಗುವ ಒಂದು ಹಣದ ಇತಿಮಿತಿಗಳಲ್ಲಿ 4 ವರ್ಷದ ಒಂದು ಟಾರ್ಜೆಟ್ಟನ್ನು ಹಾಕಿಕೊಂಡು ಸರ್ಕಾರದವರು ರಾಜ್ಯದಲ್ಲಿ ಇರತಕ್ಕ ಎಲ್ಲ ಕೆರೆಗಳನ್ನೂ ಕಾರ್ಯರೂಪಕ್ಕೆ ತಂದು ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಆದದರಿಂದ ಆದಷ್ಟು ತ್ವರಿತವಾಗಿ ಈ ಸಣ್ಣ ಕೆರೆಗಳ ಸರ್ವೆ ಕಾರ್ಯವನ್ನು ಮುಗಿಸಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಏನು ಒಂದು ಮಂದಗತಿಯಿಂದ ಈ ಸರ್ವೆ ಕೆಲಸ ನಡೆಯುತ್ತಿದೆ ಇದೇ ರೀತಿಯಲ್ಲಿ ಇದು ಮುಂದುವರಿದರೆ ಇನ್ನು 50 ವರ್ಷಗಳಾದರೂ ಈ ಕೆಲಸ ಆಗುವುದಿಲ್ಲ. ಮಾನ್ಯ ಚನ್ನಬಸಪ್ಪನವರು ದಕ್ಷರು, ಅವರು ಮನಸ್ಸು ಮಾಡಿದರೆ ಇದನ್ನು ಬೇಗ ಮುಗಿಸಬಲ್ಲರೆಂಬ ಆಸೆ ನಮಗಿದೆ. ಕ್ಷಾಮಕ್ಕೆ ತುತ್ತಾಗಿರುವ ಪ್ರದೇಶಗಳಿಗೆ ಮೈನರ್ ಇರಿಗೇಷನ್ ಬಾಬಿನಲ್ಲಿ ಹಣದ ಇತಿಮಿತಿಯನ್ನು ಹಾಕದೆ ಅಲ್ಲಿ ಕೆಲಸಗಳನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಹಣಕಾಸಿನ ಸಚಿವರು ಮೈನರ್ ಇರಿಗೇಷನ್ನಿಗೆ 10 ಕೋಟಿ ರೂಪಾಯಿ ಕೊಡುತ್ತೇವೆ, ಈ ವರ್ಷವೇ ಖರ್ಚು ಮಾಡಬೇಕು ಎಂದು ಹೇಳಿದ್ದಾರೆ. ಮೈನರ್ ಇರಿಗೇಷನ್ನಿಗೆ ಕೊಡುವ ಕೇಂದ್ರ ಸರಕಾರದಿಂದ ಬರುವುದು, ರಾಜ್ಯ ಸರಕಾರದ ಬಜೆಟ್ಟಿನ ಮೇಲೆ ಯಾವುದೇ ರೀತಿಯ ಪರಿಣಾಮವಾಗುವುದಿಲ್ಲ ಎಂದು ಕೂಡ ಮಾನ್ಯ ಘೋಷಣೆ ಮಾಡಿದ್ದಾರೆ ಹೇಳಿದ್ದಾರೆ. ಆದುದರಿಂದ ಸರಕಾರ ಈ ವರ್ಷ 10 ಕೋಟಿ ರೂಪಾಯಿಗಳನ್ನು ಕೊಡುವುದಾದರೆ ಸುಮಾರು 30 ಕೋಟಿ ರೂಪಾಯಿಗೆ ಅಂದಾಜು ತಯಾರಿಸಿ ಪ್ರೋಗ್ರಾಂ ಹಾಕಿ ಈ ವರ್ಷವೇ ಇದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

2–00 P. M.

ಇನ್ನು ರಸ್ತೆಗಳ ಬಗ್ಗೆ ಮಾನ್ಯ ಸಚಿವರು ಬಹಳ ಉದಾರವಾಗಿ ಆಸಕ್ತಿ ತಳೆದಿದ್ದಾರೆ. ಕಳೆದ ವರ್ಷ 80 ಕಿಲೋ ಮೀಟರ್ ರಸ್ತೆ ತೆಗೆದುಕೊಂಡಿದ್ದರು. ಈಗಾಗಲೆ ಸಚಿವರು ಒಂದು ಪತ್ರ ನಮಗೆ ಬರೆದು ನೀವೆಲ್ಲಾ ಸೇರಿ ನಿಮ್ಮ ಕ್ಷೇತ್ರಗಳಲ್ಲಾಗಬೇಕಾಗಿರುವ ರಸ್ತೆಗಳ ಬಗ್ಗೆ ಮಾಹಿತಿ ಕೊಡಿ ಎಂದು ಕೇಳಿದ್ದಾರೆ. ಕಳೆದ ವರ್ಷ 17 ಸಾವಿರ ಕಿಲೋಮೀಟರ್ ತೆಗೆದುಕೊಂಡಿದ್ದರು. ಈ ವರ್ಷ ಇನ್ನೂ 20 ಸಾವಿರ ಆಗಬಹುದು. ಇದಕ್ಕೆ ಸರಕಾರಿ ಆಜ್ಞೆ ಮಾಡುವುದಾಗಿ ಹೇಳಿದ್ದಾರೆ. ಅವರು ಈ ರಸ್ತೆಗಳ ಬಗ್ಗೆ ಒಂದು ಜಿ. ಒ. ಕೂಡ ಮಾಡಿದ್ದಾರೆ. ಆಕ್ಷೇಪಣೆಗಳಿಗೆ ಎಡೆಯಿಲ್ಲದಂತೆ ಸರಕಾರಿ ಆಜ್ಞೆ ಹೊರಡಿಸಿದ್ದಾರೆ. ಈ ರೀತಿ ಕೆಲಸ ಮಾಡಿದರೆ ಎಲ್ಲಾ ರಸ್ತೆ ಕೆಲಸವೂ ಆಗುವುದು.

ಲಿಫ್ಟ್ ಇರಿಗೇಷನ್‌ಗೆ 2 ಕೋಟಿ ಚಿಲ್ಲರೆ ಒದಗಿಸಿದ್ದರೂ ತುಮಕೂರು ಜಿಲ್ಲೆಯಲ್ಲಿ ಒಂದು ಕೆಲಸವನ್ನೂ ತೆಗೆದುಕೊಂಡಿಲ್ಲ. ಅನೇಕ ಕಡೆ ಫೀಸಿಬಲ್ ಪ್ರಾಜೆಕ್ಟುಗಳಿದ್ದರೂ ತೆಗೆದುಕೊಳ್ಳದಿರುವುದು ಸರಿಯಲ್ಲ. ಈ ಬಗ್ಗೆ ಅಂದಾಜು ತಯಾರಾಗಿರುವ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ನಮ್ಮ ಜಿಲ್ಲೆಯಲ್ಲಿ ತೆಗೆದುಕೊಳ್ಳಬೇಕು. ಅಭಾವಕ್ಕೆ ಆಗಾಗ ಗುರಿಯಾಗುವ ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಮನವಿಮಾಡುತ್ತೇನೆ.

ಇನ್ನು ಕೋಕನಟ ಪಿಕಪ್ ಬಗ್ಗೆ ಹಿಂದೆ ಯೋಜನೆಯಿತ್ತು. ಈಚೆಗೆ ಅದು ನಿಂತಿದೆ. ನಮ್ಮ ಕಡೆಗೆ ಮಂತ್ರಿಗಳು ಬಂದಾಗ ಇದರ ಬಗ್ಗೆ ಸರಕಾರಿ ಆಜ್ಞೆ ಮಾಡುತ್ತೇವೆ. ಮತ್ತೆ ಮಾಡಲು ಅವಕಾಶ ಕೊಡುತ್ತೇವೆ ಎಂದು ಹೇಳಿದರು. ಇದರ ಬಗ್ಗೆ ಜಾಗ್ರತೆ ಹುಕುಂ ಹೊರಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನನ್ನ ಹತ್ತಿರ ಸುಮಾರು 15-20 ಜನರ ಹೆಸರಿದೆ. ಸೆಕ್ರೆಟರಿಗಳಾಗಲಿ, ವಿಪ್‌ಗಳಾಗಲಿ ಇಲ್ಲ. ಪಟ್ಟಿ ಕೊಟ್ಟರೆ ಅವರ ಕೆಲಸವಾಯ್ತು ಎಂದು ಅವರು ತಿಳಿದಿರುವಂತೆ ಕಾಣುವುದು. ಇದು ಸರಿಯಲ್ಲ. ನೀವು ಜಾಗ್ರತ ಮುಗಿಸಬೇಕು. 5 ಗಂಟೆಗೆ ರಿಪ್ಲೈ ಶುರುವಾಗಬೇಕು. ಈ ಡಿಮ್ಯಾಂಡ್ ಮುಗಿದಮೇಲೆ ಅಗ್ರಿಕಲ್ಚರಲ್ ಡಿಮ್ಯಾಂಡ್ ತೆಗೆದುಕೊಳ್ಳ ಬೇಕಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಡಿವಿಜನ್ ಮಟ್ಟದಲ್ಲಿರುವ ವರ್ಕ್‌ಷಾಪ್ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ನಮ್ಮ ಪ್ರಾಂತದಲ್ಲಿ ಕೆರೆ ಕಟ್ಟೆ ಕೆಲಸವಾಗಬೇಕು. ಮಾರ್ಕೋನಹಳ್ಳಿ ಕೆರೆ ರಿಪೇರಿಯಾಗಬೇಕು. ಕಳೆದ 6 ತಿಂಗಳಿಂದ ಇದರ ಕೆಲಸ ನಿಂತಿದೆ. ಕೆಲಸ ಸಮರ್ಪಕವಾಗಿ ಆಗುತ್ತಿಲ್ಲ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ವರ್ಕ್‌ಷಾಪ್ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಇಷ್ಟು ಹೇಳಿ ಅವಕಾಶವಿಲ್ಲದೆ ಇರುವುದರಿಂದ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈಗ ಮಾತನಾಡುವ ಡಿಮ್ಯಾಂಡಿಗೆ ಸಂಬಂಧಪಟ್ಟ ಮಂತ್ರಿಗಳಿಲ್ಲದಿರುವುದರಿಂದೇನಾಗುತ್ತದೋ ಎಂದು ಅನಿಸುವುದು. ಆದರೂ ಕೊಟ್ಟಿರುವ ಅವಕಾಶವನ್ನು ಉಪಯೋಗಿಸಿಕೊಂಡು ಒಂದೆರಡು ವಿಷಯಗಳನ್ನು ಹೇಳುತ್ತೇನೆ. ವಿದ್ಯುಚ್ಛಕ್ತಿ, ನೀರಾವರಿ ಮತ್ತು ಸಾರಿಗೆ ಸಂಪರ್ಕ ಈ ಮೂರು ಬಾಬುಗಳಿಗೆ ಈಗೇನು ಹಣ ಕೊಟ್ಟಿದ್ದಾರೆ ಅದು ಸಾಲುವುದಿಲ್ಲ. ಈ ಮೂರು ಬಾಬುಗಳಂ ಕೂಡ ಪ್ರಗತಿಗೆ ಅತಿ ಮುಖ್ಯವಾದುವು. ಈ ಸಂಬಂಧದಲ್ಲಿ ಪ್ರಗತಿ ಕುಂಟಿತವಾಗಿದೆಯೆಂಬ ಭಾವನೆ ಇದೆ. ಇಂದು ನಮ್ಮ ತಾಲ್ಲೂಕಿನ ಉದಾಹರಣೆ ತೆಗೆದುಕೊಂಡರೆ ಸಣ್ಣ ಕೆರೆಗಳ ದುರಸ್ತಿಯಾಗಿಲ್ಲ. ಅಲ್ಲಿ ದೊಡ್ಡ ಕೆರೆ ಮಾಡಲು ಅರ್ಕಾವತಿ ನೀರು ಬೆಂಗಳೂರಿಗೆ ಸರಬರಾಯಾಗುತ್ತಿದೆ, ಆ ಭಾಗದಲ್ಲಿ ಯಾವ ವಿಧವಾದ ಕೆರೆಯನ್ನು ಕಟ್ಟಲು ಅವಕಾಶವಿಲ್ಲ. ಕಣ್ವ ಕೆರೆ ಚನ್ನಪಟ್ಟಣದ ಬಳಿ ಇರುವುದು, ಅದರ ಮೇಲು ಭಾಗದಲ್ಲಿ ಯಾವ ವಿಧವಾದ ಅಣೆಯನ್ನೂ ಕಟ್ಟಬಾರದು ಎಂದು ನಿಯಮವಿದೆ. ನಮ್ಮ ಭಾಗದಲ್ಲಿ ಯಾವ ವಿಧವಾದ ಹೊಸ ಕಾಮಗಾರಿಯನ್ನೂ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಈಗಿರುವ ಸಣ್ಣ ಕೆರೆಗಳ ರಿಪೇರಿ ಸಹ ಮಾಡುತ್ತಿಲ್ಲ. ಅಲ್ಲಿ ಬರಗಾಲದ ಪರಿಸ್ಥಿತಿ ಇದೆ. ಈಗಲಾದರೂ ಸಣ್ಣ ಕೆರೆಗಳ ರಿಪೇರಿಗೆ ನಮ್ಮ ತಾಲೂಕಿನಲ್ಲಿ ಹಣ ಒದಗಿಸಿ ಕೆಲಸ ಕೈಕೊಳ್ಳಬೇಕು, ಇದು ಅತಿ ಮುಖ್ಯವಾದ ವಿಷಯ. ಇದನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಅವರು ಇಲ್ಲಿ ಹಾಜರಿರದೆ ಇರುವುದು ಸಂಕಟವಾಗಿದೆ.

ಮತ್ತೊಂದು ವಿಷಯ. ನಮ್ಮ ತಾಲ್ಲೂಕಿನ ಮೂರನೆ ಎರಡು ಭಾಗದಲ್ಲಿ ಕ್ಯಾಚಮೆಂಟ್ ಬರುವುದು, ಉಳಿದ ಭಾಗದಲ್ಲಿ ಕೆರೆಗಳನ್ನು ಮಾಡಲು ಯೋಜನೆ ಮಾಡಿದ್ದಾರೆ, ಎಸ್ಟಿಮೇಟು ಪ್ಲಾನು ಆಗಿದೆ. ಆದರೆ ಅದಕ್ಕೆ ತಡೆ ಹಾಕಿದ್ದಾರೆ. ನಮಗಾಗಿರುವ ಈ ಅನ್ಯಾಯವನ್ನು ವಿಮರ್ಶೆ ಮಾಡಿ ಸರಿಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ಕುಣಿಗಲ್ ತಾಲ್ಲೂಕಿನಲ್ಲಿ ಒಂದು ದೊಡ್ಡ ಕೆರೆ ಇದೆ. ಗೊಲ್ಲರಹಟ್ಟಿ ಕೆರೆ ಕಟ್ಟಲು ಪ್ಲಾನ್ ಮಾಡಿದ್ದಾರೆ. ಅದು ದೊಡ್ಡ ಕೆರೆ. ಅದರ ಮೇಲ್ಭಾಗದಲ್ಲಿ ಶೆಟ್ಟಿ ಕೆರೆ ಕಟ್ಟುವುದರಿಂದ ಅನುಕೂಲವಾಗುವುದು. ಆದರೆ ಮಾಗಡಿ ತಾಲ್ಲೂಕಿನಲ್ಲಿ ಯಾವ ಕೆರೆಯ ಕೆಲಸವನ್ನೂ ತೆಗೆದುಕೊಳ್ಳಬಾರದೆಂದು ಹೇಳುತ್ತಿದ್ದಾರೆ. ಅದು ಯಾವ ಕ್ಯಾಚ್‌ಮೆಂಟ್. ಇದರ ಅರ್ಥವಾಗುವುದಿಲ್ಲ. ಮಾಗಡಿ ತಾಲ್ಲೂಕಿನಲ್ಲಿರುವದು 6 ಸಾವಿರ ಎಕರೆ ನೀರಾವರಿ. ಅದೇ ಕುಣಿಗಲ್ ತಾಲ್ಲೂಕಿನಲ್ಲಿ 40 ಸಾವಿರ ಎಕರೆ ನೀರಾವರಿ ಇವೆ. ನಮ್ಮ ತಾಲ್ಲೂಕಿನಲ್ಲಿರುವ ಶೆಟ್ಟಿಕೆರೆ ಎನ್ನುವುದರ ಪ್ಲಾನು ಆಗಿದೆ. ಇದನ್ನು ಮಂಜೂರು ಮಾಡಿಕೊಟ್ಟರೆ ಇದರಿಂದ ಸುಮಾರು ಆರು ಸಾವಿರ ಎಕರೆ ಪ್ರದೇಶಗಳ ಜನರಿಗೆ ನೀರಾವರಿ ಸೌಕರ್ಯ ಒದಗಿ ಅನುಕೂಲವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ, ಒಂದು ವಿಷಾದದ ಸಂಗತಿಯನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಇಂದು ಇಲ್ಲಿ ಒಬ್ಬ ಮಿನಿಸ್ಟರು ಕೂಡ ಹಾಜರಿಲ್ಲ. ಈ ಸಭೆ ನಡೆಯುತ್ತಿರುವಾಗ ಮಂತ್ರಿಗಳು ಇಲ್ಲದೇ ಹೋದರೆ ಇದು ಅಕ್ಷಮ್ಯ ಅಪರಾಧವಾಗುತ್ತದೆ. ಇದು ತೀರಾ ನಾಚಿಕೆಗೇಡುತನ. ಜಾಯಿಂಟು ರೆಸ್‌ಪಾನ್ಸಿಬಿಲಿಟಿ ಎಂದು ಪ್ರತಿಯೊಂದು ಸಾರಿಯೂ ಇಲ್ಲಿ ಹೇಳುತ್ತಾರೆ. ಇಂದು ರಾಜ್ಯ ಮಂತ್ರಿಗಳಿಗೂ ಅದೇ ರೀತಿ ಜಾಯಿಂಟ್ ರೆಸ್‌ಪಾನ್‌ಸಿಬಿಲಿಟಿ ಇದೆಯೇನು ?

ಶ್ರೀ ಹೆಚ್. ಎಸ್. ಶಿದ್ದಪ್ಪ.—ಈ ಸಭೆಯ ಬಗ್ಗೆ ಇರತಕ್ಕ ಗೌರವವೇನು ಇದನ್ನು ಅನಿವಾರ್ಯ ವಾಗಿ ನಾವು ಪ್ರಶ್ನೆ ಮಾಡಬೇಕಾಗಿ ಬರುತ್ತದೆ. ಇಂತಹ ವಿಷಯವನ್ನು ತಾವು ಖಂಡನೆ ಮಾಡ ಬೇಕು, ಮಂತ್ರಿ ಮಂಡಲಕ್ಕೆ ಇದರಿಂದ ಏನಾದರೂ ಬೆಲೆ ಬರುತ್ತದೆಯೇ ?

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳಿಲ್ಲ. ನನಗೂ ಗೊತ್ತಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನೇನು ತಮಗೆ ಹೊಸದಾಗಿ ಇದರ ಬಗ್ಗೆ ಹೇಳುವ ಆವಶ್ಯಕತೆ ಇಲ್ಲ. ತಮಗೆ ಈ ಸದನದ ಅನುಭವ ಇರುವುದರಿಂದ ಮತ್ತು ಹಿಂದಿನಿಂದಲೂ ಈ ಸದನ ದಲ್ಲಿದ್ದು ಕೆಲಸ ಮಾಡಿರುವುದರಿಂದ ಇವೆಲ್ಲಾ ತಮಗೆ ಗೊತ್ತಿದೆ, ದುರ್ದೈವ ಇಂದು ನಮ್ಮ ಮುಖ್ಯ ಮಂತ್ರಿಗಳು ಸಾಮಾನ್ಯವಾಗಿ ಅನಿವಾರ್ಯವಾದ ಕೆಲಸಗಳಿಗಾಗಿ ದೆಹಲಿಗೆ ಹೋಗಬೇಕಾದ ಸಂದರ್ಭಬಂದರೆ ಆಗ ಸಭೆಗೆ ಬಾರದೆ ಇರಬಹುದು. ಇಂದು ಅವರು ಊರಲ್ಲಿದ್ದರೂ ಇಲ್ಲಿಗೆ ಬಂದಿಲ್ಲ. ಸಭೆಯಲ್ಲಿ ಇರತಕ್ಕ ಒಂದು ಪ್ರವೃತ್ತಿಯನ್ನು ಇನ್ನೂ ಬೆಳೆಸಲಿಲ್ಲ, ಈ ರೀತಿ ಪ್ರಜಾಪ್ರಭುತ್ವದಲ್ಲಿ ನಾವು ಮಾಡುತ್ತಾ ಹೋದರೆ ಇದು ನಿಜವಾಗಿಯೂ ಅಪಮಾನಕರ. ಇಲ್ಲಿ ಒಂದು ಸಂಪ್ರದಾಯ ಬೆಳೆದುಕೊಂಡು ಬರುತ್ತಿದೆ. ಈ ರೀತಿ ಆದರೆ ಇದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಈಗತಾನೆ ಮುಖ್ಯ ಮಂತ್ರಿಗಳ ಮನೆ ಕಡೆಯಿಂದ ಬಂದೆ. ಅಲ್ಲಿ ಒಂದು ದೊಡ್ಡ ಗ್ಯಾಂಗೇ ಇದೆ.

ಶ್ರೀ ಎಚ್. ಜಿ. ಚನ್ನಪ್ಪ.—ಈ ಸಂದರ್ಭದಲ್ಲಿ ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇಲ್ಲದಿದ್ದರೂ ಇಲ್ಲಿ ಮೇಜರು ಇರಿಗೇಷನ್ ಖಾತೆಗಳ ಸಚಿವರು ಮಾತ್ರ ಇದ್ದಾರೆ, ಇವರಾದರೂ ಮೈನರ್ ಇರಿಗೇಷನ್ ವಿಚಾರದಲ್ಲಿ ನಮ್ಮ ತಾಲ್ಲೂಕಿಗೆ ನ್ಯಾಯ ದೊರಕಿಸಿಕೊಡ ಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕುಣಿಗಲ್ ಭಾಗದಲ್ಲಿರುವ ಕೆರೆಗೆ ಕ್ಯಾಚ್‌ಮೆಂಟು ಇದೆ ನಮ್ಮ ಭಾಗದಲ್ಲಿರುವ ಶೆಟ್ಟಿಕೆರೆ ಟ್ಯಾಂಕಿಗೆ ಕ್ಯಾಚ್‌ಮೆಂಟಿಲ್ಲ ಎಂದು ಕುಣಿಗಲ್ ಕೆರೆಯನ್ನು ಮಾತ್ರ ಮಂಜೂರು ಮಾಡಿ ನಮ್ಮ ಭಾಗದ ಬಗಾಲದ ಕಡೆ ಇರುವ ಕೆರೆಯನ್ನು ಮಂಜೂರ್ ಮಾಡದೇ ಇರುವುದು ಸರಿಯಲ್ಲ. ಇದರಲ್ಲಿ ನ್ಯಾಯವಾಗಿ ನಮ್ಮ ತಾಲ್ಲೂಕಿನ ಕೆರೆಗೆ ಮೊದಲು ಪ್ರಾಶಸ್ತ್ಯ ಕೊಟ್ಟು ಮಾಡಿಸಿಕೊಡಬೇಕು. ಮಾನ್ಯ ಚನ್ನಬಸಪ್ಪನವರು ನ್ಯಾಯಕ್ಕೆ ಹೆಸರಾದವರು ಇದರಲ್ಲಿ ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ನಮ್ಮ ಭಾಗದ ಕೆರೆಯನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ನ್ಯಾಯ ದೊರಕಿಸಿಕೊಡಬೇಕೆಂದು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಕುಣಿಗಲ್ ಕೆರೆಯಲ್ಲಿ ಕೇವಲ 29 ಸಾವಿರ ಯೂನಿಟ್ಟುಗಳಷ್ಟು ನೀರು ಸಿಗುತ್ತದೆ ಮಾಗಡಿ ತಾಲ್ಲೂಕಿನಲ್ಲಿರುವ ಕೆರೆಗಳನ್ನು ಮಾಡಲು ಬೇಗನೆ ಅನುಮತಿ ಕೊಡಬೇಕು, ಕುಣಿಗಲ್ ತಾಲ್ಲೂಕಿಗೆ ಕೆರೆಗಳನ್ನು ಮಾಡಲು ಅನುಮತಿ ಕೊಟ್ಟು ನಮ್ಮ ಭಾಗಕ್ಕೆ ಕೆರೆ ನಿರ್ಮಾಣ ಮಾಡುವುದನ್ನು ತಡ ಮಾಡುವುದು ಸರಿಯಲ್ಲ. ಇದರಲ್ಲಿ ಯಾರ ಹಿತಾಸಕ್ತಿಗಳಿಗೂ ಒಳಗಾಗದೆ ನಮ್ಮ ಭಾಗದ ಜನಕ್ಕೆ ನ್ಯಾಯ ದೊರಕಿಸಿಕೊಡಲೇ ಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಕೂಡ ಮನವಿ ಮಾಡಿ ಹೇಳಿದ್ದೇನೆ. ಸಂಬಂಧಪಟ್ಟ ಮಂತ್ರಿಗಳು ನ್ಯಾಯ ದೊರಕಿಸಿ ಕೊಡದೇ ಹೋದರೆ ನಾನು ನಮ್ಮ ತಾಲ್ಲೂಕು ಜನತೆ ಯನ್ನೂ ಕೂಡಿಕೊಂಡು ಮಾನ್ಯ ಮಂತ್ರಿಗಳು ಮನೆ ಮುಂದೆ ಸತ್ಯಾಗ್ರಹ ಮಾಡಬೇಕಾಗಿ ಬರುತ್ತದೆ ಮತ್ತು ಇದಕ್ಕಾಗಿ ಆಮರಣಾಂತ ಉಪವಾಸ ಸತ್ಯಾಗ್ರಹ ಹೂಡಿ ನಮ್ಮ ಜನತೆಗೆ ನ್ಯಾಯ ದೊರಕಿಸುವುದಕ್ಕಾಗಿ ಹೋರಾಟ ಮಾಡಬೇಕಾಗುತ್ತದೆ, ಆ ರೀತಿ ಮಾಡಲು ಅವಕಾಶ ಕೊಡಬೇಡಿ, ಕುಣಿಗಲ್ ತಾಲ್ಲೂಕಿನಲ್ಲಿರುವ ಕೆರೆಗೆ ಮೊದಲು ಅವಕಾಶ ಕೊಟ್ಟರೆ ಪರಿಸ್ಥಿತಿ ವಿಕೋಪಕ್ಕೆ ತಿರುಗು ತ್ತದೆ, ಇದಕ್ಕೆ ಪ್ರೋತ್ಸಾಹ ಕೊಡಬಾರದು. ಮಾಗಡಿ ತಾಲ್ಲೂಕಿನಲ್ಲಿರುವ ಕೆರೆಗಳನ್ನು ಕಳೆದ ಇಪ್ಪತ್ತು ವರ್ಷಗಳಿಂದಲೂ ದುರಸ್ತಿ ಮಾಡಲೇ ಇಲ್ಲ. ಮತ್ತು ಬೇರೆ ಯಾವ ವಿಧವಾದ ಕಾರ್ಯ ಗಳನ್ನೂ ಇಲ್ಲಿ ಹೆಚ್ಚು ಮಾಡಲಿಲ್ಲ ರಸ್ತೆ ಕೆಲಸಗಳನ್ನು ಮಾಡುವುದರಲ್ಲಿ ಕೂಡ ಈ ತಾಲ್ಲೂಕು ಹಿಂದೆ ಉಳಿದಿದೆ ಈಚೆಗೆ ಎಲ್ಲ ಕಡೆಯಲ್ಲೂ 80 ಕಿಲೋಮೀಟರಿನಷ್ಟು ರಸ್ತೆಗಳನ್ನು ಸರಕಾರವೇ ವಹಿಸಿಕೊಂಡಿದ್ದರೂ ನಮ್ಮ ಮಾಗಡಿ ತಾಲ್ಲೂಕಿನಲ್ಲಿ ಕೇವಲ 60 ಕಿಲೋಮೀಟರು ರಸ್ತೆ ಮಾತ್ರ ಸರಕಾರ ತೆಗೆದುಕೊಂಡಿದೆ. ಇಂತಹ ತಾರತಮ್ಯ ಏಕೆ ಮಾಡಬೇಕು ? ಮಾಗಡಿ ತಾಲ್ಲೂಕು ಬರೀ ಗುಡ್ಡಗಾಡಿನಿಂದ ಕೂಡಿರುವ ಒಂದು ತಾಲ್ಲೂಕಾಗಿದೆ. ಇಲ್ಲಿಂದ ಒಬ್ಬರು ಗರ್ಭಿಣಿ ಹೆಂಗಸರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾದರೆ ಅವರನ್ನು ತೊಟ್ಟಿಲಲ್ಲಿ ಇಟ್ಟು ಕರೆದುಕೊಂಡು ಹೋಗುತ್ತಿದ್ದಾರೆ. ಏಕೆಂದರೆ ಇಲ್ಲಿನ ರಸ್ತೆಗಳಲ್ಲಿ ಬರೀ ಹಳ್ಳಕೊಳ್ಳಗಳೇ ಜಾಸ್ತಿಯಾಗಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಪ್ರಜಾಪ್ರಭುತ್ವ ಬಂದಿದ್ದರೂ ನಮ್ಮ ತಾಲ್ಲೂಕನ್ನು ಅಭಿವೃದ್ಧಿ ಮಾಡಲು ಇನ್ನೂ ತಕ್ಕ ಕಾರ್ಯಕ್ರಮ ಹಾಕಿಕೊಳ್ಳದೇ ಇರುವುದು ತುಂಬಾ ಶೋಚನೀಯವಾಗಿದೆ. ನಮ್ಮ ತಾಲ್ಲೂಕಿಗೆ ಹೆಚ್ಚು ಗಮನ ಕೊಡಬೇಕೆಂದು ಮತ್ತು ನ್ಯಾಯವನ್ನು ನಮ್ಮ ಜನತೆಗೆ ದೊರಕಿಸಿ

(ಶ್ರೀ ಎಚ್. ಜಿ. ಚನ್ನಪ್ಪ)

ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸಣ್ಣ ನೀರಾವರಿ ಕೆಲಸಗಳನ್ನು ಮಾಡುವಾಗ ನಮ್ಮಲ್ಲಿ ಸುಮಾರು 250 ಕೆರೆಗಳಿವೆ, ಒಂದೊಂದು ಕೆರೆಯನ್ನು ರಿಪೇರಿ ಮಾಡಲು ಸುಮಾರು ಐದು ಸಾವಿರ ಇಲ್ಲವೇ ಹತ್ತು ಸಾವಿರ ದೊಳಗೆ ಆಗುತ್ತದೆ, ಇದರಿಂದ ಸುಮಾರು ಎಂಟು ಹತ್ತು ಲಕ್ಷ ಎಕರೆ ನೀರಾವರಿ ಸೌಕರ್ಯಗಳು ಒದಗುತ್ತವೆ. ಇದರಿಂದ ದೇಶದ ಜನಕ್ಕೆ ಅನ್ನ ಒದಗಿಸಲು ಸಹಾಯವಾಗುತ್ತದೆ. ಇಂದು ಅಕ್ಕಿ ರಾಗಿ ಇತ್ಯಾದಿಗಳ ನಿಯಂತ್ರಣವನ್ನು ಜಾರಿಗೆ ತಂದಿದ್ದಾರೆ. ಇದರ ಹಂಚಿಕೆ ನೋಡಿದರೆ ನಿಜವಾಗಿಯೂ ಭಯವಾಗುತ್ತದೆ. ನಮ್ಮ ಪಕ್ಕದಲ್ಲಿರುವ ಚನ್ನಪಟ್ಟಣ ತಾಲ್ಲೂಕಿಗೆ 80 ಕ್ವಿಂಟಾಲ್ ಅಕ್ಕಿ ಒದಗಿಸಿ ನಮ್ಮ ಮಾಗಡಿ ತಾಲ್ಲೂಕಿಗೆ ಕೇವಲ 20 ಕ್ವಿಂಟಾಲು ಅಕ್ಕಿ ಒದಗಿಸಿದರೆ ಇದರಿಂದ ನಮ್ಮ ಜನತೆಗೆ ಹಂಚಲು ಸಾಧ್ಯವೇ ? ಇದು ಯಾವ ಸರಕಾರದ ಆಹಾರ ನೀತಿ ಎಂದು ಇಲ್ಲಿ ಕೇಳಬೇಕಾಗಿದೆ. ಚನ್ನಪಟ್ಟಣದ ಜನಕ್ಕೆ ಮಾತ್ರ ಕ್ಷಾಮ ಇದೆ ನಮ್ಮ ತಾಲ್ಲೂಕಿಗೆ ಇಲ್ಲ ಎಂತಲೋ ನಮಗೆ ಬರೀ 20 ಕ್ವಿಂಟಾಲ್ ಅಕ್ಕಿ ಒದಗಿಸುವುದು, ಸಮಾಜವಾದ ಎಂದು ಪ್ರಚಾರ ಮಾಡುತ್ತಿದ್ದೀರಿ ಬಡವರಿಗೆ ಸಹಾಯ ಮಾಡಬೇಕು. ಎಂದು ಹೇಳುತ್ತೀರಿ ? ಇದು ಯಾವ ವಾದ ? ಇದು ಯಾವ ಧರ್ಮ ? ಇದನ್ನು ಸರಕಾರ ಅರ್ಥ ಮಾಡಿಕೊಂಡು ನಮ್ಮಲ್ಲಿ ರಸ್ತೆ ಕೆಲಸಗಳನ್ನು ಮಾಡಿಸಿಕೊಡಬೇಕು ಮತ್ತು ನಮ್ಮ ಜನರ ಬಗ್ಗೆ ಸೌಜನ್ಯ ರೀತಿಯಿಂದ ವರ್ತಿಸಬೇಕೆಂದು ಹೇಳಿ ನಮ್ಮ ತಾಲ್ಲೂಕಿನಲ್ಲಿರುವ ಹುಚ್ಚಮ್ಮನ ಪಾಳ್ಯದ ಕೆರೆ ಕೆಲಸ ಬೇಗ ಮಾಡಲು ನ್ಯಾಯ ದೊರಕಿಸಿಕೊಡಬೇಕು. ಇದರಲ್ಲಿ ಒಂದು ತಾಲ್ಲೂಕಿಗೂ ಇನ್ನೊಂದಕ್ಕೂ ತಾರತಮ್ಯ ಮಾಡುವುದು ಸರಿಯಲ್ಲ, ನೀರಾವರಿ ಸೌಲಭ್ಯ ನಮ್ಮ ತಾಲ್ಲೂಕಿನಲ್ಲಿರುವ ಕೆರೆಗೆ ಕ್ಯಾಚುಮೆಂಟ್ ಏರಿಯಾದಲ್ಲಿ ಮಾಡಲು ಇರಿಗೇಷನ್ ಪ್ರಾಜೆಕ್ಟುಗಳನ್ನು ಮಾಡಲು ಅವಕಾಶ ಒದಗಿಸಿಕೊಡಿ. ಲಿಫ್ಟ್ ಇರಿಗೇಷನ್ ಕಾರ್ಯಗಳನ್ನೂ ನಮ್ಮ ಭಾಗದಲ್ಲಿ ಮಾಡಲು ಅವಕಾಶ ಕೊಟ್ಟರೆ ನೀರಾವರಿ ಸೌಲಭ್ಯ ಹೆಚ್ಚುತ್ತದೆ ಮತ್ತು ಭತ್ತ ಬೆಳೆಯುವುದಕ್ಕೂ ಸಹಾಯವಾಗುತ್ತದೆ. ಇದಕ್ಕೆ ಅವಕಾಶಮಾಡಿಕೊಡಬೇಕು, ಎಲ್ಲ ಇತರ ತಾಲ್ಲೂಕುಗಳಂತೆ ನಮ್ಮ ತಾಲ್ಲೂಕಿನಲ್ಲೂ ಸ್ವಾಭಾವಿಕವಾಗಿ ಆಗುವ ಕೆಲಸಗಳನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ವೀರಣ್ಣಗೌಡರು ಪಿ.ಡಬ್ಲ್ಯು.ಡಿ. ಮಂತ್ರಿಗಳು ಆಗಿದ್ದಾಗ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಸೇರಿಕೊಂಡಿರುವ ರಸ್ತೆಗಳನ್ನು ಎಗ್ಜಿಕ್ಯೂಟಿವ್ ಎಂಜಿನಿಯರ್ ಆಸಿಸ್ಟೆಂಟ್ ಇಂಜಿನಿಯರ್ ಬಜೆಟ್‌ನಲ್ಲಿ ಸೇರಿಸಿಲ್ಲ. ಇವುಗಳ ರಿಪೇರಿ ಕೆಲಸ ಅವನ್ನು ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದೇವೆ 14 ವರ್ಷಗಳಿಂದ ಅದು ಬಜೆಟ್ಟಿನಲ್ಲಿ ಸೇರಿಲ್ಲ ಎಂದು ಹೇಳುತ್ತಿದ್ದರೂ ಹಾಗೆ ಬಜೆಟ್ಟಿನಲ್ಲಿ ಬಿಟ್ಟುಕೊಂಡು ಬಂದಿದ್ದಾರೆ. ಅವನ್ನು ತಾಲ್ಲೂಕು ಬೋರ್ಡಿನವರು ಮಾಡುವ ಹಾಗಿಲ್ಲ, ಪಿ.ಡಬ್ಲ್ಯು.ಡಿ. ಯವರು ಮಾಡುವುದಿಲ್ಲ, ಈ ರಸ್ತೆಗಳ ಪರಿಸ್ಥಿತಿ ಏನು ಎಂಬುದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಿ ತಕ್ಷಣ ಅವುಗಳ ರಿಪೇರಿ ಹಣವನ್ನು ಒದಗಿಸಿಕೊಡಬೇಕು. ಮಾಗಡಿ ತಗ್ಗಿನ್ ಕುಪ್ಪ, ರಸ್ತೆ ಮತ್ತು ಹಗ್ಗಿನ ಹಳ್ಳಿಮಾರ್ಗವಾಗಿ ರಾಮನಗರಕ್ಕೆ ಹೋಗತಕ್ಕಂಥ ರಸ್ತೆಗಳಿಗೆ ಇಲಾಖೆಯವರು ತತ್‌ಕ್ಷಣ ಯೋಗ್ಯವಾದ ರಸ್ತೆಗಳನ್ನು ಮಾಡಿಕೊಟ್ಟು ಜನಗಳಿಗೆ ಸೌಕರ್ಯ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಮ್ಮ ತಾಲ್ಲೂಕಿನಿಂದ ಬಂದಿರುವ ಪಟ್ಟಿಯನ್ನು ಹೊಡೆದು ಹಾಕದೆ ಅದನ್ನು ಪೂರ್ಣವಾಗಿ ಅಪ್ರೂವ್ ಮಾಡಿಕೊಡಬೇಕು ಅಂತ ಹೇಳುತ್ತಾ ನನಗೆ ಮಾತನಾಡಲು ಅನುಮತಿ ಕೊಟ್ಟಂಥ ಅಧ್ಯಕ್ಷಣೀಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಜನರಲ್ ಡಿಸ್ಕಷನ್ ಆದರೆ ಒಂದು ತರಹ. ಈಗ ತಮ್ಮ ಬೇಡಿಕೆಯ ಮೇಲೆ ಡಿಸ್ಕಷನ್ ಮಾಡುವ ಕಾಲಕ್ಕೆ ಅನೇಕ ಸದಸ್ಯರು ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುತ್ತಾರೆ, ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ ಹೇಳುವುದಕ್ಕೆ ಅವಕಾಶವಾಗಲೆಂದು ಇಂದು ಇಷ್ಟೊಂದು ಸಮಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಕೊಟ್ಟಿದ್ದಂಥ ಸಮಯದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇದ್ದು ಕೇಳದೇ ಹೋದರೆ ನಾವು ಗೋಡೆಗೆ ಹೇಳೋಣವೇ ? ನಾವು ಹೇಳುವುದು ನಿಷ್ಪ್ರಯೋಜನವಾಗುತ್ತದೆ. ಆದುದರಿಂದ ಮಂತ್ರಿಗಳು ಇಲ್ಲಿ ಇದ್ದರೆ ನಾವು ಹೇಳಿದುದನ್ನು ಕೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಈ ಸಭೆಗಿಂತ ವಿಧಾನ ಪರಿಷತ್ತು ಪ್ರಾಮುಖ್ಯವಾಗಿದೆ. ಮುಖ್ಯ ಮಂತ್ರಿಗಳಿಗೆ, ಮತ್ತು ಎಲ್ಲಾ ಮಂತ್ರಿಗಳು ವಿಧಾನ ಪರಿಷತ್ತಿಗೇ ಹೋಗುತ್ತಿದ್ದಾರೆ ಅವರಿಗೆ ಘನತೆ ಗೌರವ ದೃಷ್ಟಿಯಿಂದ ನಾವು ಪ್ರಾರ್ಥನೆ ಮಾಡುತ್ತೇವೆ ಕ್ಯಾಬಿನೇಟ್ ಸಚಿವರು ಒಬ್ಬರಾದರೂ ಇಲ್ಲಿ ಇರುವುದು ಸೂಕ್ತ. ಇಲ್ಲದಿದ್ದರೆ ಸಭೆಯ ಘನತೆಗೆ ಗೌರವಕ್ಕೆ ಭೂಷಣವಲ್ಲ.

ಟಿ. ಆರ್. ಶಾಮಣ್ಣ.—ವಿಧಾನ ಪರಿಷತ್ತಿನಲ್ಲಿ ತರಾಟೆಗೆ ತೆಗೆದುಕೊಳ್ಳುವಂಥ ಜನ ಬಹಳ ಇದ್ದಾರೆ ಎಂದು ಅಲ್ಲಿ ಹೆಚ್ಚು ಗಮನ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಏನಂದ್ರಿ, ಏನಂದ್ರಿ—ನೀವು ಏನು ಬಹಳ ಕಡಿಮೆ ಗಲಾಟೆ ಮಾಡುತ್ತೀರಾ ? ಅವರಿಗೆ ಹೇಳಿ ಕಳುಹಿಸಿದ್ದೇನೆ ಬರುತ್ತಾರೆ.

ಶ್ರೀ ಎಚ್. ಎನ್. ನಂಜೇಗೌಡ. ಮೇಲ್ಮನೆಯಲ್ಲಿ ಲೋಕೋಪಯೋಗಿ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ 3 ಪ್ರಶ್ನೆಗಳಿವೆ. ಮೊದಲನೆಯದು ಎರಡು ಕೊನೆಯದು ಒಂದು. ಮಂತ್ರಿಗಳು ಇಲ್ಲಿ ಇರಬೇಕು ಅಂತ ಕಾನೂನು ಮಾಡಿದರೆ ನೋಡೋಣ.

ಅಧ್ಯಕ್ಷರು.—ತಾವು ಹಾಗೆ ಹೇಳುವುದು ಸರಿಯಲ್ಲ, ಟ್ರೆಜರಿ ಬೆಂಚು ಪೂರ್ತಿ ಖಾಲಿ ಇದ್ದರೆ ಅದು ಸಭೆಗೆ ಭೂಷಣವಲ್ಲ ಎಂದು ನನಗೂ ಅನ್ನಿಸುತ್ತದೆ. ದಯವಿಟ್ಟು ಕ್ಯಾಬಿನೆಟ್ ಮಿನಿಸ್ಟರ್ ರವರಿಗೆ ಹೇಳಿ ಕಳುಹಿಸಿ.

†ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಸನ್ಮಾನ್ಯ ಅಧ್ಯಕ್ಷಣೀಯವರೇ, ಲೋಕೋಪಯೋಗಿ ಶಾಖೆಯ ಮಂತ್ರಿಗಳು ಮಂಡಿಸಿದಂಥ ಅವರ ಬೇಡಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ನಾಲ್ಕು ಮಾತುಗಳನ್ನು ಆಡ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ರಸ್ತೆಗಳು ಸಾಕಾದಷ್ಟು ಇದೆ. ಆದರೆ ರಸ್ತೆಗಳ ಪರಿಸ್ಥಿತಿಯನ್ನು ಕೂಲಂಕುಷವಾಗಿ ವಿಚಾರ ಮಾಡಿ ನೋಡಿದರೆ ಅವು ಸಮರ್ಪಕವಾಗಿಲ್ಲ. ಈ ವಿಚಾರದಲ್ಲಿ ಲೋಕೋಪಯೋಗಿ ಶಾಖೆಯವರು ಪ್ರತಿಯೊಂದು ಹಳ್ಳಿ ಹಳ್ಳಿಗೂ ಇರುವಂಥ ರಸ್ತೆಗಳನ್ನು, ಜಿಲ್ಲಾ ಮಾರ್ಗಗಳನ್ನಾಗಲೀ, ತಾಲ್ಲೂಕ್ ಮಾರ್ಗಗಳನ್ನಾಗಲೀ ಯಾವುದೇ ದೊಡ್ಡ ಮಾರ್ಗಗಳನ್ನಾಗಲೀ, ಸುವ್ಯವಸ್ಥಿತವಾಗಿಡಲಿಕ್ಕೆ ಪ್ರಯತ್ನ ಮಾಡಿಲ್ಲವೆಂದು ಹೇಳುತ್ತೇನೆ. ಅನೇಕ ಕಡೆ ರಸ್ತೆಗೆ ಮೋರಂ ಹಾಕಿಲ್ಲ, ಅಸ್ಫಾಲ್ಟ್ ಹಾಕಿಲ್ಲ. ರಸ್ತೆಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಸಹ ಸುವ್ಯವಸ್ಥಿತವಾಗಿ ಇಟ್ಟಿಲ್ಲ. ಅನೇಕ ಕಡೆ ರಸ್ತೆ ಮೇಲೆ ಮೈಲಿ ಕೂಲಿಗಳು ಯಾರು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ. ಅನೇಕ ಕಡೆ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನವರು ಇರುವ ಅಧಿಕಾರಿಗಳು ಅನೇಕ ಕಡೆ 10 ಕೂಲಿ ಜನ ಇದ್ದರೆ 20 ಜನ ಎಂದು ಹಾಕಿಕೊಂಡು ದುಡ್ಡು ಪೋಲು ಮಾಡುತ್ತಿದ್ದಾರೆ. ಈ ರೀತಿ ಮೈಲಿ ಕೂಲಿಗಳ ಕೆಲಸ ಸರಿಯಾಗಿ ಮಾಡದೆ ರಸ್ತೆಗಳನ್ನು ಸುವ್ಯವಸ್ಥಿತವಾಗಿ ಇಡದೇ ಅವ್ಯವಸ್ಥೆಗೆ ಕಾರಣವಾಗಿದೆ. ಇದನ್ನು ಸರಿಪಡಿಸಬೇಕೆಂದು ಹೇಳಬಯಸುತ್ತೇನೆ. ಮತ್ತು ಈಗಿನ ಕಾಲದಲ್ಲಿ ಅನೇಕ ಅಧಿಕಾರಿಗಳು ಸಂಬಳವನ್ನು ಹೆಚ್ಚು ಮಾಡುತ್ತಿದ್ದಾರೆ. ಆದರೆ ಈ ರಸ್ತೆಗಳ ಮೇಲೆ ಕೆಲಸ ಮಾಡುತ್ತಿರುವಂಥ ಸಹಸ್ರಾರು ಮೈಲಿ ಕೂಲಿಗಳು, ಶ್ರಮ ಜೀವಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ದಿವಸಕ್ಕೆ ಕಡಿಮೆ ಕೂಲಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ದೊಡ್ಡ ಅಧಿಕಾರಿಗಳಿಗೆ ಪಗಾರ ಹೆಚ್ಚಿಸಿ ಸಣ್ಣ ಶ್ರಮ ಜೀವಿಗಳಿಗೆ ಪಗಾರವನ್ನು ಹೆಚ್ಚು ಮಾಡಲಿಲ್ಲ ಅಂದರೆ, ಅವರ ಕೂಲಿ ಹೆಚ್ಚು ಮಾಡಲಿಲ್ಲ ಎಂದರೆ ಅದು ದೊಡ್ಡ ತಪ್ಪು ಆದೀತು. ಆದುದರಿಂದ ರಾಜ್ಯಾದ್ಯಾಂತ ಮೈಲಿ ಕೂಲಿಗಳ ಪಗಾರವನ್ನು ಹೆಚ್ಚು ಮಾಡಲಿಕ್ಕೆ ಪ್ರಯತ್ನ ಮಾಡಲಿ ಎಂದು ಹೇಳುತ್ತೇನೆ. ಸರ್ಕಾರದವರು ಒಂದು ವರ್ಷದ ಅವಧಿಯಲ್ಲಿ ಗಣನೀಯವಾದ ಪ್ರಗತಿಯನ್ನು ರಸ್ತೆ ಮಾರ್ಗದಲ್ಲಿ ಸಾಧಿಸಿದ್ದಾರೆ. ಹೋದ ಸಾರಿ ಚನ್ನಬಸಪ್ಪನವರು ಪ್ರತಿಯೊಂದು ತಾಲ್ಲೂಕಿನಲ್ಲಿ 50 ಮೈಲಿ ರಸ್ತೆ ಮಾಡುತ್ತೇವೆ ಹೆಸರು ಕೊಡಿ ಎಂದು ಎಲ್ಲಾ ಶಾಸನ ಸಭೆಯ ಸದಸ್ಯರಿಗೂ ಹೇಳಿದರು, ಅಂಥ ರಸ್ತೆಗಳ ಹೆಸರುಗಳನ್ನು ಕೊಟ್ಟಂಥ ಕಾಲದಲ್ಲಿ ಅನೇಕ ಕಡೆ ರಸ್ತೆಗಳನ್ನು ಮಾಡಿದ್ದಾರೆ ಇದು ಒಳ್ಳೆಯ ಸಂಗತಿ. ಇನ್ನು ಕೆಲವು ಕಡೆ ಬೇಜವಾಬ್ದಾರಿಯಿಂದ ಕೆಲಸ ಆಗಿಲ್ಲ. ಅಂಥ ಕಡೆ ಯಾವುದೇ ಅಸಿಸ್ಟೆಂಟ್ ಇಂಜಿನಿಯರ್ ಯಾವುದೇ ಎಗ್ಸಿಕ್ಯೂಟಿವ್ ಎಂಜಿನಿಯರ್ ಇರಲಿ, ಸಂಬಂಧಪಟ್ಟ ಸೂಪರಿಂಟೆಂಡಿಂಗ್ ಇಂಜಿನಿಯರ್ ಇರಲಿ, ಕೆಲಸ ಮಾಡಲಿಲ್ಲ ಎಂದರೆ ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು ಅವರು ಸರಿಯಾಗಿ ಕೆಲಸ ಮಾಡದೇ ಹೋದರೆ ದೇಶ ಕಲ್ಯಾಣ ಬಯಸುವುದಕ್ಕೆ ಅಡ್ಡಿ ಬಂದಿದ್ದಾರೆ ಎಂದು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ನಿರ್ದಿಷ್ಟವಾಗಿ ಯಾರು ಯಾರು ಕೆಲಸ ಮಾಡಲಿಲ್ಲವೋ ಅವರ ಹೆಸರುಗಳನ್ನು ಕಳುಹಿಸಿ ಕೊಡಿ.

ಶ್ರೀ ಬಿ. ಜಿ. ಬಣಕಾರ್.—ಕಳುಹಿಸಿಕೊಡುತ್ತೇನೆ. ಇನ್ನು ಕೆರೆಗಳ ಡೀಸಿಲ್ಟಿಂಗ್ ವಿಚಾರ ಹೇಳುತ್ತೇನೆ. ಪ್ರತಿಯೊಂದು ಕಡೆಯಲ್ಲಿ ಅನೇಕ ಕೆರೆಗಳು ಏನು ಇವೆ, ಅವು ಕೋಡಿ ಬಿದ್ದು ನೀರು ಹಾದು ಹಳ್ಳಕ್ಕೆ ಹೋಗುತ್ತಿದೆ. ಪ್ರತಿಯೊಂದು ಕೆರೆಗಳನ್ನು ಆದಷ್ಟು ಆಳವಾಗಿ ಮಾಡಲು ಪ್ರಯತ್ನ ಮಾಡಬೇಕು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕೆರೆಗಳ ರಿಪೇರಿ ಮಾಡುತ್ತಿದ್ದಾರೆ.

(ಶ್ರೀ ಬಿ. ಪಿ. ಬಣಕಾರ್)

ಅನೇಕ ಕಡೆ ಇಂಜಿನಿಯರ್‌ಗಳು ಈ ಕೆಲಸ ಸರಿಯಾಗಿ ಮಾಡುತ್ತಾ ಇಲ್ಲ. 3 ಕಟ್ಟಿಮಣ್ಣು ತೆಗೆದು 50 ಕಟ್ಟೆಗೆ ಬಿಲ್ ಮಾಡಿದ್ದು ಇದೆ. ಇಂಥ ಅಧಿಕಾರಿಗಳ ಮೇಲೆ ಸರಿಯಾದ ಕಣ್ಣು ಇಟ್ಟು ಅವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆಡಿಟ್ ಟೆಕ್ನಿಕಲ್ ಸೆಲ್ ಇದು ಪ್ರತ್ಯೇಕವಾಗಿರಬೇಕು ಏಕೆಂದರೆ ಎಗ್ಸಿಕ್ಯೂಟಿವ್ ಎಂಜಿನಿಯರ್ ಆಗಿದ್ದವರು, ಆಡಿಟ್ ಸೆಲ್‌ಗೆ ಬಂದರೆ, ಅಥವಾ ಆಡಿಟ್ ಸೆಲ್‌ನಲ್ಲಿ ಇದ್ದವರು ಎಗ್ಸಿಕ್ಯೂಟಿವ್ ಎಂಜಿನಿಯರ್ ಅಥವಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಅಥವಾ ಚೀಫ್ ಎಂಜಿನಿಯರ್ ಆದರೆ ತಮ್ಮ ತಪ್ಪನ್ನು ತಾವು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದುದರಿಂದ ಅನುಭವ ಪೂರ್ಣ ಅಧಿಕಾರಿಗಳನ್ನು ತೆಗೆದುಕೊಂಡು ಹೋಗಿ ಆಡಿಟ್ ಸೆಲ್ ಮಾಡಿದರೆ ಪಿ.ಡಬ್ಲ್ಯು.ಡಿ. ನಲ್ಲಿ ಆಗುತ್ತಿರುವಂಥ ಅವ್ಯವಹಾರ ಪತ್ತೆ ಹಚ್ಚಿ ತಪ್ಪಿತಸ್ಥರಿಗೆ ಅಗದಿ ಶಿಕ್ಷೆ ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಡ್ರಿಂಕಿಂಗ್ ವಾಟರ್ ಬಗ್ಗೆ ಹೇಳಬೇಕೆಂದರೆ ಸರ್ಕಾರದವರು ಸಾಕಾದಷ್ಟು ಕುಡಿಯುವ ನೀರಿನ ಭಾವಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಶ್ಯಾಂಕ್ಷನ್ ಮಾಡಿದ್ದಾರೆ. ಆದರೆ ದುರ್ದೈವದಿಂದ ಇವತ್ತಿನ ದಿವಸ ಕುಡಿಯುವ ನೀರಿನ ಭಾವಿಗಳನ್ನು ಪಿ.ಡಬ್ಲ್ಯು.ಡಿ. ಯವರು ಕಟ್ಟಿಕೊಡುವುದಕ್ಕೆ ಆಗಿಲ್ಲ. ಟೆಂಡರ್ ಕರೆದರೂ ಯಾರೂ ಬರುವುದಿಲ್ಲವೆಂದು ಹೇಳುತ್ತಾರೆ. ಕುಡಿಯುವ ನೀರಿನ ಭಾವಿಗಳ ಬಗ್ಗೆ ರಿವೈಸ್ಡ್ ಎಸ್ಟಿಮೇಟ್ ಅಧಿಕಾರಿಗಳು ಸರಿಯಾಗಿ ಮಾಡಿಲ್ಲ. ಪ್ರತಿಯೊಂದು ಹಳ್ಳಿಹಳ್ಳಿಗೂ ಕುಡಿಯುವ ನೀರಿನ ಸೌಕರ್ಯ ಒದಗಿಸುವುದು ಸರ್ಕಾರದವರ ಉದ್ದೇಶ ಆಗಿರುವಾಗ ಅಲ್ಲಿ ರಿವೈಸ್ಟ್ ಎಸ್ಟಿಮೇಟ್ ಮಾಡಿ ಟೆಂಡರ್ ಕರೆದು ಪ್ರತಿಯೊಂದು ಹಳ್ಳಿಹಳ್ಳಿಗೂ ಕುಡಿಯುವ ನೀರಿನ ಭಾವಿಗಳನ್ನು ಮಾಡಿಸಿಕೊಡಬೇಕೆಂದು ಸಲಹೆ ಕೊಡುತ್ತೇನೆ. ಆಮೇಲೆ ಲಿಫ್ಟ್ ಇರಿಗೇಷನ್ ಸ್ಕೀಮ್ ಹೇಳಬೇಕೆಂದರೆ ನಮ್ಮ ದೇಶದಲ್ಲಿ ಮಳೆ ಅಲ್ಲಲ್ಲಿ ಕಡಿಮೆಯಾಗುತ್ತಾ ಇದೆ. ಜಲಸಂಪತ್ತು ಏನು ಇದೆ ಅದನ್ನು ಉಪಯೋಗ ಮಾಡದೇ ಇದ್ದರೆ ಅದರಿಂದ ನಮಗೆ ಅನುಕೂಲ ಆಗಲಾರದು ಎನ್ನುವ ಮಾತನ್ನು ನಾವು ಮರೆಯತಕ್ಕದ್ದು ಅಲ್ಲ. ಲಿಫ್ಟ್ ಇರಿಗೇಷನ್ ಹೆಚ್ಚಾಗಿ ಅಲ್ಲಲ್ಲಿ ಮಾಡಿದರೆ ಅವುಗಳಿಂದ ನೀರನ್ನು ತೆಗೆದುಕೊಂಡು ಹೆಚ್ಚಿನ ಫಸಲು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಸರ್ಕಾರದವರು ಈ ಒಂದು ದಿಶೆಯಲ್ಲಿ ಕಾರ್ಯಪ್ರವೃತ್ತರಾಗಬೇಕು. ಜಲಸಂಪತ್ತು ಸರಿಯಾಗಿ ಉಪಯೋಗ ಮಾಡಿಕೊಂಡಿಲ್ಲ ಎನ್ನುವುದನ್ನು ಮರೆಯತಕ್ಕದ್ದು ಅಲ್ಲ. ಲಿಫ್ಟ್ ಇರಿಗೇಷನ್ ವಿಚಾರ ಇಲ್ಲಿ ಹೇಳಬೇಕೆಂದರೆ ಕೆಲವು ತಾಲ್ಲೂಕ್‌ಗಳಲ್ಲಿ ಈ ಕೆಲಸ ತೆಗೆದುಕೊಂಡಿಲ್ಲ. ಕೆಲವು ತಾಲ್ಲೂಕ್‌ಗಳಲ್ಲಿ ಹೆಚ್ಚಾಗಿ ತೆಗೆದುಕೊಂಡಿದ್ದಾರೆ. ಅನೇಕ ಕಡೆ ಪಕ್ಷಪಾತವಾಗಿದೆ ಎನ್ನುವ ಕೂಗೂ ಕೇಳಿ ಬರುತ್ತಿದೆ. ಆದುದರಿಂದ ಪ್ರತಿಯೊಂದು ತಾಲ್ಲೂಕ್‌ಗಳಲ್ಲಿ ರಾಜ್ಯದಾದ್ಯಂತ ಜಲ ಸಂಪತ್ತನ್ನು ಹೆಚ್ಚಿಗೆ ಸದುಪಯೋಗ ಪಡಿಸಿಕೊಳ್ಳುವುದಕ್ಕೆ ನಿಗಾವಹಿಸಿ, ಲಿಫ್ಟ್ ಇರಿಗೇಷನ್ ಸ್ಕೀಮ್ ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

2–30 P. M.

ಇನ್ನೂ ಅನೇಕ ಕಡೆಗಳಲ್ಲಿ ಪಿ. ಡಬ್ಲ್ಯು. ಡಿ. ಹಣ ಖರ್ಚಾಗಿರುವುದನ್ನು ನೋಡಿದರೆ, ಕೆಲವು ಎಕ್ಸಿಕ್ಯೂಟೀವ್ ಇಂಜಿನೀಯರ್ಸ್ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆ, ಕೆಲವು ಎಕ್ಸಿಕ್ಯೂಟೀವ್ ಇಂಜಿನೀಯರ್ಸ್ ಸರಿಯಾದ ರೀತಿಯಲ್ಲಿ ಕೆಲಸ ಮಾಡಿಲ್ಲ. ಅದೇ ರೀತಿಯಾಗಿ ಕೆಲವು ಅಸಿಸ್ಟೆಂಟ್ ಇಂಜಿನೀಯರ್ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದ್ದಾರೆ, ಕೆಲವರು ಸರಿಯಾಗಿ ಮಾಡಿಲ್ಲ ಮತ್ತು ಕೆಲವು ಕಡೆ ಸೂಪರಿಂಟೆಂಡೆಂಟ್ ಇಂಜನೀಯರ್‌ರವರ ಜ್ಯೂರಿಸ್‌ಡಿಕ್ಷನ್‌ನಲ್ಲಿ ಪಕ್ಷಪಾತದಿಂದ ಕೆಲಸ ಮಾಡುತ್ತಿದ್ದಾರೆ. ಮತ್ತು ಕೆಲವರು ದುಡ್ಡುಕೊಟ್ಟು ಪ್ಲಾನ್ ಮತ್ತು ಎಸ್ಟಿಮೇಟುಗಳನ್ನು ಸ್ಯಾಂಕ್ಷನ್ ಮಾಡಿಸಿಕೊಂಡಿದ್ದಾರೆ. ಇದನ್ನು ನೋಡಿದರೆ ಪಿ. ಡಬ್ಲ್ಯು. ಡಿ. ಯಲ್ಲಿ ಎಷ್ಟರಮಟ್ಟಿಗೆ ಪಕ್ಷಪಾತ ತಾಂಡವಾಡುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಮಂತ್ರಿಗಳದ್ದೂ ಕೂಡ ಒಮ್ಮೊಮ್ಮೆ ತಪ್ಪಾಗುತ್ತದೆ, ಇಲ್ಲ ಎಂದು ಹೇಳುವುದಿಲ್ಲ. ಮಂತ್ರಿಗಳು ತಮ್ಮ ಅಧಿಕಾರಿಗಳ ಮೇಲೆ ಅಂದರೆ ಚೀಫ್ ಇಂಜನೀಯರ್, ಸೂಪರಿಂಟೆಂಡೆಂಟ್ ಇಂಜನೀಯರ್ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರ್ ಇವರುಗಳು ಅವರವರ ಡಿವಿಷನ್‌ನಲ್ಲಿ ಸರಿಯಾದ ರೀತಿಯಲ್ಲಿ, ಸರಿಸಮನಾದ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು ಮತ್ತು ಅವರು ಆ ಕೆಲಸಗಳನ್ನು ಸರಿಸಮನಾದ ರೀತಿಯಲ್ಲಿ ಹಂಚಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಸರ್ಕಾರದ ಕೆಲಸ ದೇವರ ಕೆಲಸ ಎಂದು ಪ್ರತಿಯೊಬ್ಬ ಪ್ರಜೆಯನ್ನೂ ಕೂಡ ಕಾಪಾಡಬೇಕು,

ರಾಜ್ಯದ 3 ಕೋಟಿ ಜನರನ್ನೂ ಕಾಪಾಡುವಂಥಹ ಒಂದು ಕಾರ್ಯ ಪಿ. ಡಬ್ಲ್ಯು. ಡಿ. ಮಾಡಬೇಕು. ಸರ್ಕಾರದ ಕೆಲಸ ದೇವರ ಕೆಲಸ ಎಂದು ತಿಳಿದುಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲೂ ಯೋಗ್ಯವಾದ ರೀತಿಯಲ್ಲಿ ಆ ಕೆಲಸಗಳು ಸುವ್ಯವಸ್ಥಿತವಾಗಿ ನಡೆಯಲಿ ಎಂದು ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಇಂಜನೀಯರ್ಸ್ ವಿಚಾರ ಹೇಳುವುದಾದರೆ ಅವರುಗಳನ್ನು ತಮ್ಮ ನೇಟಿವ್ ಸ್ಥಳದಲ್ಲೇ ಹಾಕಬಾರದು ಎಂದು ಹೇಳುತ್ತೇನೆ. ಕೆಲವು ಕಡೆ ಅವರವರ ಏರಿಯಾದಲ್ಲಿ ಏನು ಇಟ್ಟಿದ್ದೀರಿ ಅಲ್ಲಿ ಅವ್ಯವಹಾರ ಮಾಡಿದ್ದಾರೆ. ಕೆಲವು ಕಡೆ ಎಕ್ಸಿಕ್ಯೂಟೀವ್ ಇಂಜನೀಯರ್ಸ್ ತಮಗೆ ಬೇಕಾದ ವ್ಯಕ್ತಿಗೆ ಮಣ್ಣಿನ ಕೆಲಸ ಆಸ್ಫಾಲ್ಟ್ ರೋಡ್ ಕೆಲಸಗಳನ್ನು ಕೊಟ್ಟಿದ್ದಾರೆ. ಆ ಕಂಟ್ರ್ಯಾಕ್ಟರ್ ಸರಿಯಾದ ರೀತಿಯಲ್ಲಿ ಕೆಲಸ ಮಾಡದೇ ಇದ್ದರೂ ಕೂಡ ಅವನಿಗೆ ಬಿಲ್ ಮಾಡಿ ಕೊಟ್ಟಿದ್ದಾರೆ. ಆ ಲೋಕಲ್ ಪಾರ್ಟಿ ಸರಿಯಾಗಿ ಕೆಲಸ ಮಾಡದೇ ಇದ್ದರೂ ಅವನಿಗೆ ಸಹಾಯ ಮಾಡುವ ದೃಷ್ಟಿಯಿಂದ ಅವನಿಗೆ ಬಿಲ್ ಪಾಸ್ ಮಾಡಿಕೊಟ್ಟಿದ್ದಾರೆ. ಅವರುಗಳನ್ನು ಏನಾದರೂ ಬೇರೆ ಕಡೆ ವರ್ಗ ಮಾಡಿದರೆ ಆ ವರ್ಗವನ್ನು ಕ್ಯಾನ್ಸಲ್ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸರಿಯಾದ ಒಂದು ಜವಾಬ್ದಾರಿ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಸರ್ಕಾರದ ಮೇಲೆ ಅಪಾದನೆ ಬರುತ್ತದೆ. ಆದುದರಿಂದ ಮೊದಲು ಅಸಿಸ್ಟೆಂಟ್ ಇಂಜನೀಯರ್, ಸೂಪರಿಂಟೆಂಡಿಂಗ್ ಇಂಜನೀಯರ್ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರ್‌ಗಳನ್ನು ಅವರವರ ತಾಲ್ಲೂಕಿನಲ್ಲಿ ಇಡದೇ ನಿರ್ದಾಕ್ಷಿಣ್ಯವಾಗಿ ಹೊರಗಡೆ ಹಾಕಬೇಕು ಎಂದು ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಅನೇಕ ಕಡೆ ಅಸಿಸ್ಟೆಂಟ್ ಇಂಜನೀಯರ್ಸ್, ಸೂಪರಿಂಟೆಂಡಿಂಗ್ ಇಂಜನೀಯರ್ಸ್, ಮತ್ತು ಎಕ್ಸಿಕ್ಯೂಟೀವ್ ಇಂಜನೀಯರ್ಸ್‌ನ್ನು ನೋಡಿದರೆ ಅವರು ಕೋಟ್ಯಾಧೀಶ್ವರರಾಗಿದ್ದಾರೆ, ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿಕೊಂಡಿದ್ದಾರೆ, ಇದನ್ನು ದಯವಿಟ್ಟು ಮಂತ್ರಿಗಳು ಹೋಗಿ ನೋಡಿಕೊಂಡು ಬಂದು ಹೇಳಲಿ. ಹಿಂದಿನ ಕಾಲದಲ್ಲಿ ರಾಜಮಹಾರಾಜರುಗಳು ಯಾವರೀತಿ ಸುಖಲೋಲುಪ್ತರಾಗಿ ಅನುಭವಿಸುತ್ತಿದ್ದರೋ ಆ ರೀತಿಯಾಗಿ ಇವರುಗಳು ಅನುಭವಿಸುತ್ತಿದ್ದಾರೆ ಆದುದರಿಂದ ಇವರ ಮೇಲೆ ಸರಿಯಾದ ಆಕ್ಷನ್ ತೆಗೆದುಕೊಂಡರೆ ತಮಗೆ ಗೊತ್ತಾಗುತ್ತದೆ. ಈವೊತ್ತಿನ ದಿವಸ ಪಿ. ಡಬ್ಲ್ಯು. ಡಿ. ಖಾತೆಯಲ್ಲಿ ಎಷ್ಟು ಹಣ ಸೋರಿ ಹೋಗುತ್ತದೆ ಎಂದರೆ ಯಾವ ಕೆಲಸವನ್ನೇ ತೆಗೆದುಕೊಂಡರೂ ಕೂಡ ಅದರಲ್ಲಿ 20 ಪರ್ಸೆಂಟ್ ಅಷ್ಟು ಹಣ ಈ ಅಧಿಕಾರಿಗಳು ತಿನ್ನುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ಪಿ. ಡಬ್ಲ್ಯು. ಡಿ. ಖಾತೆಯಲ್ಲಿ ಯೋಗ್ಯ ಅಧಿಕಾರಿಗಳು ಇದ್ದಾರೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ ಯಾರು ಕೆಟ್ಟ ಅಧಿಕಾರಿಗಳು ಇರುತ್ತಾರೋ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಆ ಹುದ್ದೆಗೆ ತಜ್ಞರಾದಂಥಾವರನ್ನು ಹಾಕದೇ ಹೋದರೆ ಪರಿಣಾಮ ಕೆಟ್ಟದಾದೀತು ಎಂದು ಹೇಳಬಯಸುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಲೋಕೋಪಯೋಗಿ ಇಲಾಖೆಯ ಬೇಡಿಕೆಯ ವಿಚಾರದಲ್ಲಿ ಕೆಲವು ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಸ್ವಾಮಿ, ಇತ್ತೀಚೆಗೆ ಈ ನೀರುಗಂಟಿ ಹುದ್ದೆಗಳನ್ನು ಸರ್ಕಾರ ರದ್ದು ಮಾಡಿದ ಮೇಲೆ ನೀರಾವರಿ ಕೆರೆಗಳ ನೀರು ಸರಬರಾಜನ್ನು ಮಾಡುವ ಒಂದು ವ್ಯವಸ್ಥೆ ಬಹಳ ಕೆಟ್ಟುಹೋಗಿದೆ. ಈಗ ರೈತರಿಗೆ ಕೆರೆಗಳಿಂದ ನೀರು ಕೊಡತಕ್ಕಂಥ ಸ್ಥಿತಿ ಯಾವರೀತಿ ಇದೆ ಎಂದರೆ ಯಾರು ಪ್ರಭಲವಾದಂಥ ರೈತರು ಇರುತ್ತಾರೋ, ಆ ರೈತರು ತಮಗೆ ಬೇಕಾದ ರೀತಿಯಲ್ಲಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದರಿಂದ ಬಹುತೇಕ ನೀರು ವಿನಾ ಕಾರಣ ವ್ಯರ್ಥವಾಗುವ ರೀತಿಯಲ್ಲಿ ನಷ್ಟವಾಗುತ್ತಾ ಇದೆ. ಸುಮಾರು 4–5 ತಿಂಗಳು ನೀರನ್ನು ಒದಗಿಸುವಂಥ ಕೆರೆಯಲ್ಲಿ ಅದು 2–3 ತಿಂಗಳಿನಲ್ಲೇ ಬರಿದು ಹೋಗಿ ದಾರುಣ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇದ್ದೇವೆ. ಈವೊತ್ತಿನ ದಿವಸ ನೀರುಗಂಟಿ ಹುದ್ದೆ ರದ್ದಾದ ಮೇಲೆ ಅವರುಗಳು ಈಗ ರೈತನೊಡನೆ ಸರಿಯಾಗಿ ಸಹಕರಿಸುತ್ತಾ ಇಲ್ಲ. ಈ ಹುದ್ದೆ ವಂಶಪಾರಂಪರ್ಯವಾಗಿ, ಪರ್ಯಾಯವಾಗಿ ಇರತಕ್ಕಂಥಾದ್ದು. ಈ ಹುದ್ದೆ ರದ್ದಾದಮೇಲೆ ಈ ಬಗ್ಗೆ ಬೇರೆ ವ್ಯವಸ್ಥೆ ಮಾಡಬೇಕಾಗಿತ್ತು. ಈ ವ್ಯವಸ್ಥೆಯನ್ನು ಮಾಡದೇ ಹೋಗಿರುವ ಕಾರಣ ಈವೊತ್ತಿನ ದಿವಸ ಎಲ್ಲಾ ಕೆರೆಗಳಲ್ಲೂ ಕೂಡ ಈ ಕೆರೆಗಳ ನೀರನ್ನು ಪ್ರಭಾವಶಾಲಿಗಳಾದ ರೈತರು ಬೇಕು ಬೇಕಾದ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆ. ಮತ್ತು ಈ ಲೋಕೋಪಯೋಗಿ ಇಲಾಖೆಯೂ ಕೂಡ ಯಾವ ಒಂದು ವಿಧವಾದ

(ಶ್ರೀ ಎಚ್. ಟಿ. ಕೃಷ್ಣಪ್ಪ)

ಹತೋಟಿಯನ್ನೂ ಕೂಡ ಇಟ್ಟುಕೊಳ್ಳುವಂಥ ಸ್ಥಿತಿ ಬಂದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಈವೊತ್ತಿನ ದಿವಸ ಅಸಿಸ್ಟೆಂಟ್ ಇಂಜನೀಯರನ್ನು ಈ ಕೆರೆಗಳಿಗೆ ನೀರನ್ನು ಒದಗಿಸುವಂಥಾ ಕೆಲಸವನ್ನು ಸಮರ್ಪಕವಾದ ರೀತಿಯಲ್ಲಿ ಮಾಡಿ ಎಂದು ಕೇಳಿದ್ದರೆ ನಮಗೆ ಇನ್ನೂ ಕೂಡ ಸರ್ಕಾರ ದವರು ಸೌಡಿಗಳನ್ನು ನೇಮಕ ಮಾಡಿಕೊಟ್ಟಿಲ್ಲ. ಮತ್ತು ನೀರನ್ನು ಇಂಥಾ ದಿವಸವೇ ಬಿಡಬೇಕು, ಇಂಥಾ ದಿವಸವೇ ನಿಲ್ಲಿಸಬೇಕು ಎಂದು ಹೇಳಿಲ್ಲ ಎಂದು ಹೇಳುತ್ತಾರೆ. ಮತ್ತು ಯಾವ ಕಾಲದಲ್ಲಿ, ಯಾವ ಭಾಗದಲ್ಲಿ ಎಷ್ಟು ನೀರನ್ನು ಒದಗಿಸಬೇಕು ಎನ್ನುವುದರಲ್ಲಿ ಸರಿಯಾಗಿ ಈ ನೌಕರರನ್ನು ನೇಮಕ ಮಾಡದೇ ಇರುವುದರಿಂದ ಯಾವರೀತಿಯಾದ ಸಹಕಾರವನ್ನು ಮಾಡುವುದಕ್ಕೆ ಅಸಾಧ್ಯವಾಗಿದೆ ಎಂದು ಹೇಳುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಸಮಾಲೋಚನಾ ಸಮಿತಿಗಳು ಏನು ಇವೆ ಅಂದರೆ ಕನ್‌ಸಲ್‌ಟೇಟೀವ್ ಎಂದು ಏನು ಕರೆಯುತ್ತೇವೋ ಆ ಕಮಿಟಿಗಳವರು ಅನೇಕ ಬಾರಿ ನಿರ್ಣಯ ಮಾಡಿ ಸೌಡಿಗಳನ್ನು ನೇಮಕ ಮಾಡಬೇಕು ಇಲ್ಲದೇ ಹೋದರೆ ವ್ಯರ್ಥವಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ಅನೇಕಬಾರಿ ತಂದಿದ್ದಾರೆ. ಆದುದರಿಂದ ಸರ್ಕಾರದವರು ಸಕಾಲದಲ್ಲಿ ಇದಕ್ಕೆ ಆಸ್ತೆ ವಹಿಸಿ ಸೌಡಿಗಳನ್ನು ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಮಾಡದೇ ಹೋದರೆ ನೀವು ಇಷ್ಟು ಹಣ ಖರ್ಚು ಮಾಡಿ ಎಷ್ಟು ಕೆರೆಗಳನ್ನು ಕಟ್ಟಿದರೂ ಕೂಡ ಆ ನೀರು ಸರಿಯಾದ ರೀತಿಯಲ್ಲಿ ಉಪಯೋಗಿಸದೇ ಹೋದರೆ ಬೆಳೆಗಳು ನಷ್ಟವಾಗುತ್ತವೆ. ಈಗಲಾದರೂ ಕೂಡ ಸರ್ಕಾರ ಅರಿತುಕೊಂಡು ಕೂಡಲೇ ಸೌಡಿಗಳನ್ನು ನೇಮಕ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ತಾಲ್ಲೂಕಾ ಮಟ್ಟದಲ್ಲಿ ಏನು ಸಮಾಲೋಚನಾ ಸಮಿತಿಗಳು ಇವೆ ಅಂದರೆ ಕನ್‌ಸಲ್‌ಟೇಟೀವ್ ಕಮಿಟಿ ಎಂದು ಏನು ಕರೆಯುತ್ತೇವೋ ಅದು ಈಗ ನಾಮಕಾವಸ್ತೆ ಕಮಿಟಿಗಳಾಗಿವೆ. ಏತಕ್ಕೆಂದರೆ ಅವರು ಏನು ನಿರ್ಣಯ ಮಾಡುತ್ತಾರೋ ಉದಾಹರಣೆಗೆ ಇಂತಹ ಕೆರೆಯಲ್ಲಿ ಇಷ್ಟು ನೀರು ಇದೆ, ರೈತರು ಇದರಲ್ಲಿ ಇಂತಹ ಬೆಳೆಯನ್ನು ಹಾಕಿದರೆ ಆ ಬೆಳೆ ಕೈಗೂಡುತ್ತದೆ ಎನ್ನುವ ಒಂದು ನಿರ್ಣಯವನ್ನು ಅಸಿಸ್ಟೆಂಟ್ ಇಂಜನೀಯರ ರವರ ಅಭಿಪ್ರಾಯ ಮತ್ತು ವ್ಯವಸಾಯ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಿದರೆ ಅದು ಜಾರಿಗೆ ತರುವಂಥ ಕಾಲದಲ್ಲಿ ಆ ನಿರ್ಣಯವನ್ನು ಉಲ್ಲಂಘನೆ ಮಾಡುತ್ತಾರೆ. ಯಾರು ಆ ರೀತಿ ಉಲ್ಲಂಘನೆ ಮಾಡುತ್ತಾರೋ ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಯಾವ ಅಧಿಕಾರವನ್ನೂ ಆ ಕಮಿಟಿಗೆ ಕೊಟ್ಟಿಲ್ಲ. ಆ ರೀತಿ ಅಧಿಕಾರ ಕೊಡದೇ ಇರುವುದರಿಂದ ಅವುಗಳು ನಾಮಕಾವಸ್ತೆ ಕಮಿಟಿಗಳಾಗಿವೆ. ಆದುದರಿಂದ ಈಗಲಾದರೂ ಕೂಡ ರೈತರಿಗೆ ಅನುಕೂಲವಾಗುವ ದೃಷ್ಟಿಯಿಂದ ಇರ್ರಿಗೇಷನ್ ಆಕ್ಟ್ ಪ್ರಕಾರ ಈ ನಿಯಮವನ್ನು ಯಾರು ಉಲ್ಲಂಘನೆ ಮಾಡುತ್ತಾರೋ ಅಂಥಾವರ ಮೇಲೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಆ ಕಮಿಟಿಗಳಿಗೆ ಅಧಿಕಾರ ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಚಾರದಲ್ಲಿ ಹೇಳುವುದಾದರೆ, ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ರೈತ ಬೆಳೆಯನ್ನು ತೆಗೆಯಬೇಕು. ಇದಕ್ಕೆ ಅವನು ಬಾವಿ ತೋಡಿಸಬೇಕು ಮತ್ತು ಭೂಮಿಯನ್ನು ಮಟ್ಟ ಮಾಡಬೇಕು. ಅದಕ್ಕೆ ಪೂರ್ವಭಾವಿಯಾಗಿ ಅನೇಕ ವಿಧವಾದ ಸಾಲವನ್ನು ಪಡೆದು, ಬಡ್ಡಿ ರೂಪದಲ್ಲಿ ಬಹಳ ಹಣವನ್ನು ವರ್ಷಂಪ್ರತಿ ಕೊಡಬೇಕು. ಇಂಥದ್ದರಲ್ಲಿ ವಿದ್ಯುಚ್ಛಕ್ತಿ ದರವನ್ನೂ ಹೆಚ್ಚು ಮಾಡಿರುವುದರಿಂದ ವ್ಯವಸಾಯ ಲಾಭದಾಯಕವಾದ ಉದ್ಯೋಗವಾಗುವುದಕ್ಕೆ ಸಾಧ್ಯವಿಲ್ಲ. ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ವ್ಯವಸಾಯ ಮಾಡತಕ್ಕ ರೈತನ ಬಗ್ಗೆ ಸರ್ಕಾರ ಸ್ವಲ್ಪಮಟ್ಟಿಗೆ ದಯೆ ತೋರಬೇಕು, ಸಹಾನುಭೂತಿ ತೋರಬೇಕು ಮತ್ತು ವಿದ್ಯುಚ್ಛಕ್ತಿ ದರವನ್ನು ಕಡಮೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀರಾವರಿ ಸೌಲಭ್ಯಗಳನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕ ಪ್ರದೇಶಗಳಾದ, ಬೆಂಗಾಡು ಪ್ರದೇಶಗಳಾದ, ಕೃಷ್ಣರಾಜಪೇಟೆ, ನಾಗಮಂಗಲ ತಾಲ್ಲೂಕು ಇತ್ಯಾದಿ ಭಾಗಗಳಿಗೆ ದೊಡ್ಡ ನೀರಾವರಿ ಯೋಜನೆಯಾದ ಹೇಮಾವತಿಯಿಂದ ನೀರು ತರತಕ್ಕ ಕೆಲಸವನ್ನು ಆದಷ್ಟು ಜಾಗ್ರತೆ ಸರ್ಕಾರದವರು ಮಾಡಬೇಕೆಂದು ಪದೇ ಪದೇ ಹೇಳುತ್ತಿದ್ದೇವೆ. ಈ ಯೋಜನೆ ಪ್ರಾರಂಭ ವಾದ ಕಾಲದಲ್ಲಿ ಎರಡನೇ ಹಂತದಲ್ಲಿ ನಾಗಮಂಗಲ ಭಾಗಕ್ಕೆ ನೀರನ್ನು ಕೊಡಬೇಕೆಂದು ಉದ್ದೇಶಿಸಲಾಗಿದೆ ಎಂದು ತಿಳಿದು ಬಂದಿದೆ. ಆದರೆ ಇತ್ತೀಚೆಗೆ ನಾಗಮಂಗಲ ತಾಲ್ಲೂಕಿಗೆ

ಎರಡನೇ ಸ್ಥಾನವನ್ನು ಕೊಟ್ಟು ಪ್ರಥಮಸ್ಥಾನವನ್ನು ತುಮಕೂರು ಜಿಲ್ಲೆಯ ಭಾಗಗಳಿಗೆ ಕೊಡಬೇಕೆಂದು ಯೋಚಿಸಿರುವ ಹಾಗೆ, ಸರ್ಕಾರದ ಪರವಾಗಿ ಮಂತ್ರಿಗಳು ಅಲ್ಲಲ್ಲಿ ಕೊಡತಕ್ಕ ಹೇಳಿಕೆಗಳಿಂದ ಭಾಸವಾಗುತ್ತಿದೆ. ಇದು ಬಹಳ ಅನ್ಯಾಯ. ಮಳೆ ಬಹಳ ಕಡಮೆ ಬೀಳತಕ್ಕ ಭಾಗ, ಆರ್ಥಿಕವಾಗಿ ಹಿಂದುಳಿದಿರತಕ್ಕ ಭಾಗ ನಾಗಮಂಗಲ ತಾಲ್ಲೂಕು. ಆ ಭಾಗಕ್ಕೆ ನೀರನ್ನು ಕೊಡದೆ, ಆ ಜನರನ್ನು ವಂಚಿಸಿ ಆರ್ಥಿಕವಾಗಿ ಮುಂದುವರಿದ ಭಾಗಗಳಿಗೆ ನೀರನ್ನು ಕೊಡತಕ್ಕ ಪ್ರಯತ್ನದಿಂದ ಸಾಮಾಜಿಕ ನ್ಯಾಯವನ್ನು ಇವರು ಕೊಟ್ಟ ಹಾಗೆ ಆಗುವುದಿಲ್ಲ. ನಾಗಮಂಗಲ ತಾಲ್ಲೂಕಿಗೆ ಆದ್ಯತೆಯನ್ನು ಕೊಟ್ಟು ಹೇಮಾವತಿ ಯೋಜನೆಯಿಂದ ನೀರನ್ನು ಅಲ್ಲಿಗೆ ಒದಗಿಸಿಕೊಡಬೇಕೆಂದು ಸರ್ಕಾರದಲ್ಲಿ ವಿನಮ್ರಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕ್ಷಾಮ ಪರಿಹಾರ ನಿಧಿಯಿಂದ ಕಾಮಗಾರಿಗಳನ್ನು ಮಾಡತಕ್ಕ ಕಾಲದಲ್ಲಿ ಕಳೆದ ವರ್ಷ ಭಾರಿ ಅನ್ಯಾಯವಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ವರ್ಷಪೂರ್ತಿ ಮೂರು ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ. ಅದೇ ಪಕ್ಕದ ತಾಲ್ಲೂಕಾದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 15 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಆರ್ಥಿಕವಾಗಿ ಮುಂದುವರಿದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈಗ ಆರ್ಥಿಕವಾಗಿ ಹಿಂದುಳಿದಿರತಕ್ಕ ನಾಗಮಂಗಲ ತಾಲ್ಲೂಕಿನಲ್ಲಿ ಮೂರು ಲಕ್ಷ ಮಾತ್ರ ಒದಗಿಸಿರುವುದಕ್ಕೆ ಕಾರಣವೇನು? ಇದು ಯಾವ ನ್ಯಾಯ? ಈ ಪಕ್ಷಪಾತಕ್ಕೆ ಕಾರಣವೇನು? ಇದಕ್ಕೆ ಕಾರಣವನ್ನು ನಾನು ಹೇಳತಕ್ಕದ್ದು ಶ್ರೀಮಾನ್ ನಂಜೇಗೌಡರು ತಮ್ಮ ಕ್ರಿಯಾಶಕ್ತಿಯಿಂದ ತಮ್ಮ ಜಿಲ್ಲೆಯಲ್ಲಿ ಹೆಚ್ಚು ಕೆಲಸ ಮಾಡಿಸಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಕೆಲಸ ಬಹಳ ಕಡಮೆ ಆಗಿರುವುದಕ್ಕೆ ಮಂಡ್ಯ ಜಿಲ್ಲೆಯ ಪ್ರತಿನಿಧಿಗಳು ಸಾಕಾದಷ್ಟು ಆಸಕ್ತಿ ವಹಿಸಿಲ್ಲ ಎಂದು ಮಾತ್ರ ಹೇಳಬೇಕಾಗುತ್ತದೆ. ನಾಗಮಂಗಲ ತಾಲ್ಲೂಕಿಗೆ ಆಗಿರುವ ಅನ್ಯಾಯವನ್ನು ಇನ್ನು ಮುಂದೆ ತೆಗೆದುಕೊಳ್ಳುವ ಕ್ಷಾಮ ಪರಿಹಾರ ನಿಧಿಯ ಕಾಮಗಾರಿಗಳಲ್ಲಿ ಸರಿಪಡಿಸಬೇಕು, ಆಗಿರತಕ್ಕ ಕೊರತೆಯನ್ನು ಸರ್ಕಾರ ಭರ್ತಿ ಮಾಡಿಕೊಡಬೇಕೆಂದು ಎಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷಿಣಿಯವರೇ, ಲೋಕೋಪಯೋಗಿ ಖಾತೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮೈಸೂರು ರಾಜ್ಯದಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಅವುಗಳನ್ನು ಕಾರ್ಯರೂಪದಲ್ಲಿ ತರುತ್ತೇವೆ ಎಂದು ಅನೇಕ ವಿಧದಲ್ಲಿ ಮಾನ್ಯ ಮಂತ್ರಿಗಳು ತಿಳಿಸಿದ್ದು ಸರಿಯಷ್ಟೆ. ಆದರೆ ಅನೇಕ ಕೆಲಸಗಳು ಸಂಪೂರ್ಣವಾಗಿ ಕಾರ್ಯಗತವಾಗದೆ ಇರತಕ್ಕ ಪರಿಸ್ಥಿತಿಯನ್ನು ನೋಡಿ ನನಗೆ ತುಂಬ ವಿಷಾದವಾಗುತ್ತದೆ. ಹಳೇ ಮೈಸೂರು, ಹೊಸ ಮೈಸೂರು ಎನ್ನತಕ್ಕ ಅಭಿಪ್ರಾಯ ನಮ್ಮ ಸರ್ಕಾರದಲ್ಲಿದ್ದರೆ ಅದು ತಪ್ಪಾಗುತ್ತದೆ. ಹಳೇ ಮೈಸೂರಿನ ಕಡೆ ಹೆಚ್ಚಿನ ಕೆಲಸವಾಗಿಲ್ಲ, ನಿಂತುಹೋಗಿದೆ ನಡೆಯುತ್ತಿದ್ದ ಕೆಲಸಗಳೂ ನಿಂತು ಹೋಗಿವೆ ಎನ್ನುವ ಅಭಿಪ್ರಾಯ ಜನಗಳಲ್ಲಿ ಮೂಡಿದೆ. ನಮ್ಮ ಸರ್ಕಾರದವರು ಎಚ್ಚೆತ್ತುಕೊಂಡು ಎಲ್ಲೆಲ್ಲಿ ಸಣ್ಣ ನೀರಾವರಿ ಯೋಜನೆಗಳು ಪೂರೈಸದೇ ನಿಂತುಹೋಗಿವೆ, ಅದಕ್ಕೆ ಕಾರಣಗಳೇನು ಎಂದು ತಿಳಿದುಕೊಂಡು ಅತಿ ಜಾಗ್ರತೆಯಾಗಿ ಅವುಗಳನ್ನು ಪೂರೈಸಬೇಕಾಗಿದೆ ಎನ್ನುವ ಅಭಿಪ್ರಾಯವನ್ನು ನಾನು ಸೂಚಿಸುತ್ತೇನೆ. ಅದರಲ್ಲಿ ನಾನು ಮುಖ್ಯವಾಗಿ ಹೇಳುವುದಾದರೆ ಬೆಂಗಳೂರು ಜಿಲ್ಲೆ ಸಣ್ಣ ನೀರಾವರಿ ಯೋಜನೆಗಳಲ್ಲಿ ಬಹಳ ಹಿಂದುಳಿದಿರತಕ್ಕ ಜಿಲ್ಲೆ. ಬೆಂಗಳೂರಿಗೆ ನೀರು ಒದಗಿಸಬೇಕಾದ ಯೋಜನೆಗಳೇನಿವೆ, ಈ ಜಿಲ್ಲೆಯಲ್ಲಿ ವ್ಯವಸಾಯಕ್ಕೆ ಬೇಕಾದ ನೀರಿನ ಉಪಯೋಗಕ್ಕೆ, ಅಗತ್ಯವಾದ ಯೋಜನೆಗಳು ಸಂಪೂರ್ಣವಾಗಿ ನಿಂತುಹೋಗಿವೆ. ಅನೇಕ ವರ್ಷಗಳ ಹಿಂದೆ ಅರ್ಕಾವತಿ ನದಿ ಪ್ರದೇಶದಲ್ಲಿ ಯಾವ ನೀರಾವರಿ ಯೋಜನೆಗಳನ್ನೂ ತೆಗೆದುಕೊಳ್ಳಬಾರದು ಎನ್ನತಕ್ಕ ನಿಬಂಧನೆ ಏನು ಹಾಕಿದ್ದಾರೆ ಅದನ್ನು ಅತಿ ಜಾಗ್ರತೆಯಾಗಿ ತೆಗೆದು ಹಾಕಬೇಕಾಗಿದೆ. ಈಗಾಗಲೇ ಬೆಂಗಳೂರಿಗೆ ನೀರು ಸರಬರಾಜು ಆಗತಕ್ಕ ಕಾವೇರಿ ಯೋಜನೆ ಏನಿದೆ ಅದು ಸಂಪೂರ್ಣಗೊಳ್ಳುವುದರಲ್ಲಿರುವುದರಿಂದ ಅದಷ್ಟು ಜಾಗ್ರತೆ ಈ ಒಂದು ನಿಬಂಧನೆಯನ್ನು ತೆಗೆದು ಹಾಕಿ ಸಣ್ಣ ನೀರಾವರಿ ಯೋಜನೆಗಳಿಗೆ ಪ್ರೋತ್ಸಾಹ ಕೊಡಬೇಕಾದ್ದು ಬಹಳ ಅಗತ್ಯವಾಗಿದೆ. ಅದರಲ್ಲಿ ನನ್ನದೇ ತಾಲ್ಲೂಕಿನ ವಿಚಾರವಾಗಿ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದಲೂ ಸುಮಾರು 10 ಸಣ್ಣ ನೀರಾವರಿ ಕೆಲಸಗಳು ನಿಂತು ಹೋಗಿವೆ. ಅದಕ್ಕೆ ಕಾರಣವೇನು ಎನ್ನುವುದನ್ನು ಸರ್ಕಾರ ಹೇಳುವುದಕ್ಕೆ ಸಾಧ್ಯವಿಲ್ಲ. ಅವರು ಒಂದು ನೆಪ ಹೇಳುತ್ತಾರೆ, ಕಂಟ್ರಾಕ್ಟರುಗಳು ಮುಂದೆ ಬರುತ್ತಿಲ್ಲವಾದುದರಿಂದ ಕೆಲಸ ನಿಂತು ಹೋಗಿದೆ ಎಂದು. ಅದನ್ನು ನಾನು ಒಪ್ಪುವುದಿಲ್ಲ. ಕಂಟ್ರಾಕ್ಟರು

(ಶ್ರೀ ಜಿ. ರಾಮೇಗೌಡ)

ಗಳು ಮುಂದೆ ಬರಂದೆ ಇರುವುದಕ್ಕೆ ಕಾರಣ ಸರ್ಕಾರದವರು ಟೆಂಡರ್‌ಗಳ ವಿಚಾರವಾಗಿ ಏನು ಧೋರಣೆಯನ್ನು ತೆಗೆದುಕೊಂಡಿದ್ದಾರೆ, ಏನು ಪಾಲಿಸಿ ಹಾಕಿದ್ದಾರೆ, ಅವರಿಗೆ ಕೊಡಬೇಕಾದ ರೇಟ್ ಏನಿದೆ ಅದನ್ನು ಸಮಂಜಸವಾಗಿ ಕೊಡುತ್ತಾರೆಯೋ ಇಲ್ಲವೋ ಎನ್ನುವ ಅನುಮಾನ ಇರುವುದರಿಂದ ಕಂಟ್ರಾಕ್ಟರುಗಳು ಮುಂದೆ ಬರುತ್ತಿಲ್ಲ. ಆದುದರಿಂದ ಒಂದೊಂದು ತಾಲ್ಲೂಕಿನಲ್ಲಿ 10-15 ಯೋಜನೆಗಳು ನಿಂತು ಹೋಗುವ ಸಂದರ್ಭವಿರುವುದರಿಂದ ಸರ್ಕಾರ ಸ್ವಲ್ಪ ಆಲೋಚನೆ ಮಾಡಿ ನೋಡಬೇಕು. ಕಳೆದ ವರ್ಷ ಮಂಜೂರಾದ ಕೆಲಸಗಳನ್ನು ಈ ಹೊತ್ತಿಗೂ ಕೂಡ ಒಬ್ಬ ಕಂಟ್ರಾಕ್ಟರನ್ನು ಪಡೆದು ಮಾಡತಕ್ಕ ವ್ಯವಸ್ಥೆಯನ್ನು ನಮ್ಮ ಲೋಕೋಪಯೋಗಿ ಇಲಾಖೆ ನಡೆಸುತ್ತಿಲ್ಲ. ಇದು ಬಹಳ ಶೋಚನೀಯವಾದುದು. ಸಂಬಂಧಪಟ್ಟ ಮಂತ್ರಿಗಳು ಈ ಬಗ್ಗೆ ತುಂಬ ಆಲೋಚನೆಮಾಡಬೇಕು. ಶ್ರೀಮಾನ್ ಚನ್ನಬಸಪ್ಪನವರು ಈ ಖಾತೆಯನ್ನು ವಹಿಸಿಕೊಂಡಾಗ ನನಗೆ ಬಹಳ ಸಂತೋಷವಾಯಿತು. ಅವರೂ ರೈತರಿಗೆ ಅಸಂತೋಷವಾಗಿರುವಂಥ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಪರಮಾತ್ಮನ ಕೃಪೆಯಿಂದ ಆಕಾಶದಿಂದ ಭೂಮಿಯ ಮೇಲೆ ಬೀಳತಕ್ಕ ಪ್ರತಿಯೊಂದು ಹನಿಯನ್ನೂ ನಾನು ಅಡ್ಡಗಟ್ಟಿ ರೈತನಿಗೆ ಉಪಯೋಗವಾಗುವಂತೆ ಮಾಡತ್ತೇನೆ. ಇದರಲ್ಲಿ ಯಾವ ಭೀತಿಯನ್ನೂ ಪಡಬೇಕಾಗಿಲ್ಲ, ನಾನೇ ಸರಿಯಾದ ವ್ಯವಸ್ಥೆ ಮಾಡಿ ಕೆರೆ ಕಟ್ಟೆ ಮುಂತಾದುವು ರಿಪೇರಿ ಆಗುವುದಿದ್ದರೆ ಅದನ್ನೂ ಮಾಡಿಸಿ ರೈತರಿಗೆ ಆನಂದವಾಗುವ ಹಾಗೆ ಮಾಡಿಸಿಕೊಡುತ್ತೇನೆ ಎಂದು ಹೇಳುತ್ತಿದ್ದರು. ಬಹುಶಃ ಅವರು ಬಂಗಾಲ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರುವುದರಿಂದ ಅವರು ಹೇಳಿದ ಮಾತಿನ ಕಡೆಗೆ ಗಮನ ಕೊಡುತ್ತಿಲ್ಲ ಎಂದು ನನಗನ್ನಿಸುತ್ತದೆ. ಶ್ರೀಮಾನ್ ನಂಜೇಗೌಡರೂ ಅಷ್ಟೇ. ಅವರು ಮಂತ್ರಿಗಳಾವುದಕ್ಕೆ ಮುಂಚೆ ಬಹಳ ಆಸಕ್ತಿಯಿಂದ ಸಣ್ಣ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡಬೇಕು. ರೈತರಿಗೆ ಉಪಯೋಗವಾಗುವಂಥ ಸಣ್ಣ ಸಣ್ಣ ಯೋಜನೆಗಳನ್ನು ಮಾಡಿದ್ದೇ ಆದರೆ ದೊಡ್ಡ ನೀರಾವರಿ ಯೋಜನೆಗಳಿಗಿಂತ ಹೆಚ್ಚು ಉಪಯೋಗ ಜನರಿಗೆ ಇದರಿಂದ ಆಗುತ್ತದೆಂದು ಹೇಳುತ್ತಿದ್ದರು. ಅವರೂ ಕೂಡ ಇದರಲ್ಲಿ ಈಗ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಅವರಿಗೆ ಏನು ತೊಂದರೆಯಾಗಿದೆಯೋ ಗೊತ್ತಿಲ್ಲ, ಅವರ ಖಾತೆಗೆ ಹೆಚ್ಚು ಗಮನ ಕೊಡುತ್ತಿದ್ದಾರೆಯೋ ಏನು ಗೊತ್ತಿಲ್ಲ. ಸರ್ಕಾರ ಸಣ್ಣ ನೀರಾವರಿ ಯೋಜನೆಗಳಿಗೆ ಎಲ್ಲೆಲ್ಲಿ ಮಂಜೂರಾತಿಯನ್ನು ಕೊಟ್ಟಿದೆ ಅಲ್ಲಿ ಇನ್ನು ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಆ ಕಾರ್ಯಗಳನ್ನು ಮುಗಿಸತಕ್ಕ ಯೋಚನೆ ಮಾಡಬೇಕು. ಅದನ್ನು ಮಾಡದೆ ಇದ್ದರೆ ಜನಗಳು ಹಿಂದೆ ಇದ್ದ ಹಾಗೆ ಇಲ್ಲ, ಜಾಗೃತಿ ಹೊಂದಿದ್ದಾರೆ. ಸರ್ಕಾರ ಅವರ ಕಷ್ಟವನ್ನು ನೋಡುವುದಿಲ್ಲ ಎನ್ನುವ ಅಭಿಪ್ರಾಯ ಬಂದರೆ ಅವರು ಜಾಗೃತರಾಗಿ ಆದಷ್ಟು ಬೇಗ ಒಗ್ಗಟ್ಟಿನಿಂದ ಸಣ್ಣ ನೀರಾವರಿ ಯೋಜನೆಗಳು ಆಗಲೇಬೇಕು ಎನ್ನುವ ತರಹ ಹೇಳತಕ್ಕ ಪರಿಸ್ಥಿತಿ ಬಂದೀತು ಎನ್ನುವ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಅದರಲ್ಲೂ ಇನ್ನು ರೋಡ್ಸ್ ಅಂಡ್ ಕಮ್ಯೂನಿಕೇಷನ್ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ಮಂತ್ರಿಗಳು ಒಂದೊಂದು ತಾಲ್ಲೂಕಿನಲ್ಲೂ 50 ಮೈಲಿ ದೂರದ ರಸ್ತೆಗಳನ್ನು ಮಂಜೂರು ಮಾಡಿದ್ದೇವೆ ಎಂದು ಎಷ್ಟು ವೇಗದಿಂದ ಕಳೆದ ಬಾರಿ ಹೇಳಿದರೋ ಅಷ್ಟೆ ವೇಗದಲ್ಲಿ ಅ ಕೆಲಸಗಳು ನಿಂತು ಹೋಗಿವೆ. ಮಾಡಬೇಕಾದಂಥ ಸಣ್ಣ ಸಣ್ಣ ಮೋರಿಗಳ ಕೆಲಸಗಳನ್ನೂ ಕೂಡ ಮಾಡಿಲ್ಲ. ಇದರಿಂದ ಅಲ್ಲಿಗೆ ಗಾಡಿಗಳು, ವಾಹನಗಳು ಹೋಗುವ ಪರಿಸ್ಥಿತಿ ಇಲ್ಲ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಅವರು ಎಷ್ಟು ಉತ್ಸಾಹದಿಂದ ಇದನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದರೋ ಅಷ್ಟೆ ಉತ್ಸಾಹದಿಂದ ಈ ಕೆಲಸವನ್ನು ಜಾಗ್ರತೆ ಮಾಡುವ ವ್ಯವಸ್ಥೆ ಆಗಬೇಕು. ಇದನ್ನು ಅಸಡ್ಡೆಯಿಂದ ನೋಡುವುದಾದರೆ ನಿಮ್ಮ ಯೋಜನೆಗಳು ಏನೂ ಕಾರ್ಯರೂಪಕ್ಕೆ ಬರುವುದಿಲ್ಲ ಎಂದು ಜನತೆಯಲ್ಲಿ ಒಂದು ಅಭಿಪ್ರಾಯ ಮೂಡುತ್ತದೆ. ಆದುದರಿಂದ ಈ ಬಡ್ಜೆಟ್ಟಿನಲ್ಲಿ ಮಜೂರಾತಿಯಾದಂಥ ಎಲ್ಲಾ ಕಾರ್ಯಕ್ರಮಗಳನ್ನೂ ಕೂಡ ಆದಷ್ಟು ಜಾಗ್ರತೆ ಪೂರೈಸುವುದಕ್ಕೆ ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆಗಳ ನಿರ್ಮಾಣದಲ್ಲಿ ಅನೇಕ ರಸ್ತೆಗಳು ಕಳೆದ 5 ವರ್ಷದಿಂದಲೂ ಸರ್ಕಾರದ ಒಂದು ಮಿತಿಗೆ ಹೋಗಿದ್ದರೂ ಕೂಡ ಅದರ ರಿಪೇರಿ ಕೆಲಸ ಆಗದೇ ಇರುವುದರಿಂದ ಇದರಲ್ಲಿ ಅಸಡ್ಡೆ ಪಟ್ಟಿದ್ದಾರೆಂದು ಗೊತ್ತಾಗುತ್ತದೆ. ಆದುದರಿಂದ ನಿಮ್ಮ ಯೋಜನೆಗಳು ದೊಡ್ಡದಾಗಿ ಇರಬಹುದು. ಆದರೆ ಈ ರಸ್ತೆಗಳ ಸಮಂಜಸವಾಗಿ ಕೆಲಸ ಮಾಡದೇ ಹೋದರೆ ಇದರಲ್ಲಿ ಜನಸಾಮಾನ್ಯರಿಗೆ ಇರತಕ್ಕಂಥ ಒಂದು ಆನಂದ, ಒಂದು ಅನುಕೂಲತೆ ದೊರೆಯದೇ ಹೋದರೆ

ನಿಮ್ಮ ಯೋಜನೆಗಳಿಗೂ ಬೆಲೆ ಇಲ್ಲ ಎಂದ ತಿಳಿದುಕೊಳ್ಳಬೇಕು ಎಂದು ನನಗೆ ಅನ್ನಿಸುತ್ತದೆ. ಆದುದರಿಂದ ಬಹಳಮಟ್ಟಿಗೆ ಚಿಪ್‌ಕಾರ್ಪೆಟಿಂಗ್ ಏನು ಇದೆ ಅದರ ಬಗ್ಗೆ ಗಮನಕೊಟ್ಟರೆ ಬಹುಶಃ ಅವಕ್ಕೆ ಹೆಚ್ಚಿನ ಕಂಟ್ರಾಕ್ಟರ್ಸ್ ಮುಂದೆ ಬರುತ್ತಾರೆ. ಅವರಿಗೆ ಇದರಲ್ಲಿ ಒಂದು ಆಸಕ್ತಿ ಬರುವ ಹಾಗೆ ಮಾಡಬೇಕು. ಅದರಲ್ಲೂ ಗ್ರಾಮಾಂತರ ಕಡೆ ಈ ಬಗ್ಗೆ ಒಂದು ಹೆಚ್ಚಿನ ಗಮನ ಕೊಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಎಂ. ಎಸ್. ಇ. ಬಿ. ಬೋರ್ಡ್ ವಿಚಾರದಲ್ಲಿ ಒಂದೆರಡು ಮಾತನಾಡಲು ಬಯಸುತ್ತೇನೆ. ಇವರು ನಮ್ಮ ರೈತರನ್ನು ಶೋಷಣೆ ಮಾಡುವುದರಲ್ಲಿ ವಿಶೇಷವಾಗಿ ಆಸಕ್ತಿ ವಹಿಸಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ ಇವರು ಯಾವ ಅಂದಾಜುಗಳನ್ನು ತಯಾರು ಮಾಡಿದರೂ ಕೂಡ ರೈತರ ಶೋಷಣೆ ಇದ್ದೇ ಇದೆ. ಇವರು ರೈತರಿಗೆ 5 ಹೆಚ್.ಪಿ. ಮೋಟಾರನ್ನು ಮಂಜೂರು ಮಾಡುವುದಕ್ಕೂ ಕೂಡ ಹೆಚ್ಚಿನ ಅಶ್ವ ಶಕ್ತಿಯನ್ನು ಉಪಯೋಗಿಸಬೇಕಾದರೆ ಹೆಚ್ಚಿನ ಮುಂಗಡವನ್ನು ಕೊಡಬೇಕು ಎಂದು ಮಾಡಿದ್ದಾರೆ. ಇದನ್ನು ತಮ್ಮ ಗಮನಕ್ಕೂ ತರುತ್ತೇನೆ ಮತ್ತು ಇಲಾಖೆಯವರೂ ಕೂಡ ಗಮನಿಸಬೇಕು. ಇವರ ಒಂದು ಅಂದಾಜು ಯಾವುದೂ ಸರಿಯಾಗಿರುವುದಿಲ್ಲ. ವಿದ್ಯುಚ್ಛಕ್ತಿ ಸರಬರಾಜು ನೋಡಿದರೆ ಒಂದು ದಿವಸಕ್ಕೆ 4-5 ದಪ ನಿಂತು ಹೋಗುತ್ತದೆ. ಇದರಿಂದ ರೈತರು ಬಹಳ ಕಷ್ಟಪಡುತ್ತಾರೆ. ಹೇಗೆಂದರೆ ಉತ್ತಮವಾದ ಬೆಳೆ ಬರತಕ್ಕಂಥಾ ಕಾಲದಲ್ಲಿ ದಿನಾಲೂ ವಿದ್ಯುಚ್ಛಕ್ತಿ ನಿರಂತರವಾಗಿ ದೊರೆಯದೇ ಹೋದರೆ ರೈತರಿಗೆ ಅವರ ಬೆಳೆಯಿಂದ ಎಷ್ಟು ನಷ್ಟವಾಗುತ್ತದೆ ಎನ್ನುವುದನ್ನು ನೋಡಿ. ಇದನ್ನು ಇಲಾಖೆಯವರು ನೋಡಿ ಗಮನಿಸಬೇಕು. ಅದಷ್ಟುಮಟ್ಟಿಗೆ ರೈತರನ್ನು ಶೋಷಣೆ ಮಾಡುವುದನ್ನು ತಪ್ಪಿಸಬೇಕು. ನಮ್ಮ ಸ್ನೇಹಿತರನೇಕರು ಹೇಳಿದರು ವಿದ್ಯುಚ್ಛಕ್ತಿ ದರ ಏನು ಇದೆ ಅದನ್ನು ಕಡಿಮೆ ಮಾಡಬೇಕು ಮತ್ತು ವಿದ್ಯುಚ್ಛಕ್ತಿ ದರ ಅಲ್ಲದೆ ಇನ್ನೂ ಬೇರೆ ಬೇರೆ ಟ್ಯಾಕ್ಸ್‌ಗಳನ್ನು ಹಾಕುತ್ತಿದ್ದಾರೆ ಅವನ್ನೂ ತಪ್ಪಿಸಬೇಕು ಮತ್ತು ಡಿಪಾಸಿಟನ್ನು ಕಡಿಮೆ ಮಾಡಬೇಕು, ಸೂಪರ್‌ವಿಷನ್ ಛಾರ್ಜಸ್ ಕಡಿಮೆ ಮಾಡಬೇಕು ಎಂದು ಈವೊತ್ತಿನ ವಿದ್ಯುಚ್ಛಕ್ತಿ ದರ ಏನು ಇದೆ ಅದನ್ನು ಮಾಹೆಯಾನಾ ಕಟ್ಟುವುದು ಒಂದೆರಡು ತಿಂಗಳು ತಡವಾಗುವ ಸಂಭವ ಇದೆ. ಮತ್ತು ರೈತರು ಪಂಪುಸೆಟ್ಟುಗಳಿಂದ ಏನೂ ನೀರನ್ನು ಉಪಯೋಗಿಸುತ್ತಾರೋ ಅವರು ಈವೊತ್ತಿನ ದಿವಸದ ವ್ಯವಸಾಯದ ಪರಿಸ್ಥಿತಿಯಲ್ಲಿ ಅವರಿಗೆ ಏನು ಒಂದು ದರ ಬರುತ್ತದೋ ಅದನ್ನು ಒಂದು ನಿಗದಿಯಾದ ಟೈಂನಲ್ಲಿ ಕಟ್ಟುವುದಕ್ಕೆ ಶಕ್ತಿ ಇಲ್ಲ. ಆ ರೀತಿಯಾಗಿ ನಿಗದಿಯಾದ ತಾರೀಖಿಗೆ ಕಟ್ಟದೇ ಹೋದರೆ ಡಿಸ್‌ಕನೆಕ್ಟ್ ಮಾಡುತ್ತಾರೆ. ಪುನಃ ಅದನ್ನು ರಿಕನೆಕ್ಷನ್ ಮಾಡಬೇಕಾದರೆ 20 ರೂಪಾಯಿ ವಸೂಲ್ಮಾಡುತ್ತಾರೆ. ಇದು ಬಹಳ ಶೋಚನೀಯವಾದ ವಿಚಾರ. ಈವೊತ್ತಿನ ದಿವಸ ರೈತನು ಕೇವಲ 10 ರೂಪಾಯಿಯನ್ನೂ ಕೂಡ ಕಟ್ಟುವುದಕ್ಕಾಗುವುದಿಲ್ಲ. ಅಂಥಾ ಶಕ್ತಿಯನ್ನು ಕಳೆದುಕೊಂಡಿದ್ದಾನೆ, ಅಂಥಾದ್ದರಲ್ಲಿ ಅವನು ಕಟ್ಟುವುದು ಒಂದೆರಡು ತಿಂಗಳು ನಿಧಾನವಾದರೆ 20 ರೂಪಾಯಿ ರೀಕನೆಕ್ಷನ್ ಛಾರ್ಜಸ್‌ನ್ನು ವಸೂಲ್ಮಾಡುತ್ತಾರೆ. ಇದು ಬಹಳ ಅನ್ಯಾಯ. ಆದುದರಿಂದ ಮೊದಲಿದ್ದ ಹಾಗೆ ಈ ರೇಟನ್ನು ಮೂರು ರೂಪಾಯಿಗೆ ಇಳಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಒಂದೇ ಸಾರಿ ಅಲ್ಲದೆ 3ನೇ ಸಾರಿ ಡಿಸ್‌ಕನೆಕ್ಟ್ ಆದರೆ 30 ರೂಪಾಯಿ ವಸೂಲ್ಮಾಡುತ್ತಾರೆ. ಇದು ಬಹಳ ಅನ್ಯಾಯ. ಒಟ್ಟಿನಲ್ಲಿ ಹೇಳುವುದಾದರೆ ರೈತರಲ್ಲಿ ಒಗ್ಗಟ್ಟು ಇಲ್ಲ, ಸಂಘಟನೆ ಇಲ್ಲ, ಈ ಇಲಾಖೆಯವರು ರೈತರನ್ನು ಶೋಷಣೆ ಮಾಡತಕ್ಕಂಥ ವಿಧಾನ ನೋಡಿದರೆ ಬಹಳ ಅನ್ಯಾಯವಾಗಿದೆ ಎಂದು ನಾನು ಒತ್ತಿ ಹೇಳಬೇಕಾಗಿದೆ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ರೀಕನೆಕ್ಷನ್ ಛಾರ್ಜಸ್ ಮೊದಲು ಇದ್ದಂತೆ 3 ರೂಪಾಯಿಗೆ ಬದಲಾಯಿಸಬೇಕು. ಈಗ ಮೀಟರ್ ಛಾರ್ಜಸ್ ಮನೆಗಳಿಗೆ ಆದರೆ 50 ಪೈಸೇ ಅಂತ ವಸೂಲ್ಮಾಡುತ್ತೀರಿ, ಎಲೆಕ್ಟ್ರಿಸಿಟಿ ಪಂಪುಸೆಟ್‌ಗಾದರೆ ಒಂದು ರೂಪಾಯಿ ಪ್ರತಿ ತಿಂಗಳೂ ವಸೂಲ್ಮಾಡುತ್ತೀರಿ. ಈಗ ಹಾಕಿರತಕ್ಕಂಥ ಮೀಟರ್ ಛಾರ್ಜೇ ಜಾಸ್ತಿಯಾಗಿರುವುದರಿಂದ ಇಲಾಖೆಯವರು ಮಾಡುವ ತಪ್ಪಿನಿಂದ ಮೋಟಾರ್ ಸುಟ್ಟು ಹೋದರೆ ಆ ಮೋಟಾರ್‌ನವರ ಮೇಲೆ ನೂರಾರು ರೂಪಾಯಿ ವಸೂಲ್ಮಾಡತಕ್ಕಂಥಾದ್ದು ತುಂಬಾ ಅನ್ಯಾಯ ಎಂದು ಹೇಳುತ್ತೇನೆ. ಏತಕ್ಕೆಂದರೆ ಉದಾಹರಣೆಗೆ ಇದರ ಮೇಲೆ ಮಾಹೆಯಾನಾ ಒಂದು ರೂಪಾಯಿ ಬಾಡಿಗೆ ತೆಗೆದು ಕೊಳ್ಳುತ್ತೀರಿ. ಅಲ್ಲಿಗೆ ಆ ಮೀಟರ್ ಅನ್ನುವುದು ಇಲಾಖೆಯ ಸ್ವತ್ತು ಆಯಿತು. ಆದುದರಿಂದ ಇದು ಕೆಟ್ಟು ಹೋದರೆ ಇಲಾಖೆಯವರದ್ದು ತಪ್ಪೇ ವಿನಾ ಆ ದುಡ್ಡನ್ನು ರೈತರಿಂದ ವಸೂಲ್ಮಾಡತಕ್ಕಂಥಾದ್ದು ನ್ಯಾಯವಲ್ಲ. ಹೇಗಾಗಿ ರೈತರನ್ನು ಹೆಚ್ಚು ಶೋಷಣೆ ಮಾಡತಕ್ಕಂಥಾದ್ದನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ರೈತರನ್ನು ಶೋಷಣೆ ಮಾಡುವುದನ್ನು ಎಲ್ಲಿಯವರೆಗೆ ತಪ್ಪಿಸುವುದಿಲ್ಲವೋ ಅಲ್ಲಿಯವರೆಗೂ ಈ ವಿದ್ಯುಚ್ಛಕ್ತಿ ಇಲಾಖೆ ಏನು ಇದೆ ಅದರಲ್ಲಿರತಕ್ಕಂಥಾ ನಡ

(ಶ್ರೀ ಜಿ. ರಾಮೇಗೌಡ)

ಬಳಕೆಗಳಿಂದ ತುಂಬಾ ಅನ್ಯಾಯವಾಗುತ್ತದೆ. ಆದುದರಿಂದ ಆದಷ್ಟು ಜಾಗೃತೆಯಾಗಿ ರೈತರಿಗೆ ಒದಗಿಸುವ ವಿದ್ಯುಚ್ಛಕ್ತಿ ದರಗಳನ್ನು ಇಳಿಸಬೇಕು ಮತ್ತು ಮೀಟರ್ ಛಾರ್ಜಸ್‌ನ್ನು ತೆಗೆಯಬೇಕು ಮತ್ತು ದಿನಾವೂ ಕೂಡ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಕೊಟ್ಟು ಅಗಾಗ್ಗೆ ಕೆಟ್ಟು ಹೋಗದಂತೆ ತಕ್ಕ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಅನೇಕ ಸಾರಿ ಹೇಳಿದ್ದೇವೆ. ಈ ಸಭೆಯಲ್ಲಿ ಇದಕ್ಕೆ ಸಂಬಂಧಪಟ್ಟ ಒಬ್ಬರೂ ಮಂತ್ರಿಗಳೂ ಇಲ್ಲ. ಹಾಗಾದರೆ ನಾವು ಏತಕ್ಕೆ ಇಲ್ಲಿ ಇರಬೇಕು ಅವರು ಏನಾದರೂ ರಾಜೀನಾಮೆ ಕೊಟ್ಟು ಹೋಗಿದ್ದಾರೋ, ನಮ್ಮ ಹೊಣೆಗಾರಿಕೆಗೂ ಒಂದು ಮಿತಿ ಇದೆ. ನಾವು ಈ ಸಭೆಯ ಘನತೆಗೌರವಗಳಿಗೆ ಆದ್ಯತೆ ಕೊಡಬೇಕು ಎನ್ನುವ ದೃಷ್ಟಿಯಿಂದ ತೆಪ್ಪಗೆ ಇರುತ್ತೇವೆ ಎಂದು ಅವನ್ನು ದುರುಪಯೋಗಪಡಿಸಿಕೊಂಡು ಒಬ್ಬರೂ ಕೂಡ ಮುಖ ಹಾಕದೇ ಹೋದರೆ ಅವರು ಏನಾದರೂ ರಾಜೀನಾಮೆ ಕೊಟ್ಟು ಹೋಗಿದ್ದಾರೆಯೇ ? ಇಲ್ಲವೇ ಈ ಸರ್ಕಾರ ಜೀವಂತವಾಗಿದೆಯೇ ಎನ್ನುವುದನ್ನು ನಾವು ಕೇಳಬೇಕಾಗಿದೆ, ನಾವು ಹಾಗೆಯೇ ಇದನ್ನು ಬಿಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು 3-4 ಸಾರಿ ಹೇಳಿದ್ದೇವೆ. ಈಗ ಮತ್ತೆ ಆ ಬಗ್ಗೆ ಛೀಮಾರಿ ಹಾಕುವ ಕಾಲ ಬಂದೀತು ಎನ್ನುವ ಮಾತನು ಹೇಳುತ್ತೇನೆ.

MADAM SPEAKER —We have heard complaints from the members of the Opposition about the absence of the concerned Minister. If he is not sent for, I wolud like to adjourn the House.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರೇ, ಕೇಂದ್ರದ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಚವ್ಹಾಣ್‌ರವರು ಇಲ್ಲಿಗೆ ಬಂದಿದ್ದಾರೆ. ಇವರ ಯೋಗ್ಯತೆಯನ್ನು ನೋಡುವುದಕ್ಕೆ ಅವರು ಇಲ್ಲಿಗೆ ಬಂದಿದ್ದಾರೆ. ದೇಶದಲ್ಲಿ ಈ ಮಂತ್ರಿಮಂಡಲ ಇರುತ್ತದೋ ಇಲ್ಲವೋ ಎನ್ನುವ ಅನುಮಾನ ಇದೆ. ಹೊಸ ಮಂತ್ರಿಮಂಡಲ ಬಂದರೆ ಅದುವರೆಗೆ ನಾವು ಈ ಬಗ್ಗೆ ಚರ್ಚೆ ಮಾಡೋಣ.

MADAM SPEAKER.—If the concerned Minister does not turn up, I shall adjourn the House. In the meanwhile, Sri Puttaswamiah may kindly offer his remarks on the demand.

3–00 P.M.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ....

ಶ್ರೀ ಕೋಣಂದೂರು ಲಿಂಗಪ್ಪ.—ವಿಧಾನಪರಿಷತ್ತಿನಲ್ಲಿ ಕೂಡ ಯಾವ ಮಂತ್ರಿಗಳು ಇಲ್ಲ ಎಂದು ನಮಗೆ ತಿಳಿದುಬಂದಿದೆ.

ಅಧ್ಯಕ್ಷರು.—ಅದು ಮಾತ್ರ ಸತ್ಯಕ್ಕೆ ದೂರವಾದ ವಿಚಾರ. ಈಗ ನಾನು ಹೇಳಿಕಳುಹಿಸಿದ್ದೇನೆ. ಅವರು ಬರುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಬೇಜವಾಬ್ದಾರಿಯುತವಾದ ವರ್ತನೆ. ಮಂತ್ರಿಗಳು ಈ ಸಭೆಯನ್ನು ಅಷ್ಟೊಂದು ಲಘುವಾಗಿ ಕಾಣುವುದಾದರೆ, ತಾವು ಈ ಸಭೆಯನ್ನು ಮುಂದಕ್ಕೆ ಹಾಕಿ. ಈ ರೀತಿ ಅನೇಕ ಸಲ ನಡೆದಿದ್ದರೂ ಸಹ ಅವರು ಈ ಸಭೆಗೆ ಮರ್ಯಾದೆ ಕೊಡುತ್ತಿಲ್ಲ. ತಮ್ಮ ಮಾತಿಗೆ ಬೆಲೆಯೇ ಇಲ್ಲವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ —ನಮಗೆ ಬೇಕಾದ ಮಂತ್ರಿಗಳು ಮೇಲ್ಮನೆಯಲ್ಲಿಯೂ ಇಲ್ಲ.

ಅಧ್ಯಕ್ಷರು.—ಈಗ ಹೇಳಿಕಳುಹಿಸಲಾಗಿದೆ. ಅವರು ಬರದಿದ್ದರೆ ಸಭೆಯನ್ನು ಮುಂದಕ್ಕೆ ಹಾಕುತ್ತೇನೆ. ಇಂದು 5 ಗಂಟೆಗೆ ರಿಪ್ಲೈ ಪ್ರಾರಂಭವಾಗಬೇಕಾಗಿರುವುದರಿಂದ ಅಲ್ಲಿಯವರೆಗೆ ಮಾನ್ಯ ಪುಟ್ಟಸ್ವಾಮಯ್ಯನವರು ಮಾತನಾಡುತ್ತಿರಲಿ.

ಶ್ರೀ ವಾಟಾಳ್ ನಾಗರಾಜ್.—ನಮಗೆ ಉತ್ತರ ಕೊಡುವ ಮಂತ್ರಿಗಳೇ ಇಷ್ಟೊಂದು ಬೇಜವಾಬ್ದಾರಿಯುತವಾಗಿ ನಡೆದುಕೊಂಡರೆ ಹೇಗೆ? ಇಂತಹವರು ಮಂತ್ರಿಮಂಡಲದಲ್ಲಿರುತ್ತಾರೆಂದು ನಮಗೆ ಗೊತ್ತಿರಲಿಲ್ಲ, ಸಂಬಂಧಪಟ್ಟ ಮಂತ್ರಿಗಳೇ ಇಲ್ಲದಿರುವಾಗ ನಮಗೆ ಉತ್ತರ ಕೊಡುವವರು ಯಾರು?

ಅಧ್ಯಕ್ಷರು.—ಉತ್ತರ ಕೊಡುವವರು ಈಗ ಬಂದರು

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿಯುವರೆಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ಅವರು ಕೇಳಿಲ್ಲ. ಇನ್ನು ಅವರು ಯಾವ ರೀತಿ ಉತ್ತರ ಕೊಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು.—ಅವರು ಅವರ ಉತ್ತರ ಕೊಡುವಾಗ ಪರೀಕ್ಷೆ ಮಾಡುವಿರಂತೆ, ಈಗ ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ಮುಖ್ಯಮಂತ್ರಿಗಳ ಹತ್ತಿರ ಹೋಗಿ ಬಂದರೆಂದು ಕಾಣುತ್ತದೆ. ಮಂತ್ರಿಮಂಡಲದ ಬದಲಾವಣೆ ಏನಾದರು ಆಗುವುದಿದೆಯೋ?

Sri H. M CHANNABASAPPA.—I have already said that if Sri Vatal Nagaraj doubts about the stability of the Government, he can at any time move a motion and test it.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರು ಈಗ ಸರ್ಕಾರದ ವಿರುದ್ಧ ತೆಗೆದುಕೊಂಡಂಥ ನಿಲುವನ್ನು ನಾನು ಮೆಚ್ಚಿಕೊಂಡಿದ್ದೇನೆ. ಈಗ ಮಾನ್ಯ ಚೆನ್ನಬಸಪ್ಪನವರು ಬಂದಿದ್ದಾರೆ. ಅವರು ಉತ್ತರ ಕೊಡಲಿ. ಆದರೆ ಸರ್ಕಾರದವರು ಈ ಸಭೆಯನ್ನು ಇಷ್ಟೊಂದು ನಿರ್ಲಕ್ಷ ಮನೋಭಾವದಿಂದ ಕಾಣುತ್ತಿರುವುದು ಸರಿಯಲ್ಲ. ಈ ಸಭೆಯ ಘನತೆಗೌರವಗಳಿಗೆ ಕುಂದು ತರುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ತಾವೇ ಮಂತ್ರಿಗಳಿಗೆ ಹೇಳಿಕಳಿಸುವ ಪ್ರಸಂಗ ಬಂತು. ಈ ನೀತಿ ಸರಿಯಾದುದಲ್ಲ. ಮಾನ್ಯ ಅಧ್ಯಕ್ಷರನ್ನು ನಾನು ಬೇಡಿಕೊಳ್ಳುವುದೇನೆಂದರೆ, ಸರ್ಕಾರದವರು ಮೊದಲು ಈ ಬಗ್ಗೆ ವಿಷಾದ ಸೂಚನೆ ಮಾಡಬೇಕು. ಮಂತ್ರಿಗಳು ಈ ಸಭೆಯನ್ನು ಮಕ್ಕಳಾಟಿಕೆಯ ರೀತಿಯಲ್ಲಿ ಕಾಣುತ್ತಿರುವುದು ಸರಿಯಲ್ಲ. ಮಂತ್ರಿಗಳು ಸಭೆಗೆ ಬಂದಾಗ ನಾವು ಮಾತನಾಡಬೇಕೆಂದು ಹೇಳುವುದರಲ್ಲಿ ಏನು ನ್ಯಾಯವಿದೆ; ಇದು ಸರಿಯಲ್ಲ. ಅವರು ವಿಷಾದ ವ್ಯಕ್ತಪಡಿಸಲೇಬೇಕು.

Sri H. M. CHANNABASAPPA.—I want to make a submission. I would like to be away about 20 minutes on a very urgent matter. The Officers and the Hon. Minister of State Sri Nanje Gowda are noting down every point. I will definitely meet all the points satisfactorily.

ಅಧ್ಯಕ್ಷರು.—ಇಂದು 5 ಗಂಟೆಗೆ ಕಮ್ಯುನಿಕ್ಸ್ ಪ್ರಾರಂಭವಾಗಬೇಕಾಗಿದೆ

Sri H. M. CHANNABASAPPA.—I would like to submit it would not be possible for me to-day.

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಮಾನ್ಯ ಮಂತ್ರಿಗಳಿಗೆ ಇರುವ ಅಸಹಾಯಕತೆ ಏನು ಎಂಬುದು ನನಗೆ ತಿಳಿಯುತ್ತಿಲ್ಲ. ಮತ್ತೊಂದು ಮುಖ್ಯವಾದ ಅಂಶವೇನೆಂದರೆ ವಿಧಾನ ಸಭೆಯಲ್ಲಿ ಡಿಮ್ಯಾಂಡ್‌ಗಳ ಮೇಲೆ ಚರ್ಚೆಯಾಗುವುದಕ್ಕೆ ಮೊದಲೇ ವಿಧಾನಪರಿಷತ್ತಿನಲ್ಲಿ ಚರ್ಚೆಯಾಗುವುದು ಒಳ್ಳೆಯ ಸಂಪ್ರದಾಯವಲ್ಲ. ಈಗಾಗಲೇ ಕೈಗಾರಿಕೆಯ ಇಲಾಖೆಯ ಡಿಮ್ಯಾಂಡ್ ಬಗ್ಗೆ ಅಲ್ಲಿ ಮೊದಲು ಚರ್ಚೆಯಾಗಿ ಮಂತ್ರಿಗಳು ಉತ್ತರ ಕೊಟ್ಟ ನಂತರ ಇಲ್ಲಿ ಚರ್ಚೆ ನಡೆದು ಮಂತ್ರಿಗಳು ಉತ್ತರ ಕೊಟ್ಟರು. ಇದೇ ರೀತಿ ಬೇರೆ ಡಿಮ್ಯಾಂಡ್‌ಗಳ ಬಗ್ಗೆಯೂ ಸಹ ನಡೆದರೆ ನಾವು ಬಹಿಷ್ಕಾರ ಮಾಡಬೇಕಾಗುತ್ತದೆ, ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ತಯಾರಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ವಿಧಾನಪರಿಷತ್ತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಮಂತ್ರಿಮಂಡಲದವರು ಕೊಡುತ್ತಿದ್ದಾರೆ. ಇದು ಸರಿಯಲ್ಲ. ತಾವು ಸರ್ಕಾರಕ್ಕೆ ಸರಿಯಾದ ತಿಳುವಳಿಕೆ ಕೊಟ್ಟು ಇದನ್ನು ಸರಿಪಡಿಸದೇ ಇದ್ದರೆ ಈ ಸದನಕ್ಕೆ ಅಗೌರವವಾಗುತ್ತದೆಂದು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವೂ ಸಹ ಅನೇಕ ವರ್ಷಗಳಿಂದ ಈ ಸಭೆಯ ಸದಸ್ಯರಾಗಿ ಕೆಲಸ ಮಾಡಿ ಸಾಕಷ್ಟು ಅನುಭವ ಪಡೆದಿದ್ದೀರಿ. ಈ ರೀತಿ ನಡೆಯುತ್ತಿರುವುದು ಸರಿಯೇ ಎಂಬುದನ್ನು ತಾವೇ ವಿಚಾರ ಮಾಡಿ ನೋಡಬೇಕು. ಇದೇ ಮೊದಲ ಸಲ ಅಲ್ಲಿ ಪ್ರತಿ ಇಲಾಖೆಯ ಬಗ್ಗೆಯೂ ಚರ್ಚೆ ಮಾಡುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಇಲ್ಲಿ ಚರ್ಚೆಯಾಗಿ ಓಟು ಪಡೆದ ನಂತರ ಬೇಕಾದರೆ ಅಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಆದರೆ ಇಲ್ಲಿ ಚರ್ಚೆಯಾಗುವುದಕ್ಕೆ ಮೊದಲೇ ಅಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿರುವುದು ಸರಿಯಿಲ್ಲ. ಈ ಸದನಕ್ಕೆ ಮೂಲಭೂತವಾದಂಥ ಜವಾಬ್ದಾರಿ ಇದ್ದರೂ ಸಹ ಅದನ್ನು ಕಡೆಗಣಿಸಿ ಅಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿರುವುದು ಸರಿಯಿಲ್ಲ. ಇದರಿಂದ ನಮ್ಮ ರಾಜ್ಯದ ಶಾಸನ ಸಭೆಯ ಸಂಪ್ರದಾಯ ಏನು ಬೆಳೆದುಕೊಂಡು ಬಂದಿವೆ, ಅದನ್ನು ಮೀರಿದಂತೆ ಆಗುತ್ತವೆ. ಮತ್ತು ಈ ಸಭೆಯ ಹಕ್ಕು ಬಾಧ್ಯತೆಗೆ ಚ್ಯುತಿ ಮಾಡಿದಂತೆ ಆಗುತ್ತದೆ. ಈ ಕಾರಣಗಳಿಂದ ತಾವು ನಮಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri H. D. DEVE GOWDA.—On Saturday we are having agricultural Demand. The same demand will be discussed on Saturday in the other House according to the Programme i.e. If P.W.D. and Electricity are not finished it may not be possible to take up the Agricultural Demand on Saturday. We cannot allow the demand to be taken up in the other house and the same is not taken up here. Such things should not happen.

ಅಧ್ಯಕ್ಷರು.—ಅಲ್ಲಿ ಇಂದು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಚರ್ಚೆಗೆ ತೆಗೆದುಕೊಂಡಿರಬೇಕೆಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ನಾವು ಸಹಿಸುವುದಕ್ಕಾಗುವುದಿಲ್ಲ. ಒಂದು ಪಕ್ಷ ಅಲ್ಲಿ ವ್ಯವಸಾಯ ಇಲಾಖೆಯ ಮೇಲೆ ಚರ್ಚೆಯಾದರೂ ಸಹ ಮಾನ್ಯ ಮಂತ್ರಿಗಳು ಉತ್ತರ ಕೊಡುವುದನ್ನು ಮುಂದೂಡಬೇಕು. ಇಲ್ಲದೆ ಹೋದರೆ ಅಲ್ಲಿ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ನಾವು ಅದೇ ಡಿಮ್ಯಾಂಡ್‌ನ ಮೇಲೆ ಅನಾವಶ್ಯಕವಾಗಿ ಇಲ್ಲಿ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಅದು ಈ ಸಭೆಯ ಮರ್ಯಾದೆಗೆ ತಕ್ಕುದಲ್ಲ. ಈ ಬಗ್ಗೆ ತಾವು ನಮಗೆ ರಕ್ಷಣೆ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲಿ ಕೈಗಾರಿಕಾ ಇಲಾಖೆಯ ಡಿಮ್ಯಾಂಡ್ ಬಗ್ಗೆ ಚರ್ಚೆಯಾದ ಸಮಯದಲ್ಲಿಯೇ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಿದೆವು. ಆದರೂ ಸರ್ಕಾರಕ್ಕೆ ಎಚ್ಚರಿಕೆಯಾಗಲಿಲ್ಲ. ಅದಕ್ಕಾಗಿ ನಾವು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಇಂದು ವಿಧಾನ ಪರಿಷತ್ತನ್ನು ನಮ್ಮ ತಲೆಯ ಮೇಲೆ ಏರಿದ್ದಾರೆ. ಇದನ್ನು ಸಹಿಸುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ತಾಕತ್ ಇದ್ದರೆ ವಿಧಾನಪರಿಷತ್‌ನ್ನು ರದ್ದು ಮಾಡಲಿ. ಆ ಸಭೆಗೆ ಯಾವ ತರಹದ ಜವಾಬ್ದಾರಿಯೂ ಇಲ್ಲ. ಆದರೆ ಈ ಸಭೆಗೆ ಮಾತ್ರ ಸಂಪೂರ್ಣವಾದ ಜವಾಬ್ದಾರಿ ಇದೆ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳಬೇಕು.

Sri H. M. CHANNABASAPPA.—I agree with the suggestion that the demands should be moved here first. So far as my information goes no demand is under discussion there which has not been discussed here.

ಶ್ರೀ ಎಚ್. ಡಿ. ದೇವೇಗೌಡ.—ನಾನು ವಿಧಾನಪರಿಷತ್ತಿನ ಬಗ್ಗೆ ಅಗೌರವ ವ್ಯಕ್ತಪಡಿಸುವುದಕ್ಕೆ ತಯಾರಿಲ್ಲ. ಮತ್ತು ಆ ಸಭೆಯ ಹಕ್ಕುಬಾಧ್ಯತೆಗಳ ಬಗ್ಗೆ ಪ್ರಶ್ನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಈ ಡಿಮ್ಯಾಂಡ್‌ಗಳಿಗೆ ಓಟು ಮಾಡುವ ಹಕ್ಕು ಈ ಸಭೆಗೆ ಮಾತ್ರ ಇರುವುದು. ಆದ್ದರಿಂದ ಆ ಹಕ್ಕಿಗೆ ಚ್ಯುತಿ ಮಾಡಿಕೊಳ್ಳುವುದಕ್ಕೆ ನಾವು ತಯಾರಿಲ್ಲ. ಈಗಾಗಲೇ ಕೈಗಾರಿಕಾ ಡಿಮ್ಯಾಂಡ್ ಬಗ್ಗೆ ಇಲ್ಲಿ ಚರ್ಚೆಯಾಗುವುದಕ್ಕೆ ಮೊದಲೇ ಅಲ್ಲಿ ಚರ್ಚೆಯಾಗಿ ಉತ್ತರ ಕೊಟ್ಟಿದ್ದಾರೆ. ಅದೇ ರೀತಿ ಇಂದು ಅಲ್ಲಿ ವ್ಯವಸಾಯ ಇಲಾಖೆಯ ಮೇಲೆ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ನಮಗೆ ಕಷ್ಟವಾಗುತ್ತದೆ. ತಾವು ಈ ಸಭೆಗಿರುವ ಹಕ್ಕನ್ನು ರಕ್ಷಣೆ ಮಾಡುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕು. ಅದಕ್ಕಾಗಿ ಉಭಯ ಸಭೆಗಳ ಕಾರ್ಯಕಲಾಪಗಳು ಏನಿವೆ, ಅವುಗಳ ಬಗ್ಗೆ ಪರಿಸ್ಥಿತಿಯನ್ನು ಅರಿತುಕೊಂಡು ಹೊಂದಾಣಿಕೆ ಮಾಡುವುದಕ್ಕೆ ತಾವು ವಿಧಾನಪರಿಷತ್ತಿನ ಸಭಾಪತಿಯವರೊಡನೆ ಮತ್ತು ಕಾರ್ಯದರ್ಶಿಯವರೊಡನೆ ಮಾತನಾಡ

ಬೇಕು ಮತ್ತು ಆ ಬಗ್ಗೆ ಸರ್ಕಾರದ ಸಲಹೆಯನ್ನು ಪಡೆದುಕೊಳ್ಳಬೇಕು. ಈ ಮನೆಯಲ್ಲಿ ಚರ್ಚೆಯಾಗುವುದಕ್ಕೆ ಮುಂಚೆ ಯಾವುದೇ ಡಿಮ್ಯಾಂಡ್ ಕೆಳಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಯೋಗ್ಯ ಅಲ್ಲ.

Sri H. M. CHANNABASAPPA.—There is no difference of opinion with regard to safeguarding the prestige of this House. Madam Speaker, you can have a dialogue with the Chairman also and also the Leader of the Opposition and the Leader of this House and so arrange the business of the House, that the demands, before they are discussed and voted here, may not be discussed in the upper House. I think on this point, all of us agree and we need not spend any more time.

ಅಧ್ಯಕ್ಷರು.—ಬೇಡಿಕೆಗಳ ಬಗ್ಗೆ ಉತ್ತರ ನೀಡುವ ಕಾರ್ಯ ನಿಗದಿಯಾದ ದಿನದಿಂದ ಮುಂದಕ್ಕೆ ಹೋಗುತ್ತಾ ಇರುವುದರಿಂದ ಈ ರೀತಿ ತೊಂದರೆಯಾಗುತ್ತಿದೆ.

Sri H. M. CHANNABASAPPA.—I would have been exceedingly happy to complete my reply to-day. Because I was otherwise busy and overworked, I would appeal to the House to bear with me. I will reply the next working day.

ಶ್ರೀ ಎಚ್. ಡಿ. ದೇವೇಗೌಡ.—ನಾನು ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಡಿಮ್ಯಾಂಡುಗಳ ಚರ್ಚೆಗೆ 20 ದಿವಸಗಳ ಕಾಲವನ್ನು ಇಟ್ಟಿದ್ದಿರಿ. ಈಗಾಗಲೇ 6 ದಿವಸಗಳು ಮುಗಿದು ಹೋಗಿವೆ. ಡಿಮ್ಯಾಂಡುಗಳ ಚರ್ಚೆಗೆ ತಾವು ಕಾಲವನ್ನು ನಿಗದಿ ಮಾಡಿದಂತೆ ಚರ್ಚೆಗೆ ಕಾಲವನ್ನು ಒದಗಿಸಬೇಕು. ಆ ಅವಧಿಯಲ್ಲಿ ಡಿಮ್ಯಾಂಡುಗಳ ಚರ್ಚೆ ಮುಗಿಯದಿದ್ದರೆ ಡಿಮ್ಯಾಂಡುಗಳನ್ನು ಗಿಲೆಟಿನ್‌ಗೆ ಹಾಕಬೇಕಾಗುತ್ತದೆ ಎಂದು ತಾವು ಸೂಚನೆಯನ್ನು ಕೊಟ್ಟಿದ್ದೀರಿ. ಇದಕ್ಕೆ ನಾವು ಜವಾಬ್ದಾರರಲ್ಲ. ನಾನ್ ಅಫಿಷಿಯಲ್ ಬಿಜಿನೆಸ್‌ಗೆ ಇಟ್ಟಿದ್ದ ದಿವಸಗಳು ಮೂರು ದಿವಸಗಳು ಹೋಗಿವೆ. ಆದ್ದರಿಂದ ನಾನ್ ಅಫಿಷಿಯಲ್ ಬಿಜಿನೆಸ್‌ಗೆ ಚ್ಯುತಿ ಬಾರದ ಹಾಗೆ ಅದರ ಚರ್ಚೆಗೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

MADAM SPEAKER.—Saturday has been allotted for official work. It is not ?

Sri H. D. DEVE GOWDA.—Even on Saturday, we are not going to take up the work on the agenda. The Minister may take another two hours. I don't think we can take up the Agriculture Demand for discussion on that day.

MADAM SPEAKER.—We can take it up and finish it up on that day.

ಶ್ರೀ ಎಸ್. ಬಂಗಾರಪ್ಪ.—ಮೇಲ್ಮನೆಯಲ್ಲಿ ಕೈಗಾರಿಕಾ ಇಲಾಖೆಯ ಬಗ್ಗೆ ಮೊದಲು ಚರ್ಚೆಯಾಗಿರುವುದು ಈ ಸಭೆಯ ಹಕ್ಕಿಗೆ ಚ್ಯುತಿ ಬಂದಿದೆ. It has caused a breach of privilege of this House. Therefore I am sending up a Privilege Motion against the Government.

† ಬಿ. ಪುಟ್ಟಸ್ವಾಮಯ್ಯ.—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಸದನದ ಮುಂದೆ ಇಟ್ಟಿರ ತಕ್ಕಂಥ ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ತೀವ್ರವಾಗಿ ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಈ ಖಾತೆಯನ್ನು ವಹಿಸಿಕೊಂಡಿರತಕ್ಕ ಶ್ರೀಮಾನ್ ಚನ್ನಬಸಪ್ಪನವರು ವಯೋವೃದ್ಧರು, ಅನುಭವಿಗಳು, ನುಡಿದಂತೆ ನಡೆಯತಕ್ಕವರು, ನಿರ್ದಾಕ್ಷಿಣ್ಯವಾಗಿ ಕೆಲಸವನ್ನು ಮಾಡತಕ್ಕವರು ಎನ್ನುವ ಮಾತು ಇತ್ತು. ಇವೊತ್ತು ಆ ಮಾತಿಗೆ ಕಳಂಕವನ್ನು ತಂದುಕೊಂಡಿದ್ದಾರೆ. ಅವರು ಅಧಿಕಾರವನ್ನು ವಹಿಸಿಕೊಂಡ ಪ್ರಾರಂಭದಲ್ಲಿ ಹಳೆಯ ಮೈಸೂರಿನ ಒಂದೇ ಕೋಮಿಗೆ ಸೇರಿದಂತಹ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆ. ಹಳೆಯ ಮೈಸೂರಿನ ಜನ ಶ್ರೀಮಾನ್ ಚನ್ನಬಸಪ್ಪನವರ ಬಗ್ಗೆ ಏನು ಗೌರವವನ್ನು ಇಟ್ಟಿದ್ದರೋ ಅದರ ಬಗ್ಗೆ ಕುಂದು ಬಂದಿದೆ ಎಂದು ಹೇಳಿದರೆ ತಪ್ಪಾಗ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಲಾರದು. ಮೈಸೂರು ರಾಜ್ಯದಲ್ಲಿ ತತ್ವಶಃ ಸಣ್ಣ ನೀರಾವರಿ ಯೋಜನೆಗಳು ಕಾರ್ಯಗತವಾಗಿಲ್ಲ. ಅವು ಏನಿದ್ದರೂ ಕಾಗದದ ಮೇಲೆ ಮತ್ತು ಭಾಷಣಗಳಲ್ಲಿ ಇವೆ. ನಾನು ತುಂಬ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಳೆಯ ಮೈಸೂರು ಭಾಗದಲ್ಲಿ ಸಣ್ಣ ನೀರಾವರಿ ಯೋಜನೆಗಳು ಸ್ಥಗಿತವಾಗಿವೆ ಎಂದರೆ ತಪ್ಪಾಗುವುದಿಲ್ಲ. ಹಿಂದಿನ ಸರ್ಕಾರ ಪ್ರಾರಂಭ ಮಾಡಿದಂತಹ ಸಣ್ಣ ನೀರಾವರಿ ಕಾಮಗಾರಿಗಳನ್ನು ಮುಂದುವರಿಸಿಲ್ಲ. ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ರಸ್ತೆಗಳ ಕೆಲಸಗಳು ಮತ್ತು ಕಟ್ಟಡಗಳ ಕೆಲಸಗಳಿಗೆ ಹೆಚ್ಚು ಗಮನವನ್ನು ಕೊಡುತ್ತಾರೆಯೇ ವಿನಾ ಪ್ರಮುಖ್ಯವಾಗಿ ಹಳೆಯ ಮೈಸೂರಿನಲ್ಲಿ ಮೈನರ್ ಇರಿಗೇಷನ್ನಿಗೆ ಸ್ವಲ್ಪವೂ ಗಮನ ಕೊಟ್ಟಿಲ್ಲ. ಆ ಕೆಲಸ ಇಲ್ಲಿ ಲವಲೇಶವೂ ಆಗಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಹಳೆಯ ಮೈಸೂರಿನ ಜನ ನೊಂದ ಜನ. ಇವರಿಗೆ ಈ ಸರ್ಕಾರ ದ್ರೋಹ ಮಾಡಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಶ್ರೀಮಾನ್ ಚನ್ನಬಸಪ್ಪನವರು ಅಧಿಕಾರದಲ್ಲಿ ಉಳಿಯಬೇಕಾದರೆ ಇಂಥಾ ಕಾರ್ಯಕ್ಕೆ ಅವರು ಕೈಹಾಕಬಾರದು. ಎಲ್ಲಾ ಕಡೆಗಳಲ್ಲೂ ಒಂದೇ ಸಮನಾಗಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿಸಬೇಕು. ಅವರು ರಾಜ್ಯದಲ್ಲಿ ಉತ್ತಮವಾದ ಸೇವೆಯನ್ನು ಮಾಡಬೇಕು. ಹಳೆಯ ಮೈಸೂರು ಭಾಗದಲ್ಲಿ ಸಣ್ಣ ನೀರಾವರಿ ಕಾಮಗಾರಿಗಳು ಒಂದು ವರ್ಷದಿಂದ ಸ್ಥಗಿತವಾಗಿವೆ. ಇದನ್ನು ಶ್ರೀಮಾನ್ ಚನ್ನಬಸಪ್ಪನವರು ಪರಿಶೀಲನೆ ಮಾಡಬೇಕು. ಮತ್ತು ಹಳೆಯ ಮೈಸೂರಿನಲ್ಲಿ ಸಾಕಷ್ಟು ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ರಾಜ್ಯ ಸಂಪದ್ಭರಿತವಾಗಬೇಕಾದರೆ ನೀರಾವರಿ ಕಾಮಗಾರಿಗಳು ಕಾರ್ಯಗತವಾಗಬೇಕು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದವರು ಕೆಲಸ ಮಾಡಬೇಕು. ಹಳೆಯ ಮೈಸೂರಿಗೆ ನ್ಯಾಯವನ್ನು ಒದಗಿಸಬೇಕು. ಯಾವುದೇ ತಾರತಮ್ಯ ಮನೋಭಾವನೆಯನ್ನು ತೋರಿಸಬಾರದು. ನೀವು ಈ ರೀತಿ ಮಾಡುವುದಾದರೆ ಜನಗಳು ಮನೆಗಳಿಗೆ ನುಗ್ಗುತ್ತಾರೆ. ಬೀದಿ ಬೀದಿಗಳಲ್ಲಿ ನಿಮಗೆ ಜನಗಳು ಛಡಿ ಏಟು ಹೊಡೆಯುತ್ತಾರೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ. ನ್ಯಾಯ ನೀತಿ ಧರ್ಮದಿಂದ ಕೆಲಸಗಳನ್ನು ಮಾಡಿ. ಪುಣ್ಯವನ್ನು ಕಟ್ಟಿಕೊಳ್ಳಿ, ಈ ರೀತಿ ನೀವು ನಮ್ಮ ಹಳೆಯ ಮೈಸೂರಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಲ್ಲಿ ತಾರತಮ್ಯ ಮಾಡಿರುವುದಕ್ಕೆ, ಈ ಕೆಲಸಗಳನ್ನು ತೆಗೆದುಕೊಳ್ಳದೇ ಇರುವುದಕ್ಕೆ ನನ್ನಲ್ಲಿ ಸಾಕಷ್ಟು ಸಾಕ್ಷಿ ಮತ್ತು ಆಧಾರಗಳು ಇವೆ. ನನ್ನ ಕ್ಷೇತ್ರದಲ್ಲೇ ನಡೆಯುತ್ತಿದ್ದಂತಹ 5—6 ಸಣ್ಣ ನೀರಾವರಿ ಕಾಮಗಾರಿಗಳ ಕೆಲಸ ಲವಲೇಶವೂ ನಡೆಯುತ್ತಿಲ್ಲ. ಬೆಂಗಳೂರು ಜಿಲ್ಲೆಯಲ್ಲಿ ಎಷ್ಟರ ಮಟ್ಟಿಗೆ ಈ ಸಣ್ಣ ನೀರಾವರಿ ಕಾಮಗಾರಿಗಳು ನಡೆದಿವೆ ಎನ್ನುವ ಬಗ್ಗೆ ನನ್ನ ಮಿತ್ರರು ಈಗಾಗಲೇ ಹೇಳಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಭಾಷಣ ಮಾಡುವುದರಲ್ಲಿ ಬಹಳ ಗಟ್ಟಿಗರು. ಆಕಾಶದಿಂದ ಬೀಳತಕ್ಕ ಗಂಗೆಯನ್ನು ಒಂದು ತೊಟ್ಟನ್ನೂ ಹಾಳು ಮಾಡದ ಹಾಗೆ ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದ್ದರು. ಆ ರೀತಿ ಜನಗಳಿಗೆ ನೀರಾವರಿ ಸೌಕರ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ಎಂದು ನಾನು ಅವರನ್ನು ಪ್ರಶ್ನೆ ಮಾಡಬೇಕಾಗಿದೆ. ನಾನು ಏಕೆ ಈ ಮಾತನ್ನು ಹೇಳುದ್ದೇನೆಂದರೆ, ಹಳೆಯ ಮೈಸೂರು ಜನರಿಗೆ ಹೊಸ ಮೈಸೂರಿನವರಿಂದ ಅನ್ಯಾಯವಾಗುವುದಿಲ್ಲ ಎಂದು ಇಷ್ಟರವರೆಗೆ ಸುಮ್ಮನೆ ಕೂತುಕೊಂಡಿದ್ದಾರು. ಇನ್ನು ಮುಂದೆ ಈ ರೀತಿಯ ಅನ್ಯಾಯವನ್ನು ಅವರು ನೋಡಿ ಸುಮ್ಮನೆ ಇರಲಾರರು. ಶ್ರೀಮಾನ್ ರಾಮೇಗೌಡರು ಈಗ ಮಾತನಾಡಿ ಪಕ್ಷದ ಹಿತದೃಷ್ಟಿಯಿಂದ ಕೆಲವು ಮಾತನ್ನು ಹೇಳಿದರು. ನಾನಾದರೂ ಕೇಳುತ್ತೇನೆ—ನಿಮಗೆ ಮಂತ್ರಿ ಪದವಿ ಮುಖ್ಯವೋ ಅಥವಾ ದೇಶ ಮುಖ್ಯವೋ ? ಜನರಿಗೆ ನೀವು ಏನು ಮಾಡಿದ್ದೀರಿ? ನಿಮ್ಮ ಮನೆಯಲ್ಲ ಏನಾದರೂ ನಿಮ್ಮ ಮಗುವಿಗೆ ಅಥವಾ ನಿಮ್ಮ ಸುಮಂಗಲಿಯವರಿಗೆ ಏನಾದರೂ ನೋವು, ಖಾಯಿಲೆ ಬಂದರೆ ಎಷ್ಟು ಜನರು ಡಾಕ್ಟರನ್ನು ಕರೆಸುತ್ತೀರಿ ? ಆದರೆ ಹಳೆಯ ಮೈಸೂರಿನ ಜನರಿಗೆ ಮಾಡಬಾರದ ಅನ್ಯಾಯವನ್ನು ಮಾಡುತ್ತಿದ್ದೀರಿ. ಮಾನ್ಯ ಚನ್ನಬಸಪ್ಪನವರು ಈಗ ನಂಜೇಗೌಡರನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ. ಅವರಿಗೆ ಮಾತೆತ್ತಿದ್ದರೆ ಸಿಟ್ಟು ಬರುತ್ತದೆ. ಏಕೆಂದರೆ ಅವರಿಗೆ ಈ ಕಡೆ ಕೂತು ಮಾತನಾಡಿ ಹೆಚ್ಚು ಅಭ್ಯಾಸ. ಮಂತ್ರಿಮಂಡಲದಲ್ಲಿ ಗಂಡಸರಾಗಿದ್ದುಕೊಂಡು ಈ ರೀತಿ ದುರ್ನಡತೆಯ ದಾರಿಯಲ್ಲಿ ಹೋಗುವುದು ಸರಿಯಲ್ಲ. ನಾನಾದರೂ ಹೇಳುತ್ತೇನೆ—ಇವತ್ತು ನಮ್ಮ ರಾಜ್ಯದಲ್ಲಿ ಹೆಣ್ಣು ಮಕ್ಕಳ ಮಂತ್ರಿಮಂಡಲ ಅತ್ಯಾವಶ್ಯಕ ಎಂದು. ಹಳೆಯ ಮೈಸೂರಿನ ತಾಯಂದಿರು ನಿಷ್ಪಕ್ಷಪಾತವಾಗಿ ಆಡಳಿತ ನಡೆಸಬಹುದು, ಮೈಸೂರಿಗೆ ಏನಾದರೂ ಕಲ್ಯಾಣವಾಗಬೇಕಾದರೆ, ಹಳೆಯ ಮೈಸೂರು ಮತ್ತು ಹೊಸ ಮೈಸೂರು ಪ್ರದೇಶದಲ್ಲಿ ಹೆಚ್ಚು ನೀರಾವರಿ ಕಾಮಗಾರಿಗಳನ್ನು

ಮಾಡಬೇಕು. ಇವತ್ತು ನಮ್ಮಲ್ಲಿಗೆ ಕೆರೆಗಳನ್ನು ಜಳತೆ ಮಾಡತಕ್ಕ ಒಬ್ಬ ಇಂಜಿನಿಯರ್‌ಯು ಅಲ್ಲಿ ನರಗೆ ವರ್ಗ ಮಾಡಿದರೆ, ಯಾರೂ ಅಲ್ಲಿಗೆ ಹೋಗುವುದಿಲ್ಲ. ಕಾರಣವೇನೆಂದರೆ, ಅಲ್ಲಿ ಬಿಲ್ ಮಾಡುವ ಕೆಲಸ ಇರುವುದಿಲ್ಲ. ಆದ್ದರಿಂದ ಯಾರು ಮೈಸೂರು ರಾಜ್ಯದ ಜನತೆಗೆ ದೇವರ ಮುಂದೆ ನ್ಯಾಯ ದೊರಕಿಸಿಕೊಡುತ್ತೇವೆಂದು ಹೇಳುತ್ತಾರೋ ಅಂಥ ಅಧಿಕಾರಿಗಳು, ಇದ್ದರೆ ಈ ಇನ್‌ವೆಸ್ಟಿಗೇಷನ್ ಡಿವಿಜನ್‌ನಲ್ಲಿ ಕೆಲಸ ಮಾಡುವುದಕ್ಕೆ ಕಳಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸುದೈವದಿಂದ ನಮ್ಮ ಕಮಿಷನರ್ ಮತ್ತು ಸೆಕ್ರಟರಿಯಾದವರು ಒಳ್ಳೆಯವರು ಈಗ ಬಂದಿದ್ದಾರೆ, ಅವರ ಹತ್ತಿರ ನಾನು ಕೇಳಿಕೊಳ್ಳುವುದು ಏನೆಂದರೆ ಯಾರು ಒಳ್ಳೆಯ ಸತ್ಯವಂತರು ಇದ್ದಾರೆ, ಯಾರು ಯುವಕರು ಇದ್ದಾರೆ, ಅಂಥ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು ; ಮತ್ತು ಅವರಿಂದ ಹೆಚ್ಚಿಗೆ ಪ್ರೊಜೆಕ್ಟುಗಳ ಸರ್ವೆ ಆಗಬೇಕು. ರಾಜ್ಯವು ಸಂಪತ್‌ಭರಿತವಾಗಬೇಕಾದರೆ, ನೀರಾವರಿ ಕಾಮಗಾರಿಗಳು ಹೆಚ್ಚು ಆಗಬೇಕು. ಹಳೆಯ ಮೈಸೂರಿನಲ್ಲಿ ಕಟ್ಟಿರತಕ್ಕಂತಹ ಕೆರೆಗಳಿಗೆ ಕೆರೆ ಇದ್ದರೆ ಕೋಡಿ ಇರುವುದಿಲ್ಲ ; ಕೋಡಿ ಇದ್ದರೆ ತೂಬು ಇರುವುದಿಲ್ಲ ; ಇವೆಲ್ಲ ಇದ್ದರೆ ನೀರು ಇರುವುದಿಲ್ಲ. ಹೀಗೆ ಆಗಿದೆ ಅಲ್ಲಿಯ ಪರಿಸ್ಥಿತಿ.

ಇನ್ನು ಎಲೆಕ್ಟ್ರಿಸಿಟಿ ಇಲಾಖೆಯ ಬಗ್ಗೆ ಹೇಳುವುದಾದರೆ, ಇವತ್ತು ರೈತನು ಉದ್ಧಾರವಾಗಬೇಕಾದರೆ ಎಲೆಕ್ಟ್ರಿಸಿಟಿ ಚೆನ್ನಾಗಿ ಕೆಲಸ ಮಾಡಬೇಕು. ಯಾವ ದೇಶದಲ್ಲಿ ಒಂದು ರೂಪಾಯಿಗೆ 15 ಸೇರು ಅಕ್ಕಿ ಸಿಗುತ್ತಿತ್ತೋ, ಆ ದೇಶದಲ್ಲಿ ಇಂದು ಬರಗಾಲದ ಪರಿಸ್ಥಿತಿ ಬಂದು ಬಿಟ್ಟಿದೆ. ಇದರಿಂದ ನಮ್ಮ ರಾಜ್ಯ ಹಾಳಾಗಿ ಹೋಗುತ್ತಿದೆ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ ನೀವು ಏನಾದರೂ ಮಾಡಿ ನಮ್ಮ ರಾಜ್ಯದ ಜನರಿಗೆ ಸ್ವಲ್ಪ ನೀರಾದರೂ ಕುಡಿಸಬಾರದೆ ? ಮೊದಲು ಅಧಿಕಾರಕ್ಕೆ ಬರುವ ಮೊದಲು ಜನರಿಗೆ ಅಮೃತ ಕುಡಿಸುತ್ತೇವೆಂದು ಹೇಳಿದ್ದರು. ಆದರೆ ಈಗ ಇವರು ಅಧಿಕಾರಕ್ಕೆ ಬಂದ ಮೇಲೆ ಅಮೃತ ಬಿಟ್ಟು ಕುಡಿಯುವುದಕ್ಕೆ ನೀರು ಸಹ ಇಲ್ಲ. ಆ ಮಟ್ಟಿಗೆ ತಂದಿದ್ದಾರೆ. ನಮ್ಮ ಹಳೆಯ ಮೈಸೂರಿನ ಜನರು ಬಹಳ ದಿವಸದಿಂದ ಇದನ್ನು ನೋಡಿಕೊಂಡು ಬಂದಿದ್ದಾರೆ. ಇನ್ನು ಮುಂದೆ ಬಿಡುವುದಿಲ್ಲ. ಈಗಾಗಲೇ ಎಲ್ಲಾ ತಾಲೂಕುಗಳಲ್ಲಿ ಇದರ ಬಗ್ಗೆ ಪ್ರತಿಭಟನೆಯನ್ನು ಪ್ರಾರಂಭ ಮಾಡಿದ್ದಾರೆ. ಇನ್ನು ಮೇಲೆ ಮಂತ್ರಿಯವರ ಚೇಂಬರಿಗೆ ಸಹ ನುಗ್ಗುತ್ತಾರೆ ಎಂಬ ಎಚ್ಚರಿಕೆಯನ್ನು ಕೊಡುತ್ತೇನೆ. ಇನ್ನು ಇಲಾಖೆಯಲ್ಲಿ ತಾಂಡವವಾಡುತ್ತಿರುವ ಲಂಚಗುಳಿತನವನ್ನು ಕಡಿಮೆ ಮಾಡಬೇಕು. ಒಳ್ಳೆಯ ದಕ್ಷ ಅಧಿಕಾರಿಗಳನ್ನು ಮತ್ತು ಪ್ರಾಮಾಣಿಕವಾದ ಅಧಿಕಾರಿಗಳನ್ನು ಮುಖ್ಯ ಸ್ಥಾನದಲ್ಲಿ ಇಡದಿದ್ದರೆ ಈ ಇಲಾಖೆಯಲ್ಲಿ ಲವಲೇಶವಾದರೂ ಕೆಲಸವಾಗುವುದಿಲ್ಲ. ಎಲ್ಲೆಲ್ಲಿ ಕೆರೆ ಕಟ್ಟೆ, ಪಿಕಪ್ ಆಗಬೇಕೆಂಬುದರ ಪಟ್ಟಿಯನ್ನು ನಾನು ಕೊಡಲು ತಯಾರಾಗಿದ್ದೇನೆ. ಆದ್ದರಿಂದ ಈ ವಿದ್ಯುಚ್ಛಕ್ತಿ ಇಲಾಖೆಯಿಂದ ರೈತರಿಗೆ ಏನು ಕಿರುಕುಳವಾಗುತ್ತದೆ, ಅದನ್ನು ತಪ್ಪಿಸಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಒಂದು ದಿನದಲ್ಲಿ ಸುಮಾರು 10—15 ಸಾರಿ ವಿದ್ಯುಚ್ಛಕ್ತಿ ಫೈಲ್ಯೂರ್ ಆಗುತ್ತದೆ ರೈತ ನೀರು ಕಟ್ಟುವುದಕ್ಕೆ ಹೋದರೆ, ನೀರು ಬಿಟ್ಟ ಅರ್ಧ ಗಂಟೆಯಲ್ಲೇ ವಿದ್ಯುಚ್ಛಕ್ತಿ ನಿಂತುಹೋಗುತ್ತದೆ. ಇದನ್ನು ಸಹ ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ಇಲಾಖೆಯಲ್ಲಿ ಹೊಸ ಹೊಸ ರಸ್ತೆ ಕಾಮಗಾರಿಗಳನ್ನು ಏನೂ ಮಾಡಿಲ್ಲ. ಹಳೆಯ ಮೈಸೂರು ಭಾಗದಲ್ಲಿ ಕೆಲವು ಕಡೆ ಇಂಥ ಕೆಲಸಗಳಿಗೆ ಗುದ್ದಲಿ ಪೂಜೆಗಳನ್ನು ನಮ್ಮ ಹತ್ತಿರ ಮಾಡಿಸಿ, ಒಂದು ಪಾಪದ ಕೆಲಸ ಮಾಡಿದ್ದಾರೆ. ಇನ್ನೊಂದು ವಿಚಾರವೇನೆಂದರೆ, ವಿರೋಧ ಪಕ್ಷದ ಸದಸ್ಯರು ಎಲ್ಲಿದ್ದಾರೆ, ಅಲ್ಲಿ ಅಂಥ ಕಾಮಗಾರಿಗಳನ್ನು ಮಾಡಕೂಡದು ಎಂದು ಹೇಳಿದ್ದಾರಂತೆ. ಅದೇ ರೀತಿ ಈಗ ಹೊಸತಾಗಿ ಎಲ್ಲಿ ತಮ್ಮ ಪಕ್ಷದ ಜನರು ಇದ್ದಾರೆ, ಅಲ್ಲಿ ಕೂಡ ಮಾಡಕೂಡದು ಎಂದು ಹೇಳುವುದಕ್ಕೆ ನಿನ್ನೆಯಿಂದ ಶುರು ಮಾಡಿದ್ದಾರಂತೆ.

[MR. DEPUTY SPEAKER in the Chair]

3-30 P.M.

ಕೆಲವರ ಯೋಗ್ಯತೆ ಚೆನ್ನಾಗಿಲ್ಲವೆಂದು ಅವರ ಪಕ್ಷದವರೇ ಹೇಳಿದ ಮೇಲೆ ಈ ರೀತಿಯಾಗಿ ನಡೆಯುತ್ತಿದೆ. 43 ಜನರು ರುಜು ಹಾಕಿದ್ದಾರೆ. ಅಂತಹವರನ್ನು ಕೂಡಲೇ ತೆಗೆದುಹಾಕಬೇಕು.

ಶ್ರೀ ವಾಟಾಳ್ ನಾಗರಾಜ್.—ಯಾರ್‍ಯಾರನ್ನು ತೆಗೆಯಬೇಕೆಂಬುದಾಗಿ ತಮ್ಮ ಹತ್ತಿರ ಪಟ್ಟಿ ಇದ್ದರೆ ಹೇಳಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಂತಹ ಪಕ್ಷಪಾತ ನೀತಿಯನ್ನು ತಾವು ಅಧಿಕಾರದಲ್ಲಿ ಇರುವ ವರೆಗೂ ಮಾಡಬಾರದು. ಅವರು ಅಧಿಕಾರ ವಹಿಸಿಕೊಂಡ ಮೇಲೆ ನ್ಯಾಯ ನೀತಿಯಿಂದ ಎರಡು ಕಣ್ಣುಗಳಿಂದ ನೋಡಬೇಕು. ಇದರಿಂದ ಎರಡು ಕಣ್ಣುಗಳಿಗೂ ಚುಚ್ಚಿಕೊಳ್ಳಬೇಡಿ, ಅದನ್ನು ನಾನು ಸವಿಸ್ತಾರವಾಗಿ ಹೇಳುತ್ತೇನೆ. ಹಳೆಯ ಮೈಸೂರು ಮತ್ತು ಹೊಸ ಮೈಸೂರು ಎಂಬುದು ಆಡಳಿತ ದೃಷ್ಟಿಯಲ್ಲಿ ಎರಡು ಕಣ್ಣುಗಳಾಗಿ ಉಳಿಯಬೇಕು. ಒಟ್ಟಿನಲ್ಲಿ ಪಕ್ಷಪಾತವಿಲ್ಲದೆ ಇರುವ ಹಾಗೆ ಆಡಳಿತವನ್ನು ನಡೆಸಬೇಕು. ಮಲತಾಯಿ ಧೋರಣೆ ಮಾಡಬಾರದು. ಹಳೆಯ ಮೈಸೂರಿಗೆ ಬೇರೆ ರೀತಿ ನೋಡಿ ಒಂದು ಕಣ್ಣನ್ನು ಚುಚ್ಚಿಕೊಂಡರೆ ನಮಗೆ ಎಷ್ಟು ನೋವಾಗುತ್ತದೆಂಬುದನ್ನು ನೋಡಬೇಕು. ಹಳೆಯ ಮೈಸೂರಿಗೆ ಅನ್ಯಾಯ ಮಾಡಿದರೆ ನಮಗೆ ಬಹಳ ನೋವಾಗುತ್ತದೆ. ಹೊಸ ಮೈಸೂರಿಗೂ ಅನ್ಯಾಯ ಮಾಡಿದರೆ ಅವರಿಗೆ ನೋವಾಗುತ್ತದೆ. ಆದ್ದರಿಂದ ನಿಷ್ಪಕ್ಷಪಾತವಾದ ಆಡಳಿತವನ್ನು ನಡೆಸಬೇಕು. ನಮ್ಮಲ್ಲಿ ಇನ್ನೂ ಅನೇಕ ಯುವಕಮಂತ್ರಿಗಳು ಇದ್ದಾರೆ. ಅವರು ಇನ್ನೂ ಮುಂದೆ ಬಹಳವಾಗಿ ಬೆಳೆಯಬೇಕಾಗಿರುವವರು. ಅವರು ಉತ್ಸಾಹದಿಂದ ರಾಜ್ಯದ ಶ್ರೇಯೋಭಿವೃದ್ಧಿಗೋಸ್ಕರ ಹೆಚ್ಚಿನ ಸೇವೆ ಮಾಡಿ ಈ ರಾಜ್ಯದಲ್ಲಿ ಹಿರಿಯರಿಂದ ಒಳ್ಳೆಯ ಆಶೀರ್ವಾದವನ್ನು ಪಡೆಯಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನಗೆ ಒಂದು ಅನುಮಾನವಾಗಿದೆ, ಈಗಿನ ನಡವಳಿಕೆಯಲ್ಲಿ ಮಂತ್ರಿಮಂಡಲ ಬದಲಾವಣೆಯಾಗುತ್ತದೆಂಬುದೂ ನಮಗೂ, ನಿಮಗೂ ಗೊತ್ತಿದೆ. ಆದರೆ ಮಾನ್ಯ ಶ್ರೀ ಪುಟ್ಟಸ್ವಾಮಯ್ಯನವರಿಗೆ ಈ ಮಂತ್ರಿಮಂಡಲದಲ್ಲಿ ಅನೇಕರು ಇಲ್ಲಿಯೇ ಉಳಿಯುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರೇ ಆಶೀರ್ವಾದ ಮಾಡುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ.

MR. DEPUTY SPEAKER.—Once in a way interruption is all right. But if it becomes a running commentary, it becomes ridiculus.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹಿರಿಯರು. ಅವರಿಗೆ ಆಶೀರ್ವಾದ ಮಾಡುವ ಹಕ್ಕು ಇದೆ.

ಅಧ್ಯಕ್ಷರು.—ತಾವು ಈ ಲರ್ಡ್ ಆದರೆ ತಮ್ಮ ಟೈಂ ಹೋಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ಮೈಸೂರಿನ ಕೆಲವು ಭಾಗಗಳಲ್ಲಿ ಉತ್ಸಾಹದಿಂದ ನೀರನ್ನು ಈಗಲೇ ಕೊಡುತ್ತೇವೆಂದು ನೀರು ಬಿಡುವ ಭಾಷಣವನ್ನು ಮಾಡಿದ್ದೇ ಮಾಡಿದ್ದು. ಆ ಕೆಲಸ ಬಹಳ ರಭಸದಲ್ಲಿ ನಡೆಯುತ್ತದೆಂದೂ ಹೇಳಿದ್ದಾರೆ. ಇವರು ಹೇಳಿದ ಪ್ರಕಾರ ಎಲ್ಲಿ ನೀರು ಬಿಡಬೇಕೋ ಅಲ್ಲಿ ಬಿಟ್ಟಿಲ್ಲ. ಹರಿಜನರ ಕೇರಿ ಬಳಿ ಹೋಗಿ ಸಿಕ್ಕಾಬಟ್ಟೆ ಹೇಳಿಕೆಯನ್ನು ಮಾಡಿ ಅಲ್ಲಿಯೂ ನೀರು ಬಿಡುತ್ತೇವೆಂದು ಹೇಳಿದ್ದಾರೆ. ಒಬ್ಬ ಮಂತ್ರಿ ಹೇಮಾವತಿ ನೀರನ್ನು ಚಿಕ್ಕನಾಯಕನಹಳ್ಳಿಯ ಕಡೆಯವರೆಗೂ ನೀರು ಬಿಡುತ್ತೇವೆಂದು ಹೇಳಿದ್ದಾರೆ. ಹೀಗೆ ನೀರು ಬಿಡುವ ವಿಷಯದಲ್ಲಿ ನಿಮ್ಮ ಉತ್ಸಾಹ ಮಂತ್ರಿಗಳು ಜವಾಬ್ದಾರಿಯಿಂದ ನೋಡಿ ಹೇಳಬೇಕು. ಇನ್ನು ಮುಂದೆ ಆಯಾ ಸ್ಥಳಗಳಿಗೆ ನೀರು ಬಿಡುವ ವ್ಯವಸ್ಥೆಯನ್ನು ಅಧಿಕಾರಿಗಳ ಮುಖಾಂತರ ಮಾಡಬೇಕೇ ಶಿವಾಯಿ ಬರೀ ನಿಮ್ಮ ಭಾಷಣದಲ್ಲಿ ನೀರು ಬಿಡುತ್ತೇವೆಂದು ಹೇಳುವುದನ್ನು ತಡೆಹಿಡಿಯಬೇಕು. ನಮ್ಮ ರಾಜ್ಯದಲ್ಲಿ ಎಲ್ಲರೂ ಸೇರಿ ಒಳ್ಳೆಯ ಸರ್ಕಾರವನ್ನು ಸೃಷ್ಟಿಮಾಡಲಿ ದೇಶಾಭಿವೃದ್ಧಿಗೋಸ್ಕರ ಸರ್ಕಾರದವರು ಒಳ್ಳೆಯ ಕೆಲಸವನ್ನು ಮಾಡಬೇಕು. ನಾನು ನಮ್ಮ ಮೈಸೂರಿಗೋಸ್ಕರ ಒಳ್ಳೆಯ ಕೆಲಸವನ್ನು ನಾನು ಇಲ್ಲ ಇದ್ದ ಕಡೆಯಿಂದಲೇ ಮಾಡಬಹುದು. ಆ ಪಕ್ಷದಲ್ಲಿ ಇದ್ದುಕೊಂಡೇ ಮಾಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ಒಳ್ಳೆಯ ಕೆಲಸವನ್ನು ಈ ದೇಶದಲ್ಲಿ ಮಾಡಿಸಬೇಕು. ಇಲ್ಲದಿದ್ದರೆ ಯಾರು ಈ ಮಂತ್ರಿಗಳ ಮಾತನ್ನು ಕೇಳುವುದಿಲ್ಲ. ಸತ್ಯವಂತರು ಅಂತಹವರು ಎಲ್ಲಿ ಸಿಕ್ಕಿದರೂ ಅಲ್ಲಿ ಬಲ ಹೊಡೆಯುತ್ತಾರೆಂದು ಕೈಮುಗಿದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಮಂತ್ರಿಯವರು ಮಂಡಿಸಿರತಕ್ಕ ಬೇಡಿಕೆಯನ್ನು ಸಮರ್ಥಿಸುತ್ತಾ ಈ ಹಣವನ್ನು ವ್ಯಯಮಾಡುವಾಗ ಏನು ಈ ಇಲಾಖೆಗೆ ಒಂದು ಒಳ್ಳೆಯ ಹೆಸರಿತ್ತೋ ಆ ಒಂದು ಹೆಸರಿನಂತೆ ಇದು ಲೋಕಕ್ಕೇ ಉಪಯೋಗವಾಗುವ ಇಲಾಖೆ ಎಂಬುದು ಅಕ್ಷರಶಃ ಮತ್ತು ಅರ್ಥಶಃ ನಿಜವಾಗಿದೆ. ಆ ಒಂದು ಕೆಲಸವನ್ನು ಮೊದಲೇ ನಾವು ಆಶಿಸಿದ್ದರೂ, ಅದರ ಬಗ್ಗೆ ನಾನು ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯ ಅರ್ಥ ಕರ್ನಾಟಕ ರಾಜ್ಯವಾಗಿರುವಷ್ಟು ಪ್ರದೇಶದಲ್ಲಿದ್ದರೂ ಈ ಲೋಕೋಪಯೋಗಿ ಇಲಾಖೆ ಆ ಒಂದು ನಕಾಶೆಯಲ್ಲಿ ಅತಿ ಪ್ರಾಮುಖ್ಯವಾದ ಒಂದು ಸ್ಥಾನವನ್ನು ಪಡೆದುಕೊಂಡಿರುವುದು ಎಲ್ಲರಿಗೂ ಒಂದು ಹೆಮ್ಮೆಯ ವಿಷಯವಾಗಿದೆ. ದಿವಂಗತ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು ನಮ್ಮ ರಾಜ್ಯಕ್ಕೆ ಒದಗಿಸಿಕೊಟ್ಟಂಥ ಈ ಕೀರ್ತಿಯನ್ನು ಉಳಿಸಿಕೊಂಡು ಹೋಗತಕ್ಕದ್ದು, ಬೆಳೆಸಿಕೊಂಡು ಹೋಗತಕ್ಕದ್ದು ನಮ್ಮೆಲ್ಲರ ಕರ್ತವ್ಯ. ಹಾಗೆಯೇ ನವೀನ ಇಂಜನೀಯರುಗಳು ಮತ್ತು ತಾಂತ್ರಜ್ಞರು, ಶಿಲ್ಪಿಗಳು ಅತಿ ದೂರದಲ್ಲಿ ಸಾಗಿ ನಮ್ಮ ರಾಜ್ಯದ ಹೆಸರನ್ನು ಬಹಳ ಒಳ್ಳೆಯ ಸ್ಥಿತಿಯಲ್ಲಿಟ್ಟಿದ್ದಾರೆ. ಆದರೂ ಕೂಡ ಯಾವಾಗ ಬೇರೆ ರಾಜ್ಯಗಳು ನೀರಾವರಿ ಒಂದು ಉದ್ಯಮದಲ್ಲಾಗಲೀ ವಿದ್ಯುಚ್ಛಕ್ತಿ ಉದ್ಯಮದಲ್ಲಾಗಲೀ ಹಿಂದಿದ್ದುವೋ, ಎಲ್ಲಾ ರಾಜ್ಯಗಳಿಗೆ ಮೈಸೂರು ರಾಜ್ಯ ಮುಂದೆ ಇದ್ದು ಏನೊಂದು ಒಳ್ಳೆಯ ಹೆಸರನ್ನು ಪಡೆದಿತ್ತೋ ಈಗ ದುರದೃಷ್ಟವಶಾತ್ ನಮ್ಮ ಮೈಸೂರು ಅನೇಕ ರಾಜ್ಯಗಳ ಹಿಂದೆ ಹೋಗಿರತಕ್ಕದ್ದು ಒಂದು ದುಃಖ ಅಥವಾ ವ್ಯಥೆಯಿಂದ ಕೂಡಿರತಕ್ಕ ವಿಷಯವಾಗಿದೆ. ಇದಕ್ಕೆ ಏನೇ ಕಾರಣವಿರಲಿ, ಹಿಂದೆ ಆಳುವ ಪಕ್ಷದವರಾಗಲೀ, ವ್ಯಕ್ತಿಗಳು ಯಾರೇ ಆಗಿರಲಿ, ಈಗ ಇದನ್ನು ಸರಿಪಡಿಸಿಕೊಂಡು ಮತ್ತೊಮ್ಮೆ ಮೈಸೂರು ರಾಜ್ಯದ ಹಾಗೂ ಕರ್ನಾಟಕ ರಾಜ್ಯದ ಹಿರಿಮೆಯನ್ನು ಎತ್ತಿ ಹಿಡಿಯತಕ್ಕ ಸದವಕಾಶ ತಾಂತ್ರಜ್ಞರಿಗೂ, ಆಡಳಿತಗಾರರಿಗೂ, ಮಂತ್ರಿ ಮಂಡಲಕ್ಕೂ, ಹಾಗೂ ಶಾಸನಸಭಾ ಸದಸ್ಯರಿಗೂ ದೊರಕಿದೆ. ಅದು ಎಲ್ಲರ ಜವಾಬ್ದಾರಿಯೂ ಸಹ ಆಗಿರುತ್ತದೆ, ಹೀಗೆ ಒದಗಿರತಕ್ಕ ಅವಕಾಶವನ್ನು ತೆಗೆದುಕೊಂಡು ಈ ಒಂದು ಕ್ಷೇತ್ರದಲ್ಲಿ ಹೆಚ್ಚಿನ ಬದಲಾವಣೆಗಳನ್ನು ಮಾಡಿ ಒಳ್ಳೆಯ ಹೆಸರನ್ನು ಪಡೆಯಬೇಕು.

ಇನ್ನೊಂದು ವಿಷಯ. ಈಗ ನಾವು ಎಷ್ಟು ಪ್ರಯತ್ನಪಟ್ಟರೂ ಕೂಡ ಇಲ್ಲಿಯವರೆಗೂ ಮೈಸೂರು ರಾಜ್ಯದಲ್ಲಿ ಸೇಕಡ 16ರಷ್ಟು ನೀರಾವರಿ ವ್ಯವಸಾಯದಲ್ಲಿ ಮುಟ್ಟಿಲ್ಲ. ಸೇಕಡ 32 ರಷ್ಟು ಮುಟ್ಟುವ ಹಾಗೆ ಭರವಸೆಯನ್ನು ಮಾಡಬೇಕು. ಆ ವಿಷಯದಲ್ಲಿಯೂ ಸರ್ಕಾರದವರು ಸೂಕ್ತ ಕಾರ್ಯ ಕ್ರಮವನ್ನು ಹಾಕಿಕೊಂಡು ಕೂಡಲೇ ಅನೇಕ ಯೋಜನೆಗಳನ್ನು ಪ್ರಾರಂಭಿಸಬೇಕು ಎಂಬುದಾಗಿ ನಾನು ನಿಮ್ಮ ಮುಖಾಂತರ ಸರ್ಕಾರದವರನ್ನು ಭಿನ್ನೈಸಿಕೊಳ್ಳುತ್ತೇನೆ. ಇಂತಹ ಕೆಲಸಗಳನ್ನು ತರಾತುರಿಯಿಂದ ಅತ್ಯಾತುರದಿಂದ ಪ್ರಾರಂಭಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಈ ರಾಜ್ಯಕ್ಕೆ ಬರಗಾಲ ಪರಿಸ್ಥಿತಿ ಇಷ್ಟು ಕಠಿಣವಾಗಿ ಒದಗುತ್ತಿರಲಿಲ್ಲವೆನ್ನುವ ವಿಷಯ ನನಗೆ ಈಗ ಭಾಸವಾಗುತ್ತದೆ. ಮಾಧ್ಯಮ ನೀರಾವರಿ, ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಈ ವೇಳೆಗೆ ಮುಗಿಸಿದ್ದರೆ, ಅಭಾವ ಪರಿಸ್ಥಿತಿಯಲ್ಲಿರುವ ಜನರಿಗೆ ಹಾಗೂ ದುಃಖ ಸ್ಥಿತಿಯಲ್ಲಿರುವ ಜನರಿಗೆ ಹೆಚ್ಚಿನ ಉಪಯೋಗವಾಗುತ್ತಿತ್ತು. ಅತ್ಯಂತ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಿದ್ದರು. ತಮಿಳುನಾಡಿನವರು ತಮ್ಮದೇ ಆದಂಥ ಕೆಲವು ಯೋಜನೆಗಳನ್ನು ಹಾಕಿಕೊಂಡು ಕಾವೇರಿ ನದಿಯ ಮುಕ್ಕಾಲು ಪಾಲು ನೀರನ್ನು ಅಂದರೆ ಹೆಚ್ಚು ಭಾಗದ ನೀರನ್ನು ಉಪಯೋಗಿಸಿಕೊಂಡು ನಮಗೆ ಇನ್ನೂ ಹೆಚ್ಚಿಗೆ ನೀರು ಬೇಕೆಂದು ಕೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಇನ್ನೂ ಆ ನೀರನ್ನು ಹೆಚ್ಚಿಗೆ ಉಪಯೋಗಿಸಿಕೊಳ್ಳಲಿಲ್ಲ. ಇದರಲ್ಲಿ ನಾವು ವಿಫಲರಾಗಿರುವುದು ನಮ್ಮ ದುರದೃಷ್ಟವೇ ಸರಿ. ಈಗಲಾದರೂ ಕಾಲಮಿಂಚಿಲ್ಲ. ನಮಗೆ ಇದರಲ್ಲಿ ಅನ್ಯಾಯವಾಗುವುದಕ್ಕೆ ಮೊದಲೇ ಆ ನದಿಯ ಪಕ್ಕದಲ್ಲಿರುವ ಎಲ್ಲಾ ಯೋಜನೆಗಳನ್ನು ಸಕಾಲದಲ್ಲಿ ಮುಗಿಸಬೇಕು, ನಮಗೆ ನ್ಯಾಯವಾಗಿ ದೊರಕಬೇಕಾದಂಥ ನೀರನ್ನು ಚಾಚೂ ಬಿಡದೆ ಅದನ್ನು ನಮ್ಮ ರಾಜ್ಯಕ್ಕೆ ಒದಗಿಸಿಕೊಡುವ ಪ್ರಯತ್ನವನ್ನು ಕೇಂದ್ರ ಸರ್ಕಾರ ನೀಡಬೇಕೆಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಉಳಿದಂಥ ಯೋಜನೆಗಳು ಅಂದರೆ, ಕೃಷ್ಣಾ ಬಲದಂಡೆ ಯೋಜನೆ, ಭದ್ರಾ ಯೋಜನೆ, ಹೊಸ ಮೈಸೂರು ಪ್ರದೇಶದಲ್ಲಿರತಕ್ಕ ಕಾರಂಜಿ ಯೋಜನೆ—ಇವೆಲ್ಲ ಯೋಜನೆಗಳ ಪ್ರಯತ್ನವನ್ನು ನಮ್ಮ ಸರ್ಕಾರದವರು ಮಾಡಿದ್ದಾರೆ. ಅದಕ್ಕಾಗಿ ನಾನು ಮಂತ್ರಿಮಂಡಲದವರನ್ನು ಅಭಿನಂದಿಸಬೇಕಾಗಿದೆ. ಕೆಲಸಕಾರ್ಯಗಳು ಆದಷ್ಟು ಕ್ಷಿಪ್ರವಾಗಿ ಮುಗಿಯಬೇಕಾಗಿದೆ. ಆ ಕೆಲಸಕಾರ್ಯಗಳನ್ನು ಮುಕ್ತಾಯ ಮಾಡಿ ಜನಗಳಿಗೆ ಹೆಚ್ಚಿಗೆ ಅನುಕೂಲವಾಗುವ ಪ್ರಯತ್ನಗಳನ್ನು ಮಾಡಿದ್ದಾರೆ. ಈ ದೇಶದಲ್ಲಿ ಕೆಲಸಗಳು ಚೆನ್ನಾಗಿ ನಡೆಯಬೇಕು. ಯುದ್ಧಕಾಲದಲ್ಲಿ ಏನೊಂದು ಸಮರ ಅಭ್ಯಾಸ ಮಾಡುವಾಗ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳುತ್ತೇವೋ ಕಡ್ಡಾಯವಾಗಿ ಏನೇನು ಸಾಧ್ಯವೋ ಆ ಕಾರ್ಯಗಳನ್ನು 24 ಗಂಟೆಯೊಳಗಾಗಿ ಮಾಡಿಕೊಳ್ಳುತ್ತೇವೋ ಅದೇ ರೀತಿಯಾಗಿ ಎಡೆಬಿಡದಂತೆ ಈ ನಾಡಿಗೆ ನೀರಾವರಿ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆಯೇ ಗ್ರಾಮಾಂತರ ಪ್ರದೇಶಗಳಲ್ಲಿ ಬರೀ ನೀರಾವರಿ ಯೋಜನೆಗಳು, ಮಾಧ್ಯಮ ನೀರಾವರಿ ಯೋಜನೆಗಳು ಇಲ್ಲದೇ ಇರುವ ಪ್ರದೇಶಗಳೂ ಬಹಳವಾಗಿವೆ. ಅಂತಹ ಕಡೆಗಳಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು

ಶ್ರೀ ಡಿ. ಹಲಗೇಗೌಡ

ಮಾಡುವುದು ಬಹಳ ಒಳ್ಳೆಯದು. ಈ ಬಾಬಿನಲ್ಲಿ ಎಷ್ಟೋ ಹಣ ಖರ್ಚಾಗುತ್ತಿದೆ. ಕೋಟಿ ಗಟ್ಟಲೆ ಹಣ ಖರ್ಚಾದರೂ ಸಣ್ಣ ನೀರಾವರಿ ಯೋಜನೆಗಳನ್ನು ಸಾಕಷ್ಟು ಪ್ರಾರಂಭ ಮಾಡಬೇಕು. ಈ ಬಾಬಿನಲ್ಲಿ ಎಷ್ಟು ಖರ್ಚಾದರೂ ಎಲ್ಲಿಯೂ ಸಮರ್ಪಕವಾದ ಕೆಲಸಕಾರ್ಯಗಳು ನಡೆದಿರುವುದು ನನಗೆ ಕಂಡುಬರುತ್ತಿಲ್ಲ. ಉದಾಹರಣೆಗೆ - ಮಂಡ್ಯ ಜಿಲ್ಲೆಯಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿ ಇಲ್ಲಿಗೆ 12 ವರ್ಷಗಳ ಹಿಂದೇನು ಒಂದು ಕೆಲಸ ಕಾರ್ಯಗಳು ನಡೆದಿದ್ದವೋ ಅಷ್ಟೇ ವಿನಾ ಇತ್ತೀಚೆಗೆ ಅಲ್ಲಿ ಯಾವ ಕಾಮಗಾರಿಗಳನ್ನೂ ಕೈಗೊಂಡಿರುವುದಿಲ್ಲ. ಅಲ್ಲಿ ಕೆಲವು ಇಂಜನಿಯರಿಂಗ್ ಆಫೀಸುಗಳೂ ಶಿಬ್ಬಂದಿ ಸಹಾ ಅಲ್ಲಿದ್ದರೂ, ಆ ಇಂಜನಿಯರಿಂಗ್ ಶಿಬ್ಬಂದಿಗೆ ಅಲ್ಲಿ ಒಂದು ವರ್ಷಕ್ಕೆ ಅವನ್ನು ಅಲ್ಲಿ ಮೈಂಟೈನೆನ್ಸ್ ಮಾಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತಿದೆಯೋ ಅಷ್ಟು ಹಣವನ್ನಾದರೂ ಕೂಡ ಆ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳಿಗೆ ಖರ್ಚುಮಾಡಿರುವುದಿಲ್ಲ. ಇಲ್ಲಿ ಬಡ್ಜೆಟ್ಟಿನಲ್ಲಿ ನೋಡಿದರೆ ಇಲ್ಲಿಗೆ 4—5 ವರ್ಷಗಳ ಕೆಳಗೇನು ಒಂದು ಏನು ಈ ಕಾಮಗಾರಿಗಳ ಪಟ್ಟಿಯನ್ನು ಈ ಬಡ್ಜೆಟ್ಟಿನಲ್ಲಿ ಸೇರಿಸಿದ್ದಾರೋ ಅದೇ ಕಾಮಗಾರಿಗಳ ಒಂದು ಪಟ್ಟಿ ಪ್ರತಿ ವರ್ಷದ ಬಡ್ಜೆಟ್ಟಿನಲ್ಲೂ ಬರುತ್ತಿರುತ್ತದೆ ಇಲ್ಲಿಗೆ ಕಳೆದ 4—5 ವರ್ಷಗಳಿಂದ ಪ್ರತಿ ವರ್ಷವೂ ಬಂದದ್ದೇ ಬರುತ್ತಿದೆ. ಇದರಲ್ಲಿ ಹೊಸದು ಯಾವುದೂ ಇಲ್ಲ. ಇದನ್ನು ನೋಡಿದರೆ ಇನು ಮಂಡ್ಯ ಜಿಲ್ಲೆಯಲ್ಲಿ ಯಾವ ಕೆಲಸ ಕಾರ್ಯಗಳನ್ನೂ ತೆಗೆದುಕೊಳ್ಳತಕ್ಕ ಅಗತ್ಯವೇ ಇಲ್ಲವೇನೋ ಅನ್ನುವಂತೆ ಕಾಣುತ್ತಿದೆ. ಇದೇ ರೀತಿ ಇನ್ನು ಮೂರು ನಾಲ್ಕು ವರ್ಷಗಳು ಮುಂದುವರಿದರೆ ನಾವು ಚುನಾವಣೆಗಳ ಕಾಲದಲ್ಲಿ ಜನರಿಗೇನು ಒಂದು ನಾವು ಭರವಸೆಗಳನ್ನು ಕೊಟ್ಟಿದ್ದೇವೆ ಅವುಗಳನ್ನು ಪೂರೈಸುವುದಕ್ಕಾಗಲಿ ಅಥವಾ ನಾವು ನಮ್ಮ ವಚನವನ್ನು ಉಳಿಸಿಕೊಳ್ಳುವುದಕ್ಕಾಗಲಿ ಖಂಡಿತ ಸಾಧ್ಯವಿಲ್ಲ. ಮಾಧ್ಯಮ ವರ್ಗದ ನೀರಾವರಿ ಯೋಜನೆಗಳೊಂದಕ್ಕೂ ಹಣವನ್ನು ಒದಗಿಸಿಲ್ಲ. ಸಣ್ಣ ನೀರಾವರಿ ಕಾಮಗಾರಿಗಳಿಗಾದರೂ ತಾಲ್ಲೂಕ್ ಮಟ್ಟದಲ್ಲಿ ಎಲ್ಲೆಲ್ಲಿ ಮಾಡುವುದಕ್ಕೆ ಅವಕಾಶವಿದೆಯೋ ಅಲ್ಲಿ ಆ ಯೋಜನೆಗಳನ್ನು ತಯಾರು ಮಾಡಿ ಅವುಗಳನ್ನು ಕಾರ್ಯಗತ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಸರ್ಕಾರದವರ ಭಾವನೆಯಲ್ಲಿ ಮಂಡ್ಯ ಜಿಲ್ಲೆ ಬಹಳ ಸಿರಿವಂತರ ಜಿಲ್ಲೆ ಎಂದು ಪರಿಗಣಿಸಿರುವಂತೆ ಕಾಣುತ್ತಿದೆ. ಅದು ಸರಿಯಲ್ಲ. ಮಂಡ್ಯ ಜಿಲ್ಲೆಯಲ್ಲಿ ಶೇ : 40 ರಷ್ಟು ನೀರಾವರಿ ಸೌಕರ್ಯಗಳಿದ್ದರೂ ಇನ್ನುಳಿದ ಶೇ : 60 ರಷ್ಟು ಪ್ರದೇಶ ಪೂರ್ಣ ಬೆಂಗಾಡು. ಅಲ್ಲಿ ಜನರಿಗೆ ಇತ್ತ ರಾಗಿ ನೀರಾವರಿ ಸೌಲಭ್ಯಗಳೂ ಇಲ್ಲ; ಅತ್ತ ಅಲ್ಲಿ ಸರಕಾರ ಯಾವ ಕೈಗಾರಿಕೆಗಳನ್ನೂ ಸ್ಥಾಪನೆ ಮಾಡಿಲ್ಲ. ಹೀಗಾಗಿ ಅಲ್ಲಿಯ ಜನರು ತಿನ್ನುವುದಕ್ಕೆ ಅನ್ನವಿಲ್ಲ ಉಡಲು ಬಟ್ಟೆಯಿಲ್ಲ, ಕೂಲಿ ಮಾಡುವುದಕ್ಕೆ ಆಸ್ಪದವಿಲ್ಲ ಬಹಳ ಕಷ್ಟದಲ್ಲಿದ್ದಾರೆ. ಹೀಗಿದ್ದರೂ ಈ ಇಡೀ ಜಿಲ್ಲೆಯನ್ನು ಇಷ್ಟು ತಾತ್ಸಾರ ಭಾವನೆಯಿಂದ ಕಾಣುವುದಕ್ಕೆ ಅಧಿಕಾರಿಗಳು ಕಾರಣರೋ ಅಥವಾ ಸರ್ಕಾರದ ಮಟ್ಟದಲ್ಲೇ ಈ ದೋಷ ಉಂಟಾಗಿದೆಯೋ ತಿಳಿಯದಾಗಿದೆ. ಆದ್ದರೆ ಒಂದೇ ಜಿಲ್ಲೆಯಲ್ಲಿ ಕೆಲವರು ಮುಂದುವರಿದಿದ್ದಾರೆ. ಆದರೆ ಅವರ ಪಕ್ಕದಲ್ಲೆ ಹಿಂದುಳಿದ ಜನರು ತಿನ್ನುವುದಕ್ಕಿಲ್ಲದವರು, ಉಡಲಿಕ್ಕಿಲ್ಲದವರೂ ವಾಸಕ್ಕೆ ಮನೆಯಿಲ್ಲದವರೂ ಇದ್ದಾರೆ. ಇದು ಸರಿಯಾದ್ದಲ್ಲ. ಸರ್ಕಾರದವರಿಗೆ ಸಾಧ್ಯವಾದರೆ ಈ ಬೆಂಗಾಡು ಪ್ರದೇಶದಲ್ಲಿ ಇರುವ ಜನರಿಗೆ ಸಣ್ಣ ನೀರಾವರಿಗಳನ್ನು ಮಾಡುವುದರ ಮೂಲಕವೋ ಅಥವಾ ಅಲ್ಲಿ ಯಾವುದಾದರೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಮೂಲಕವೋ ಸಹಾಯ ಮಾಡಲಿ. ಇಲ್ಲವಾದರೇ ಈ ಜಿಲ್ಲೆಯ ನಾಗಮಂಗಲ ಕೃಷ್ಣರಾಜಪೇಟೆ ಮತ್ತು ಪಾಂಡವಪುರ ತಾಲ್ಲೂಕುಗಳನ್ನು ಬೆಂಗಾಡು ಪ್ರದೇಶವಾದ ತುಮಕೂರು ಜಿಲ್ಲೆಗೋ ಅಥವಾ ಬೀದರ್ ಜಿಲ್ಲೆಗೋ ಸೇರಿಸಿ ಬಿಡಿ ಎಂದು ಕೇಳಿಕೊಳ್ಳುತ್ತೇನೆ. ಈ ಬೆಂಗಾಡು ತಾಲ್ಲೂಕುಗಳಲ್ಲಿ ಇರತಕ್ಕ ಜನರಿಗೆ ನಾವು ಮುಂದುವರಿದ ಜಿಲ್ಲೆಯವರೆ ಎಂದು ತಿಳಿದುಕೊಂಡಿರುವ ಜನ ತಮ್ಮ ಹೆಣ್ಣುಮಕ್ಕಳನ್ನು ಲಗ ಮಾಡಿಕೊಡುವುದಕ್ಕೂ ಹಿಂದು ಮುಂದು ನೋಡುತ್ತಿದ್ದಾರೆ. ಈ ಅಂಶವನ್ನಾದರೂ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕ್ ಘಟಕದಲ್ಲಿಯೂ ಸಾಧ್ಯವಾಗತಕ್ಕ ಎಲ್ಲ ಸಣ್ಣ ಹಾಗೂ ದೊಡ್ಡ ನೀರಾವರಿ ಯೋಜನೆಗಳನ್ನು ಅಲ್ಲಿಗೆ ಒದಗಿಸಿ ಆ ಭಾಗದ ಜನರಿಗೆ ಅನುಕೂಲಗಳನ್ನು ಕಲ್ಪಿಸುವುದು ಸರ್ಕಾರದವರ ಜವಾಬ್ದಾರಿ. ಇನ್ನು ರಸ್ತೆಗಳ ವಿಚಾರಕ್ಕೆ ಬಂದರೂ ಅಲ್ಲಿ ಕೂಡ ಕಳೆದ 8—10 ವರ್ಷಗಳಿಂದ ಯಾವ ಒಂದು ರಸ್ತೆಯ ಕೆಲಸಗಳೂ ನಡೆದಿರುವುದಿಲ್ಲ. ಯಾವುದನ್ನು ಕೇಳಿದರು ಸರ್ಕಾರದವರು ಹಣವಿಲ್ಲ ಎಂಬ ಒಂದೇ ಉತ್ತರವನ್ನು ಕೊಡುತ್ತಿದ್ದಾರೆ. ಅನೇಕ ಹೆದ್ದಾರಿಗಳು ಕೂಡ ಬಹಳ ನಾದುರಸ್ತಾಗಿವೆ. ಏನೋ ಅಲ್ಲಿ ಇಲ್ಲಿ ಟೌನುಗಳ ಹತ್ತಿರ ಸ್ವಲ್ಪ ಚೆನ್ನಾಗಿರಬಹುದು. ಕೆಲವು ಇಂಟೀರಿಯರ್ಸ್ ಗ್ರಾಮಗಳಿಗೆ ಈ ರಸ್ತೆ ಸೌಲಭ್ಯಗಳಿಲ್ಲದೆ ಅವರಿಗೆ ಯಾವ ಸೌಲಭ್ಯಗಳೂ ದೊರೆಯುತ್ತಿಲ್ಲ. ಉದಾರಣೆಗೆ ಆಲೂರು ಎಂಬ ಗ್ರಾಮಕ್ಕೆ ಇಂಥ ತೊಂದರೆ ಇತ್ತು. ಅದಕ್ಕಾಗಿ ಅಲ್ಲಿ ರಸ್ತೆ ಮಾಡುವುದಾಗಿ ಒಂದು ಯೋಚನೆಯನ್ನು 2—3 ವರ್ಷಗಳ ಕೆಳಗೆ

ತಯಾರಿಸಿದರು. ಅದು ಕಾರ್ಯಗತವಾಗಗರೆ ಇನ್ನೂ ಹಾಗೇ ಕೊಳೆಯುತ್ತಿದೆ. ಅಲ್ಲ ಕೆಲಸ ಪ್ರಾರಂಭ ಮಾಡಬೇಕೆಂಬ ಉದ್ದೇಶದಿಂದ ಜಲ್ಲಿ ಕಲ್ಲನ್ನು ತಂದು ಅಲ್ಲಲ್ಲೇ ರಾಸಿ ಹಾಕಿದ್ದರು. ಆದರೆ ಯಾವಾಗ ಕೆಲಸ ಮೂಲೆಗೆ ಬಿತ್ತೋ ಆಗ ಅಲ್ಲಿದ್ದ ಗುಡ್ಡೆ ಹಾಕಿದ ಕಲ್ಲು ರಾಸಿಗಳು ಅಲ್ಲಲ್ಲೇ ಮಾಯವಾಗುವುದಕ್ಕೆ ಪ್ರಾರಂಭವಾಯಿತು. ಇನ್ನು ಅಲ್ಲಿ ಅಷ್ಟಿಷ್ಟು ಉಳಿದಿದ್ದ ಕಲ್ಲನ್ನು ಹಾಕಿ ನಾಳೆ ಆ ರಸ್ತೆಯನ್ನು ಮಾಡಿದರೂ ಅದರ ಬಂದೋಬಸ್ತು ಎಷ್ಟರವಟ್ಟಿಗಿರಬಹುದು ಎನ್ನುವುದನ್ನು ತಾವೆಲ್ಲರೂ ಆಲೋಚಿಸಬಹುದು. ಇನ್ನು ನೀರಾವರಿ ಕಾಲುವೆಗಳ ಕಾಮಗಾರಿ ವಿಚಾರಕ್ಕೆ ಬಂದರೆ ಅನೇಕ ಕಾಲುವೆಗಳು ರಿಪೇರಿಯಿಲ್ಲದೆ ಇರುತ್ತವೆ. ಇವುಗಳಲ್ಲಿ ವರ್ಷವೆಲ್ಲಾ ನೀರು ಹರಿಯುತ್ತಿರುತ್ತದೆ. ವಿಶ್ವೇಶ್ವರಯ್ಯ ನಾಲೆ, ಇರ್ವಿನ್ ನಾಲೆ, ಹಿರಿಯೂರು ನಾಲೆ ಇತ್ಯಾದಿ ನಾಲೆಗಳಲ್ಲಿ ಸದಾ ನೀರು ಹರಿಯುತ್ತಲೇ ಇರುತ್ತದೆ ಅಂಥ ಕಡೆಗಳಲ್ಲಿ ಬಿಡುವಿದ್ದಾಗ ಅವುಗಳ ರಿಪೇರಿ ಕೆಲಸಕ್ಕೆ ಸರ್ಕಾರದವರು ಹಣದ ಕೊರತೆಯನ್ನು ಒಡ್ಡಬಾರದು. ಆ ಕೆಲಸಗಳು ನಿರ್ವಿಘ್ನವಾಗಿ ಸಾಗಲು ಅವಕಾಶ ಮಾಡಿಕೊಡಬೇಕು. ಈ ಕಾಲುವೆಗಳ ದುರಸ್ತಿ ಇಂದ ದೂರದ ಜಮೀನಿಗೆ ನೀರನ್ನು ಸಾಗಿಸಲು ಸುಲಭವಾಗುತ್ತದೆ. ಇನ್ನು ಈ ಸಕ್ಕರೆ ಕಂಪೆನಿ ಬೇರೆ ಅವರ್ಷ್ಟೋ ಭಾಗದ ಹಣವನ್ನು ಈ ರಸ್ತೆಗಳಿಗಾಗಿ ಕೊಡುತ್ತಿದೆ. ಆದರೆ ಸರ್ಕಾರದವರು ತಮ್ಮ ಭಾಗದ ಹಣವನ್ನು ಹಾಕದೆ ಈ ಕೆಲಸ ಬಹಳ ನಿಧಾನವಾಗಿದೆ. ಹಾಗೊಂದು ವೇಳೆ ಸಕ್ಕರೆ ಕಂಪೆನಿಯವರು ಒಂದು ವರ್ಷ ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಕಾರಣಾಂತರಗಳಿಂದ ಸಾಧ್ಯವಾಗದಿದ್ದರೆ ಸರ್ಕಾರದವರೇ ಆ ಭಾಗವನ್ನು ಹಾಕಿ ಕೆಲಸ ಮಾಡಿ ಅನಂತರ ಸಕ್ಕರೆ ಕಂಪನಿಗೆ ಲಾಭ ಬಂದ ವರ್ಷದಲ್ಲಿ ಇವರು ಹಾಕಿರತಕ್ಕ ದುಡ್ಡನ್ನು ಇವರು ಹಿಂದಕ್ಕೆ ಪಡೆಯಬಹುದು. ಈ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ಇಡದಿದ್ದರೆ ಸಕ್ಕರೆ ಕಂಪನಿಗೆ ಸಾಗಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಲಾರಿಗಳು ತಿರುಗುವುದಕ್ಕಾಗುವುದಿಲ್ಲ. ಪಾಂಡವಪುರಕ್ಕೂ ಮತ್ತು ರಾಷ್ಟ್ರೀಯ ಹೆದ್ದಾರಿಗೂ ಮಧ್ಯೆ ಒಂದು ರೈಲ್ವೆ ಓವರ್ ಬ್ರಿಡ್ಜು ಆಗಬೇಕಾಗಿದೆ. ಅದನ್ನು ಮಾಡದೆ ಇರುವುದರಿಂದ ಈ ದಿವಸ ಅವರು ಹೆದ್ದಾರಿಗೆ ಬರಲು ಒಂದೂವರೆಗಂಟೆಗಳ ಕಾಲ ಸುತ್ತಿಕೊಂಡು ಬರಬೇಕಾಗಿದೆ. ಆದ್ದರಿಂದ ಅಲ್ಲಿ ಅಗತ್ಯವಾಗಿ ರೈಲ್ವೆ ಬ್ರಿಡ್ಜನ್ನು ಮಾಡಬೇಕು. ಇಲ್ಲವೇ ಅಲ್ಲಿರತಕ್ಕ ರಸ್ತೆಯನ್ನೇ ಇನ್ನೂ ಅಗಲವಾಗಿಯಾದರೂ ಮಾಡಬೇಕು. ಇಲ್ಲವೆ ಅವೆರಡಕ್ಕೂ ಮಧ್ಯೆ ಒಂದು ಹೊಸದಾರಿಯನ್ನು ಮಾಡಬೇಕಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಪಾಂಡವಪುರ ಮತ್ತು ನಾನಾಗಲೇ ಹೇಳಿದ ಕೃಷ್ಣರಾಜಪೇಟೆ ಮತ್ತು ನಾಗಮಂಗಲ ಇವು ಬಹಳ ಹಿಂದುಳಿದ ಪ್ರದೇಶಗಳು. ಇವುಗಳಿಗೆ ಒದಗಿಸಿರತಕ್ಕ ಹಣ ಬಹಳ ಕಡಮೆಯಾಗಿದೆ. ಅಲ್ಲಿನ ಪ್ರತಿಯೊಂದು ಕಾಮಗಾರಿಗಳೂ ಹಣವಿಲ್ಲ ಎಂಬ ನೆಪದ ಮೇಲೆ ಮುಂದೆ ಮುಂದೆ ಹೋಗುತ್ತಿವೆ. ಹಣ ಬಂದರೆ ನಾಳೆಯೇ ಪ್ರಾರಂಭ ಮಾಡುತ್ತೇವೆ ಎಂದು ಅಲ್ಲಿಯ ಸ್ಥಳೀಯ ಅಧಿಕಾರಿಗಳು ಹೇಳುತ್ತಿದ್ದಾರೆ. ಹಣವಿಲ್ಲದೆ ಇದ್ದಾಗ ಈ ಫೈಲುಗಳ ಓಡಾಟದಿಂದ ಏನು ಪ್ರಯೋಜನ ?...ಇದರಿಂದ ಎಲ್ಲಾ ಕುಂಠಿತವಾಗಿದೆಯೆಂದು ಅರ್ಥವಾಗುವುದು. ಯಾವ ಕಡೆ ಅಡ್ಡದಾರಿ ಹಿಡಿದಿದ್ದರೂ ಸರಿಪಡಿಸಿ ಕೆಲಸಕಾರ್ಯ ನಡೆಯುವಂತೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಏಳೆಂಟು ವರ್ಷಗಳಿಂದ ಒಂದು ಕೆಲಸವೂ ಆಗಿಲ್ಲ, ಕೂಡಲೆ ತೆಗೆದುಕೊಳ್ಳಬೇಕು ಎಂದು ಇಷ್ಟು ಹೇಳಿ ಹೆಚ್ಚು ಅವಕಾಶವಿಲ್ಲದಿರುವುದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಪಿ ಡಬ್ಲ್ಯೂ ಮಂತ್ರಿಗಳು ತಮಗೆ ಜರೂರು ಕೆಲಸವಿರುವುದಾಗಿಯೂ 20 ನಿಮಿಷಗಳಲ್ಲಿ ಅದನ್ನು ಮುಗಿಸಿ ಬರುವುದಾಗಿಯೂ ಹೇಳಿದರು, ಆ ಅವಧಿ ಮುಗಿಯಿತು, ಅವರು ಬರಲಿಲ್ಲ. ಇದರಿಂದ ನಾವು ಚರ್ಚೆ ಮಾಡುವುದು ಅನಾವಶ್ಯಕ ಎನಿಸುವುದು. ನಾಡದ್ದು ಅವರು ಉತ್ತರ ಹೇಳುವರು, ಇಂದು ಹೇಳುವುದನ್ನು ಕೇಳುವವರೇ ಇಲ್ಲದಿರುವಾಗ ಏಕೆ ಹೇಳಬೇಕು ? ಹಿಂದೆಯೇ ಇದನ್ನು ಹೇಳಿದ್ದರೂ ಮತ್ತೇ ಇಂಥ ಸನ್ನಿವೇಶ ಬಂದಿದೆ. ಆದುದರಿಂದ ಸಭೆಯನ್ನು ಕೊಂಚಕಾಲ ಮುಂದೂಡುವುದು ಸೂಕ್ತವೆಂದು ಕಾಣುವುದು.

ಶ್ರೀ ವಾಟಾಳ್ ನಾಗರಾಜ್.—ವಿದ್ಯಾ ಇಲಾಖೆ ಬೇಡಿಕೆ ಚರ್ಚೆಯಾಗುವಾಗ ಕೈಗಾರಿಕಾ ಮಂತ್ರಿಗಳಿರುವುದು, ಕೈಗಾರಿಕಾ ಇಲಾಖೆ ಬೇಡಿಕೆ ಚರ್ಚೆಯಾಗುವಾಗ ಬೇರೊಂದು ಇಲಾಖೆ ಮಂತ್ರಿಗಳಿರುವುದು, ಎಲ್ಲಕ್ಕೂ ಚೆನ್ನಬಸಪ್ಪನವರು ಉತ್ತರ ಕೊಡುವುದು. ಇದೇನು ಚೆನ್ನಾಗಿದೆ? ಟ್ರೆಜರಿ ಬೆಂಚಿನಲ್ಲಿ ಇಬ್ಬರು ಪೂರ್ಣ ಮಂತ್ರಿಗಳು, ಒಬ್ಬರು ಅರ್ಧ ಮಂತ್ರಿಗಳು ಇದ್ದಾರೆ. ಮಂತ್ರಿಗಳಲ್ಲಿಗೆ ಹೋಗಿದ್ದಾರೆ ? ನಿಜ ಹೇಳಿ. ಸಭೆ ಅವರು ಬರುವವರೆಗೆ ಮುಂದಕ್ಕೆ ಹಾಕುವುದು ಒಳ್ಳೆಯದು. ಅವರಿಗೆ ಬಹಳ ಕೆಲಸವಿದೆ, ಮಂತ್ರಿಮಂಡಲದ ಬದಲಾವಣೆಗೆ ಸಂಬಂಧಪಟ್ಟ ಕೆಲಸವಿದೆ. ದಿನವೂ ಈ ರೀತಿ ನಡೆಯುವುದು ಸರಿಯಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಈಗ ಶ್ರೀ ಪುಟ್ಟಸ್ವಾಮಯ್ಯನವರು ಮತ್ತು ಹಲಗೇಗೌಡರು ಭಾಷಣ ಮಾಡಿದ್ದಾರೆ. ಅವರು ಹೇಳಿದ ವಿಚಾರವನ್ನು ಗಮನಕೊಟ್ಟು ಕೇಳಿ ನೋಟ್ಸ್ ಮಾಡಿಕೊಂಡಿದ್ದೇನೆ, ಶ್ರೀ ಚನ್ನಬಸಪ್ಪನವರು ಇಷ್ಟರಲ್ಲೇ ಬರುವರು. ಅವರು ಅನಾವೃಷ್ಟಿ ಪ್ರದೇಶಕ್ಕೆ ಹೋಗಿ ಬಂದು ಅದಕ್ಕೆ ಸಂಬಂಧಪಟ್ಟ ವರದಿಯನ್ನು ಸಭೆಯ ಮುಂದಿಡಲು ಹಗಲೂ ರಾತ್ರಿ ಕಾಲ ವ್ಯಯ ಮಾಡುತ್ತಿದ್ದಾರೆ. ಅವರೇ ಬಂದು ಚರ್ಚೆಗೆ ಉತ್ತರ ಕೊಡುವರು. ಮಾನ್ಯ ಸದಸ್ಯರು ಮಾಡಿರುವ ಸಲಹೆಗಳನ್ನು ನೋಟ್ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರಕಾರದ ಪತಿಯಿಂದ ಸಮಂಜಸವಾದ ಉತ್ತರ ಬರುತ್ತಿಲ್ಲ. ಬೇಡಿಕೆಗಳನ್ನು ಚರ್ಚೆಮಾಡುವಾಗ ಹಲವಾರು ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಲು ಅವಕಾಶವಿರಬೇಕು, ಹೇಳುವಾಗ ಸಂಬಂಧಪಟ್ಟ ಮಂತ್ರಿಗಳಿರಲೇಬೇಕು. ಮಂತ್ರಿಗಳು ತಮ್ಮ ಇಲಾಖೆಯ ಮೇಲೆ ಚರ್ಚೆಯಾಗುವಾಗ ಅವರು ತಮ್ಮ ಕಾಲವನ್ನು ಮೀಸಲಾಗಿಟ್ಟು ಇಲ್ಲಿ ಹಾಜರಿರಬೇಕು, ಇದು ಮೂಲಭೂತವಾದ ವಿಚಾರ. ಉದ್ದೇಶ ಸಫಲವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಮ್ಮಲ್ಲಿ ಐದಾರು ಜನರನ್ನು ಮಂತ್ರಿಗಳನ್ನಾಗಿ ಮಾಡಿ. 24 ಗಂಟೆಯೂ ಕುಳಿತಿರುತ್ತೇವೆ, ಅದಕ್ಕೆ ಬೇಕಾದರೆ ಪಟ್ಟಿ ಕೊಡುತ್ತೇವೆ.

Mr. DEPUTY SPEAKER.—The Hon. Minister for Industries has already stated that he is noting d wn the points made by hon. Members and he will hand over the same to the concerned Minister. I am sure the hon. Minister for Public Works will be here by the time Mr. Bangarappa concludes his speech. However, I will convey the feel-ngs of the hon. Members to the Minister concerned.

ಶ್ರೀ ಹೆಚ್. ಡಿ. ದೇವೇಗೌಡ.—ಈ ಸಭೆಯ ಕಾರ್ಯಕಲಾಪಗಳಲ್ಲಿ ಮಂತ್ರಿಗಳು ಭಾಗವಹಿಸಲು ಅವರಿಗೆ ಬಹಳ ಅಡಚಣೆ ಇರುವಂತೆ ಕಾಣುತ್ತದೆ. ಹಾಗೆ ನನಗೆ ಭಾಸವಾಗುತ್ತದೆ. ಅವರ ಪಕ್ಷದಲ್ಲಿ ಗೊಂದಲವಿರಬಹುದು. ಅದು ವೈಯುಕ್ತಿಕವಾಗಿ ನನಗೂ ಮತ್ತು ಈ ಸಭೆಗೂ ಸಂಬಂಧವಿಲ್ಲ. ಪಾರ್ಲಿಮೆಂಟ್ ಸದಸ್ಯರು ವಿರೋಧವಾಗಿದ್ದರೆ ಅಥವಾ 43 ಮಂದಿ ಅಸೆಂಬ್ಲಿ ಸದಸ್ಯರು ವಿರೋಧವಾಗಿದ್ದರೆ ಅವರಿಗೆ ಚಹ ಕೊಟ್ಟು ವಿಶ್ವಾಸ ಗಳಿಸುವುದು ಮುಂತಾದ್ದು ಲೀಡರಗೆ ಸಂಬಂಧಪಟ್ಟ ವಿಷಯ. ಆದರೆ ಈ ಸಭೆಯಲ್ಲಿ ಪ್ರಾಮುಖ್ಯವಾದ ಇಲಾಖೆಯ ಬಗ್ಗೆ ಚರ್ಚೆಯಾಗುವಾಗ ಮಂತ್ರಿಗಳಿರುವುದಕ್ಕೆ ಸಾಧ್ಯವಿಲ್ಲವಿದ್ದರೆ ಹೇಗಿದ್ದರೂ ವೋಟ್ ಆನ್ ಅಕೌಂಟ್ ಎರಡು ತಿಂಗಳಿಗೆ ಪಾಸ್ ಆಗಿದೆ. ಸರಕಾರ ಅನಿಶ್ಚಿತ ವಾತಾವರಣವನ್ನು ದಾಟಿ ಅವರು ಮುಂದೆ ಹೋಗುವವರೆಗೆ ಸಭೆಯನ್ನು ಬೇಕಾದರೆ ಮುಂದಕ್ಕೆ ಹಾಕೋಣ. ಈಗ ಮಂತ್ರಿಗಳು ಸಭೆಯಲ್ಲಿ ಕುಳಿತು ಭಾಗವಹಿಸಲು ಅವಕಾಶವಿದ್ದಂತೆ ಕಾಣುತ್ತಿಲ್ಲ. ಈ ಅನಿಶ್ಚಿತ ವಾತಾವರಣದಲ್ಲಿ ಸಭೆಯ ಕಾರ್ಯಕಲಾಪ ನಡೆಸುವುದು ಪ್ರಾಮುಖ್ಯವಾದ ಬೇಡಿಕೆಯಮೇಲೆ ಚರ್ಚೆ ಮಾಡುವುದು ಉಚಿತವಲ್ಲ. ಸಭೆ ಮುಂದೂಡಿ 15 ದಿವಸಗಳಾದಮೇಲೆ ಒಳ್ಳೆಯ ವಾತಾವರಣ ಬಂದಾಗ ಮಂತ್ರಿಮಂಡಲ ಭದ್ರವಾದಾಗ ಸಭೆ ಮುಂದುವರೆಸುವುದು ಒಳ್ಳೆಯದು ಎಂದು ಅರಿಕೆಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—165 ಜನರಿರಬೇಕಾದ ಕಡೆ ಕೇವಲ 28 ಜನರಿದ್ದಾರೆ. ನಿಜವಾಗಿಯೂ ಮಂತ್ರಿಮಂಡಲದ ಬದಲಾವಣೆಗೆ ಸಂಬಂಧಪಟ್ಟ ಕೆಲಸದಲ್ಲಿ ಈಗ ಹಾಜರಿಲ್ಲದಿರುವವರು ಅವರು ಸಂಪೂರ್ಣವಾಗಿ ನಿರತರಾಗಿದ್ದಾರೆ. ಅದು ಅವರಿಗೆ ಮುಖ್ಯವಾಗಿದೆ.

Sri H. S. SIDDAPPA.—The Members of the Ruling party seem to be not interested either in discussion of the demands or voting of demands because they are interested in the change of Ministry.

Mr. DEPUTY SPEAKER.—I call upon Hon. Member Sri Bangarappa to speak.

4-00 P. M.

†ಶ್ರೀ ಎಸ್. ಬಂಗಾರಪ್ಪ (ಸೊರಬ).-ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಮಾಡಿ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಈ ಸದನದಲ್ಲಿ ಅನೇಕ ಸದಸ್ಯರುಗಳು ಲೋಕೋಪಯೋಗಿ ಇಲಾಖೆಯ ವಿಷಯದಲ್ಲಿ ಹಾಗೂ ಇನ್ನಿತರ

ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ನಾನು ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯ ವಿಷಯವಾಗಿ ಮೊದಲು ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುತ್ತೇನೆ. ಕೆಲವಾರು ತಿಂಗಳುಗಳ ಹಿಂದೆ ಇದೇ ಸದನದಲ್ಲಿ ಮೈಸೂರು ರಾಜ್ಯ ವಿದ್ಯುಚ್ಛಕ್ತಿ ಮಂಡಲಿಯ ಆಯವ್ಯಯ ಪಟ್ಟಿಯನ್ನು ಕುರಿತು ಚರ್ಚೆ ಮಾಡುವಾಗ ನಾನು ಹಲವಾರು ಆಪಾದನೆಗಳನ್ನು ಮಂಡಲಿಯ ಮೇಲೆ ಮಾಡಿದ್ದೇನೆ. ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಆಗಿರತಕ್ಕ ಅನ್ಯಾಯಗಳು, ಅನ್ಯಾಯಗಳ ಪರಂಪರೆಯನ್ನು ಕುರಿತು ಪ್ರಸ್ತಾಪಮಾಡಿದ್ದೇನೆ. ಸಿಮೆಂಟ್ ಪೋಲ್ಸ್ ಮಾಡತಕ್ಕಂಥ ವಿಷಯದಲ್ಲಿ, ತಾಮ್ರದ ಬಗ್ಗೆ ಆಂಧ್ರಪ್ರದೇಶದಲ್ಲಿರತಕ್ಕ ಕಂಪನಿಯೊಂದಿಗೆ, ಬೊಂಬಾಯಿನಲ್ಲಿರತಕ್ಕ ಕಂಪನಿಗಳೊಂದಿಗೆ ಎಂ. ಎಸ್. ಇ. ಬಿ. ಯಾರು ಅವರದು ಹೆಚ್ಚಿನ ದರ ಇದ್ದುದ್ದು ಗೊತ್ತಿದ್ದರೂ ಕೂಡ, ಬೇರೆ ಕಂಪನಿಗಳವರು ಕಡಿಮೆದರದಲ್ಲಿ ಒಳ್ಳೆಯ ತರಗತಿಯದನ್ನು ಸರಬರಾಜು ಮಾಡುವುದಕ್ಕೆ ತಯಾರು ಇದ್ದರೂ ಕೂಡ, ಹೆಚ್ಚಿನ ದರ ಇರುವ ಕಂಪನಿಗಳಲ್ಲಿ ತಾಮ್ರವನ್ನು ತೆಗೆದುಕೊಂಡು ಹಲವಾರು ಕೋಟಿ ರೂಪಾಯಿಗಳ ವೆಚ್ಚವನ್ನು ಜಾಸ್ತಿ ಏತಕ್ಕೆ ಮಾಡಿದ್ದು? ನಾನು ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಆಡಿಟ್ ರಿಪೋರ್ಟ್ ವಿಷಯವಾಗಿ ಮಾತನಾಡುತ್ತಾ ಹೇಳಿದೆ, ಮತ್ತು ದೊಡ್ಡ ಒಂದು ಆಪಾದನೆಯ ಪಟ್ಟಿಯನ್ನು ಟೈಪ್ ಮಾಡಿಸಿ ಕೊಟ್ಟಿದ್ದೇನೆ. ಇದು ನನಗೆ ನೆನಪು ಇದೆ. ನಾನು ಅದನ್ನು ಅವರಿಗೆ ನೇರವಾಗಿ ಕಳುಹಿಸಿಕೊಟ್ಟಿದ್ದೇನೆ. ಆದ್ದರಿಂದ ಇವತ್ತು ನಾನು ಕೇಳುತ್ತೇನೆ, ನಾನು ಮಾಡಿರತಕ್ಕ ಆಪಾದನೆಗಳ ಬಗ್ಗೆ ತಾವು ವಿಚಾರಣೆ ಮಾಡಿದ್ದೀರಾ? ಯಾವ ಕ್ರಮ ತೆಗೆದುಕೊಂಡಿದ್ದೀರಾ? ಯಾವ ರೀತಿ ಸರಿಯಾದ ಕ್ರಮಗಳನ್ನು ವಿದ್ಯುಚ್ಛಕ್ತಿ ಮಂಡಲಿಯ ಬಗ್ಗೆ ಹಾಕಿದ್ದೀರಿ ಎಂದು ಕೇಳುತ್ತೇನೆ. 1970—71ರ ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನ ಅಕೌಂಟ್ಸ್ ಮತ್ತು ಬ್ಯಾಲೆನ್ಸ್ ಷೀಟಿನ ಎಂಟನೆಯ ಪುಟದಲ್ಲಿ, ಷಾರ್ಟೇಜಸ್ ವಿಷಯದಲ್ಲಿ ಆಡಿಟ್ ರಿಪೋರ್ಟಿನಲ್ಲಿ ಒಂದು ಮಾತು ಇದೆ. ಇದರಲ್ಲಿ 18,41,24,228 ರೂಪಾಯಿಗಳ ಬೆಲೆ ಬಾಳತಕ್ಕ ವಸ್ತುಗಳು ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಷಾರ್ಟೇಜಸ್ ಆಗಿದೆ. 1970—71ನೇ ಇಸವಿಯ ಆಡಿಟ್ ರಿಪೋರ್ಟಿನಲ್ಲಿ ಇದು ಗೊತ್ತಾಗುತ್ತದೆ. 1970—71ರಲ್ಲಿ ನನಗೆ ಗೊತ್ತಿರುವ ಪ್ರಕಾರ 18 ಕೋಟಿ ರೂಪಾಯಿಗಳ ಷಾರ್ಟೇಜಸ್ ಇದೆ, 1973ರ ಮಾರ್ಚಿಯವರೆಗೆ 27ಕೋಟಿ ರೂಪಾಯಿಗಳ ಷಾರ್ಟೇಜಸ್ ಬರುತ್ತದೆ ಎಂದು ಗೊತ್ತಾಗುತ್ತದೆ. ಇದರಲ್ಲಿ ಸ್ವಲ್ಪ ಅಡ್ಜಸ್ಟ್ ಮಾಡತಕ್ಕಂಥ ವಿಷಯ ಬಿಟ್ಟರೆ... There is a regular fraud to the tune of 9·5 crores of rupees. ಕಳೆದ ಸಾರಿ ನಾವು ಈ ಮಂಡಲಿಗೆ ಲೈಫ್ ಇನ್‌ಷೂರೆನ್ಸ್ ಕಾರ್ಪೋರೇಷನ್‌ನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಈ ಸದನದ ಒಪ್ಪಿಗೆಯನ್ನು ಕೊಟ್ಟಿದ್ದು ಎಲ್ಲರಿಗೂ ಗೊತ್ತಿದೆ. 12.1 ಕೋಟಿ ರೂಪಾಯಿಗಳ ಸಾಲವನ್ನು, ರೂರಲ್ ಎಲೆಕ್ಟ್ರಿಫಿಕೇಷನ್‌ಗೋಸ್ಕರ ತೆಗೆದುಕೊಳ್ಳುವುದಕ್ಕೆ ನಮ್ಮ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಈವೊತ್ತು ರೂರಲ್ ಇಲೆಕ್ಟ್ರಿಫಿಕೇಷನ್ ಸಂಪೂರ್ಣವಾಗಿ ಮುಗಿದಿಲ್ಲ ಎನ್ನುವ ವಿಷಯ ನಮಗೆ ಗೊತ್ತಿದೆ. ಮಹಾರಾಷ್ಟ್ರದ ಬಾರ್ಡರ್‌ನಲ್ಲಿರುವವರು ನಮಗೆ ಪವರ್ ಇಲ್ಲ ಎಂದು ಈ ಸರ್ಕಾರದ ಮೇಲೆ ಆಪಾದನೆಯನ್ನು ಮಾಡುತ್ತಿದ್ದಾರೆ. ಮಹಾರಾಷ್ಟ್ರದವರು ನಮ್ಮ ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡು ಎಷ್ಟು ಹಳ್ಳಿಗಳಿಗೆ ದೀಪವನ್ನು ಬೆಳಗಿಸಿದ್ದಾರೆ ಎಂದು ನೀವು ನೋಡಬಹುದು. ಅವರಿಗೆ ಅಷ್ಟೊಂದು ವಿದ್ಯುಚ್ಛಕ್ತಿಯನ್ನು ನಾವು ಸರಬರಾಜು ಮಾಡುತ್ತಿದ್ದೇವೆ. ಆದರೆ ನಮ್ಮ ಹಳ್ಳಿಗಳಿಗೆ, ರೈತರ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯಿಲ್ಲ ಎಂದು ಆ ಜನರು ಆಪಾದನೆ ಮಾಡುತ್ತಿದ್ದಾರೆ. ಎಲ್. ಐ. ಸಿ. ಯಿಂದ ಸಾಲವನ್ನು ತೆಗೆದುಕೊಳ್ಳುವುದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿಯನ್ನು ಹೊತ್ತಿದೆ. ಅದು ಏನಾಗಿದೆ ಎಂದು ನಾನು ಇವತ್ತು ತಮ್ಮನ್ನು ಕೇಳುತ್ತಾ ಇದ್ದೇನೆ! ನೀವು ದಕ್ಷ ಆಡಳಿತಗಾರರು ಎಂದು ಹೆಸರು ಪಡೆದಿದ್ದೀರಿ, ಇತ್ತೀಚೆಗೆ ಕೆಲವು ವಿಷಯಗಳಲ್ಲಿ ನಾನು ನಿಮ್ಮನ್ನು ಒಪ್ಪಿದ್ದೇನೆ, ನಿಮ್ಮ ದಕ್ಷತೆಯ ಬಗ್ಗೆ ನನಗೆ ಮೆಚ್ಚುಗೆ ಇದೆ. ಆದರೆ ಇಂದು ನೀವು ಸಂಪೂರ್ಣವಾಗಿ ದಕ್ಷ ಆಡಳಿತಗಾರರು ಆಗಿಲ್ಲ. ಏಕೆಂದರೆ, ನಾನು ಮಾಡಿದಂಥ ಆಪಾದನೆಗಳ ಬಗ್ಗೆ ತಾವು ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ, ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. In this, principle is involved ತಮಗೆ ಗೊತ್ತಿದೆ. ಗುಲ್ಬರ್ಗ, ಬಿಜಾಪುರದಲ್ಲಿ ಇದ್ದ ಹಾಗೆ ನಾವು ಇಲ್ಲಿ ಬಿಸಿಲಿನಿಂದ ನರಳುತ್ತಾ ಇಲ್ಲ, ಬೆವರು ಸುರಿಸುತ್ತಾ ಇಲ್ಲ. ಆದರೆ ಎಂ. ಎಸ್. ಇ. ಬಿ. ಛೇರ್ಮನ್ ರವರ ಆಫೀಸಿಗೆ ಯಾಕೆ ಏರ್ ಕಂಡೀಷನ್ಡ್ ರೂಮ್ ಮಾಡಿದ್ದು? ಬೆಂಗಳೂರಿನ ಹವಾಮಾನಕ್ಕೆ ಹವಾ ನಿಯಂತ್ರಣದ ಅವಶ್ಯಕತೆ ಇದೆಯೇ ಎಂದು ಕೇಳುತ್ತಿದ್ದೇನೆ. ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಚನ್ನಬಸಪ್ಪನವರು ಈ ವಿಷಯದಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ? ಬೆಂಗಳೂರಿನಲ್ಲಿ ಹವಾ ನಿಯಂತ್ರಣದ ಅವಶ್ಯಕತೆ ಇದೆಯೇ? 12.1 ಕೋಟಿ ರೂಪಾಯಿ ಹಣ ಸಿಕ್ಕಿತೆಂದು ಆ ಹಿನ್ನೆಲೆಯಲ್ಲಿ ಏರ್ ಕಂಡೀಷನ್ಡ್

(ಶ್ರೀ ಎಸ್. ಬಂಗಾರಪ್ಪ)

ಮಾಡಿಕೊಂಡರೆ? ಮಂತ್ರಿಗಳ ಕೊಠಡಿಗೆ ಹವಾನಿಯಂತ್ರಣ ಅನುಕೂಲ ಇಲ್ಲದಿದ್ದರೂ ನಮ್ಮ ಇಲಾಖೆಗಳಲ್ಲಿರತಕ್ಕ ಅನೇಕ ಅಧಿಕಾರಿಗಳ ಕೊಠಡಿಗಳಲ್ಲಿ ಬೆಂಗಳೂರು ನಗರದಲ್ಲಿ ಏರ್ ಕಂಡೀಷನ್ಡ್ ಇರುವುದನ್ನು ತೋರಿಸಿಕೊಡುತ್ತೇನೆ. ನೀವು ಹಿಂದೆ ಚುನಾವಣೆಯ ಸಂದರ್ಭದಲ್ಲಿ ನಾವು ಬಹಳ ಕಡಿಮೆ ಖರ್ಚಿನಲ್ಲಿ ಸರ್ಕಾರ ನಡೆಸುತ್ತೇವೆ, ಹಣವನ್ನು ಹಾಳು ಮಾಡುವುದಿಲ್ಲ ಉಳಿಸುತ್ತೇವೆಂದು ಮಾತು ಕೊಟ್ಟಿದ್ದೀರಿ ಬೆಂಗಳೂರಿನಲ್ಲಿ ಇಲಾಖೆ ಅಧಿಕಾರಿಗಳ ಕೊಠಡಿಗೆ ಹವಾ ನಿಯಂತ್ರಣ ಯಾತಕ್ಕಾಗಿ ಬೇಕು? ಗುಲ್ಬರ್ಗ ಬಿಜಾಪುರದಲ್ಲಿ ಹವಾನಿಯಂತ್ರಣ ಇದ್ದರೆ ಅರ್ಥವಾಗುತ್ತದೆ, ಅಲ್ಲಿ ಬಿಸಿಲ ಬೇಗೆ ಇರುತ್ತದೆ, ಅಲ್ಲಿ ಹಾಕಬಾರದು ಅಂತ ಹೇಳುವುದಿಲ್ಲ. ಆದರೆ ಅಲ್ಲಿ ಯಾಕೆ ಹಾಕಬೇಕು? 12.1 ಕೋಟಿ ರೂಪಾಯಿ ಸಾಲ ಸಿಕ್ಕಿತೆಂದು ಇದಕ್ಕೆ ಖರ್ಚು ಮಾಡಿದರೇ? ಈ ಖರ್ಚಿನಲ್ಲಿ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೇ? ಮಾನ್ಯ ಅಧ್ಯಕ್ಷರೇ ಇನ್ನು (ಡಿವಿಜನಲ್ ಸ್ಟೋರ್ಸ್ ಷಾರ್ಟೇಜ್) Divisional stores shortage of materials ಬಗ್ಗೆ ಹೇಳಬೇಕಾಗಿದೆ. ಸುಮಾರು ಸೆಪ್ಟಂಬರ್ 69ರ ವರೆಗೆ 20 ಲಕ್ಷ ರೂಪಾಯಿ ಆಗಿದೆ. ಎಲ್ಲಾ ಡಿವಿಜನ್ನಿನ ಎಲ್ಲಾ ವೆರೈಟಿ ಮೆಟೀರಿಯಲ್ಸ್ ಲೆಕ್ಕ ಹಾಕಿದರೆ ಅದು 4.3 ಕ್ರೋರ್ಸ್ upto to the end of March'70 ಆಗುತ್ತದೆ. ಆಡಿಟ್ ವರದಿಯಲ್ಲಿ ಹಲವಾರು ಲೋಪದೋಷಗಳನ್ನು ತೋರಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಯಾಕೆ ಕಾರ್ಯಕ್ರಮ ತೆಗೆದುಕೊಂಡಿಲ್ಲ?

ಇನ್ನು ಗುಲ್ಬರ್ಗ ಸರ್ಕಲ್ ಬಗ್ಗೆ ಸಚಿವರ ಗಮನಕ್ಕೆ ತರಲು ಇಷ್ಟಪಡುತ್ತೇನೆ. About Rs. five crores worth of iron material and cement worth Rs. 3 crores have been supplied to Gulbarga circle from 1965 to 1969. The Total comes to Rs. 8 crores. ಸಿಮೆಂಟ್ ಪೋಲ್ಸ್ ತಯಾರು ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ಸಪ್ಲೈ ಮಾಡಿದ್ದಾರೆ. 1956ರಲ್ಲಿ ಸ್ಟೇಟ್ ರೀಆರ್ಗನೈಜೇಷನ್ ಆಗುವವರೆಗೂ ಹೈದರಾಬಾದ್ ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಬೆಳವಣಿಗೆ ಆಗಿರಲಿಲ್ಲ. ಅದು ಬೆಳವಣಿಗೆ ಆಗಲೇಬೇಕೆನ್ನುವ ದೃಷ್ಟಿಯಿಂದ 5 ಕೋಟಿ ರೂಪಾಯಿ ಉಕ್ಕು, 3 ಕೋಟಿ ರೂಪಾಯಿ ಸಿಮೆಂಟಿಗೆ ಒಟ್ಟು 8 ಕೋಟಿ ರೂಪಾಯಿ ಮೆಟೀರಿಯಲ್ಸ್‌ನ್ನು 1965 ರಿಂದ 1969 ರವರೆಗೆ ಸರಬರಾಜು ಮಾಡಿದ್ದಾರೆ. ಅದರಿಂದ 6.30 ಲಕ್ಷ ರೂಪಾಯಿ ಆರ್. ಸಿ. ಸಿ ಪೋಲ್‌ಗಳನ್ನು ತಯಾರು ಮಾಡಿದ್ದಾರೆ. ಆ ಪೋಲ್‌ಗಳಲ್ಲಿ ಒಟ್ಟು 50 per cent of them are useless ಅವು ಕಂಡಮ್ ಆಗಿವೆ. ಸಿಮೆಂಟ್ ಬಿಟ್ಟುಕೊಂಡು ಹೋಗಿವೆ. ಪೋಲ್‌ಗಳನ್ನು ಚರಂಡಿಗೆ ಬಿಸಾಕಿದ್ದಾರೆ. ಯಾಕೆಂದರೆ ಅವುಗಳನ್ನು ತಯಾರು ಮಾಡಲು ಲೋಕಲ್ ಕಂಟ್ರಾಕ್ಟರ್ಸ್‌ಗಳಿಗೆ ಕೊಟ್ಟರು. ಲೋಕಲ್ ಕಂಟ್ರಾಕ್ಟರ್ಸ್ ಮತ್ತು ಅಧಿಕಾರಿಗಳು ಎಲ್ಲಾ ಶರೀಕಾಗಿ ಮಾಡಿರುವ ಕೆಲಸ ಇದು. ಸಾರ್ವಜನಿಕ ಹಣ ಸಂಪೂರ್ಣವಾಗಿ ಪೋಲು ಆಗಿದೆ. ಈ ಸಂದರ್ಭದಲ್ಲಿ ಅನೇಕ ಅಧಿಕಾರಿಗಳು ಲಕ್ಷಗಟ್ಟಲೆ ಹಣವನ್ನು ಮಾಡಿದ್ದಾರೆಂದು ಆಪಾದನೆ ಇದೆ. ಎಂ. ಎಸ್. ಇ. ಬಿ. ಯವರು 12.1 ಕೋಟಿ ರೂಪಾಯಿ ಸಾಲ ಮಾಡಿರುವುದಕ್ಕೆ ಮೈಸೂರು ಸರ್ಕಾರದವರು ಶ್ಯೂರಿಟಿ ನಿಂತಿದ್ದಾರೆ. ಆ ಹಣವನ್ನೆಲ್ಲಾ ಹಾಳು ಮಾಡಿದ್ದಾರೆ. ಆ ಗುಲ್ಬರ್ಗ ಸರ್ಕಲ್‌ನಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರ್ ಆಗಿದ್ದವರು 31-3-1969ಕ್ಕೆ ರಿಟೈರ್ಡ್ ಆಗಿದ್ದಾರೆ. He has built four big mansions at Hyderabad. ಇವತ್ತು, ಆ ಕಟ್ಟಡಗಳ ಬೆಲೆ 10 ಲಕ್ಷ ರೂಪಾಯಿಗಳು ಆಗುತ್ತದೆ. ಮತ್ತು ಅವರು ಆ ಕಟ್ಟಡಗಳಿಂದ 5 ಸಾವಿರ ರೂಪಾಯಿ ಬಾಡಿಗೆ ಒಂದು ತಿಂಗಳಿಗೆ ಪಡೆಯುತ್ತಿದ್ದಾರೆ. ಇಂಥ ಒಂದು property ಅವರು ಒಬ್ಬರೇ ಮಾಡಿದ್ದಾರೆ. 1965—1971ರ ವರೆಗೆ Gulbarga Circle ನಲ್ಲಿ R. C. C. Poles ಗಳ ಸಂಬಂಧದಲ್ಲಿ shortage materials ಎಷ್ಟು ಆಗಿದೆಯೆಂದರೆ, ಎಲ್ಲಾ ಸೇರಿ 16 ಲಕ್ಷ ರೂಪಾಯಿಗಳ ಲಾಸ್ ಆಗಿದೆ ಎಂದು ನಮಗೆ ಗೊತ್ತಾಗುತ್ತದೆ.

ಅದಕ್ಕಾಗಿ ನಾನು ಹೇಳುತ್ತೇನೆ ಎಂ.ಎಸ್ ಇ.ಬಿ.ನಲ್ಲಿ ಆಗಿರತಕ್ಕಂಥ ಅನ್ಯಾಯಗಳ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ಆಗಬೇಕು ಎಂದು, ಅದರಲ್ಲೂ ಜುಡಿಷಿಯಲ್ ಎನ್‌ಕ್ವೈರಿ ಆಗಬೇಕು. ಇದನ್ನು ಏತಕ್ಕೆ ಕೇಳುತ್ತಿದ್ದೇನೆ ಎಂದರೆ This is very bad. This has been done in collusion with the officers and they have played a fraud on M.S.E.B. and on the entire people of the Mysore State. ಈಪೊತ್ತಿನ ದಿವಸ ಇದರಲ್ಲಿ

ಫ್ರಾಡ್ ಆಗಿದೆ. ಕೋಟ್ಯಾಂತರ ರೂಪಾಯಿಗಳು ಅನ್ಯಾಯವಾಗಿದೆ. ಇದು ಹೊರಗೆ ಬರಲಿಕ್ಕೆ ಅಸಾಧ್ಯವಾಗಿದೆ. ಆದುದರಿಂದ ಇದನ್ನು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆರ್.ಸಿ.ಸಿ. ಪೋಲ್ಸ್ ವಿಷಯ. ಇದನ್ನು ಸಪ್ಲೈ ಮಾಡುವಾಗ ಬೇಕಾದಷ್ಟು ಹಣ ಗಳಿಕೆ ಮಾಡಿಕೊಂಡಿದ್ದಾರೆ. On account of the shady deals in respect of R.C.C. poles of Gulbarga circle is having about 13 millioners. This is after supply of R.C.C. poles to the Board.

They are—

1 Karnataka Industries.
2 Bijapur Spun pipe company.
3 Indian Structural and Industrial Corporation.
4 Mahadeva Industries.
5 Associated business corporation.
6 Rajeswari R.C.C. Poles manufacturing Company.
7 Bagalkot cement and spun pipe Industries.
8 G. R. Patil Prop. R.C.C. Poles manufacturing Industries Etc.,

ಈ ಲಿಸ್ಟ್ ನನ್ನ ಹತ್ತಿರ ಇದೆ. ಈವೊತ್ತು ಇದರಲ್ಲಿ ಆಗಿರತಕ್ಕಂಥ ಅನ್ಯಾಯದ ಬಗ್ಗೆ ತಾವು ಉತ್ತರ ಕೊಡಬೇಕು ಎಂದು ಕೇಳುತ್ತೇನೆ. The Superintending Engineer and the Executive Engineer of all the divisions and circles of the M.S.E.B. ಅವರು ಮಂಡಲಿಗೆ ಬೇಕಾದ ಮೆಟೀರಿಯಲ್ಸ್ ಸಪ್ಲೈ ಮಾಡುವುದಕ್ಕೆ ಲೋಕಲ್‌ನಲ್ಲಿರುವವರಿಗೆ ಆರ್ಡರ್ ಪ್ಲೇಸ್ ಮಾಡಿದ್ದಾರೆ. ಅವರು ಯಾರ್ಯಾರು ಎಂದರೆ:

1 M/s. Bhopal Chand, Chickpet, Bangalore.
2 M/s. Suraj Trading Company, Chickpet, Bangalore, and
3 M/s. Kamal Electric Corporation, Chickpet Bangalore.

ಇವರಿಗೆ ಕಂಟಿನ್ಯೂಯಸ್ ಆಗಿ 1965ರಿಂದಲೂ ಮಂಡಲಿಗೆ ಬೇಕಾದ ಮೆಟೀರಿಯಲ್ಸ್ ಸಪ್ಲೈ ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಆರ್ಡರ್ ಪ್ಲೇಸ್ ಮಾಡಿದ್ದಾರೆ. ಯಾವ ಅಧಿಕಾರಿಗಳು ಈ ಆರ್ಡರ್ಸ್‌ನ್ನು ಪ್ಲೇಸ್ ಮಾಡಿದ್ದಾರೋ ಅವರೆಲ್ಲಾ ತಲಾ ಐದ್ಹೈದು ಲಕ್ಷಕ್ಕಿಂತ ಹೆಚ್ಚು ಸಂಪಾದಿಸಿ ಆಸ್ತಿ ಮಾಡಿರುವುದು ಬೆಳಕಿಗೆ ಬಂದಿದೆ. ಹೋದಸಾರಿ ತಮಗೆ ಒಂದು ಮಾತು ಹೇಳಿದ್ದೆ. ಕೆಲವು ಆಫೀಸರ್ಸ್ ರಿಟೈರ್ ಆದವರನ್ನು 3 ವರ್ಷ ಕಾಂಟ್ರಾಕ್ಟ್ ಮೇಲೆ ಅಪಾಯಿಂಟ್ ಮಾಡಿದ್ದಾರೆ. ಅಲ್ಲಿ ಕೆಲಸವನ್ನು ಕನ್ನಡಿಗರಿಗೆ ಯಾರಿಗೂ ಕೊಟ್ಟಿಲ್ಲ. ಎಲ್ಲಾ ತಮಳಿಯನ್ಸ್‌ಗೆ ಕೊಟ್ಟಿದ್ದಾರೆ. ಈ ಬಗ್ಗೆ ಮುಖ್ಯವಾದ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಶ್ರೀಮತಿ ಸರಸ್ವತೀ ಎನ್ನುವವರು She is in Delhi, and a Tamilian. Chief Controller of Accounts ಆಗಿದ್ದಾರೆ. ಈ ಸ್ಥಾನವನ್ನು ಭರ್ತಿ ಮಾಡಬೇಕಾಗಿದ್ದರೆ ಅಲ್ಲಿ ಇದ್ದಂಥ ಕನ್ನಡಿಗರಿಗೇನೇ ಕೊಡಬಹುದಾಗಿತ್ತು. ಈವೊತ್ತಿನ ದಿವಸ ಶ್ರೀಮಾನ್ ಹೆಚ್. ಚಿಕ್ಕಣ್ಣ ಅನ್ನುವವರು ರಿಟೈರ್ಡ್ ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಆಗಿದ್ದಾರೆ. ಅವರು ತುಂಬಾ ಎಫಿಸಿಯಂಟ್ ಅಧಿಕಾರಿಗಳು ಮತ್ತು ತುಂಬಾ ಎಕ್ಸ್‌ಪೀರಿಯನ್ಸ್ ಕೂಡ ಇದೆ. ಅಂಥಾ ಅಧಿಕಾರಿಗಳಿಗೆ ಈವೊತ್ತು ಸ್ಥಾನವಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅವರು ಅಲ್ಲಿ ತಮಗೆ ಬೇಕಾದಂಥ ಜನರನ್ನೇ ತುಂಬುವಂಥ ಪ್ರಯತ್ನ ಮಾಡುತ್ತಾರೆ. ಆದುದರಿಂದ ಈ ಬಗ್ಗೆ ಶ್ರೀಮಾನ್ ಚೆನ್ನಬಸಪ್ಪನವರು ಅಲ್ಲಿ ಇರುವ ಉತ್ತಮವಾಗಿರುವ ಕನ್ನಡಿಗರನ್ನೇ ಆರಿಸಿ ಆ ಜಾಗದಲ್ಲಿ ಪೋಸ್ಟ್ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಕೃಷ್ಣಮೂರ್ತಿ ಅನ್ನುವವರು ಒಬ್ಬರು ಇದ್ದಾರೆ. ಅವರು Finance Member of the Board. He is not a Mysorean. He has been responsible along with his other friends for the loss to the tune of several crores. ಈ ಬಗ್ಗೆ ನಾನು ಕಳೆದಸಾರಿಯೇ ಪ್ರಸ್ತಾಪ ಮಾಡಿದ್ದೆ. ಅವರನ್ನು ಬೋರ್ಡ್‌ನಿಂದ ತೆಗೆದು ಹಾಕಬೇಕೆಂದು ಹೇಳುತ್ತೇನೆ.

(ಶ್ರೀ ಎಸ್. ಬಂಗಾರಪ್ಪ)

ಇನ್ನು ಈ ಎಲೆಕ್ಟ್ರಿಸಿಟಿ ಬೋರ್ಡಿನ ಶ್ರೀಮಾನ್ ನಾರಾಯಣರಾವ್ ಅವರ ಬಗ್ಗೆ ಹೇಳಬೇಕಾಗಿದೆ. ಅವರನ್ನು ಈಗ ಇರತಕ್ಕಂಥ ಚನ್ನಬಸಪ್ಪನವರು ಮುಂದುವರೆಸುತ್ತಾರೋ ಇಲ್ಲವೋ ಗೊತ್ತಿಲ್ಲ. ಅವರನ್ನು ಮುಂದುವರೆಸಬೇಡಿ, ತೆಗೆದುಹಾಕಿ ಎಂದು ಹೇಳುತ್ತೇನೆ. ಅವರು ಯಾವ ದೃಷ್ಟಿಯಲ್ಲಿ ಈ ಎಂ.ಎಸ್.ಇ.ಬಿ.ನಲ್ಲಿ ಒಳ್ಳೆಯ ಆಡಳಿತ ನಡೆಸಿದ್ದಾರೆ ಎಂದು ನಾನು ಕೇಳುತ್ತೇನೆ. He has made properties worth several lakhs of rupees. He has got houses in Rajajinagar, Malleswaram. ಇವರಿಗೆ ರಾಜಾಜಿನಗರದಲ್ಲಿ, ಮಲ್ಲೇಶ್ವರಂನಲ್ಲಿ ಬೇಕಾದಷ್ಟು ಆಸ್ತಿಗಳು ಇವೆ. ಅವು they are in the name of his sons, wife, daughters and 2 brothers-in-law. ಇವರು ತಮ್ಮ ಅಧಿಕಾರಾವಧಿಯಲ್ಲಿ ಈ ಬೋರ್ಡ್‌ಗೆ ಏನು ಒಂದು ರೆವಿನ್ಯೂ ಬರಬೇಕೋ ಅದನ್ನು ನೋಡುತ್ತಾ ಇಲ್ಲ. ಈ ಬಗ್ಗೆ ತಾವು ಏನೂ ಹೇಳಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅವರಿಗೆ ಇರುವ ಆಸ್ತಿ ಛೇರ್ಮನ್ ಆಗುವುದಕ್ಕಿಂತ ಮೊದಲೇ ಇತ್ತು.

ಶ್ರೀ ಎಸ್. ಬಂಗಾರಪ್ಪ.—ತಮಗೆ ಇನ್ನೊಂದು ವಿಚಾರ ಹೇಳುತ್ತೇನೆ. ಇದರಲ್ಲಿ 9 ಕೋಟಿ ರೂಪಾಯಿಯಷ್ಟು ಕ್ಯಾಷ್ ವ್ಯತ್ಯಾಸ ಬಂದಿದೆ ಎಂದು ಹೇಳುತ್ತೇನೆ. Recovery of 9 crores. There is Cash difference between the Bank Balance and M.S.E.B. Cash Balance. There is difference between these institutions so far as cash balance is concerned. ಈ ರೀತಿ ತಪ್ಪು ತಪ್ಪು ಅಕೌಂಟ್ಸ್ ತೋರಿಸುತ್ತಾರೆ. ಈವೊತ್ತಿನ ದಿವಸ ಪ್ರಪಂಚದ ಸಾಲ ತರುವುದಕ್ಕೆ ಒಂದು ಅಕೌಂಟ್ಸ್ ಮತ್ತು ನಿಮ್ಮ ಎಂ.ಎಸ್.ಇ.ಬಿ.ನಲ್ಲೇ ಒಂದು ಬ್ಯಾಲೆನ್ಸ್ ಷೀಟ್ ಮತ್ತು ಗೌರ್ನಮೆಂಟ್‌ಗೇನೇ ಒಂದು ಬ್ಯಾಲೆನ್ಸ್ ಷೀಟ್ ಮಾಡಿಕೊಂಡಿದ್ದಾರೆ. ಆದುದರಿಂದ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಈ ರೀತಿ ಇದ್ದರೂ ಕೂಡ ಏತಕ್ಕೆ ತಾವು ಕಣ್ಣುಮುಚ್ಚಿಕೊಂಡು ಕೂತಿದ್ದೀರಿ! ಏತಕ್ಕಾಗಿ ಈ ಬಗ್ಗೆ ಇನ್ನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ? ಈ ಬಗ್ಗೆ ತನಿಖೆ ಆಗಬೇಕು. ಇನ್ನೂ ಈ ಬಗ್ಗೆ ಹೇಳುವುದು ಬೇಕಾದಷ್ಟು ಇದ್ದರೂ ಕೂಡ ಹೆಚ್ಚು ಸಮಯ ಇಲ್ಲದೇ ಇರುವುದರಿಂದ ಕೊನೆಯದಾಗಿ ಒಂದು ವಿಷಯ ಹೇಳಿಬಿಟ್ಟು ಒಂದೆರಡು ನಿಮಿಷಗಳಲ್ಲಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಕೊನೆಯದಾಗಿ ಪಿ.ಡಬ್ಲ್ಯು.ಡಿ. ಬಗ್ಗೆ ಹೇಳುವುದಾದರೆ ಈ ಸಂದರ್ಭದಲ್ಲಿ ಮಾನ್ಯ ಚೆನ್ನಬಸಪ್ಪನವರಿಗೆ ನಾನು ಸವಾಲು ಹಾಕುವುದಿಲ್ಲ ಏತಕ್ಕಾಗಿ ಎಂದರೆ ಅವರ ಹಿಂದೆ ಒಂದು ಸಲ ಸವಾಲು ಹಾಕಿದ್ದರು. ಆವಾಗ ನಾನೇ ಅವರ ಬಗ್ಗೆ ಅಪ್ರಿಷಿಯೇಟ್ ಮಾಡಿದ್ದೇನೆ. ಆದರೆ ಒಂದು ವಿಷಯದಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಹೇಳುತ್ತೇನೆ. ಯಾವ ವಿಷಯದಲ್ಲಿ ವಿಫಲರಾಗಿದ್ದೀರಿ ಎಂದರೆ ಶರಾವತಿ ಕರ್ಮಕಾಂಡದ ಬಗ್ಗೆ ವಿಚಾರಣೆ ಮಾಡಿಸುತ್ತೇನೆ ಎಂದು ಈ ಸದನದಲ್ಲಿ ಹೇಳಿದ್ದರು, ಹಲವಾರು ಹೇಳಿಕೆಗಳನ್ನೂ ಕೂಡ ಹೇಳಿದ್ದಾರೆ, ಆ ಗಟ್ಟಿಗತನ ಎಲ್ಲಿಗೆ ಹೋಯಿತು? ಏತಕ್ಕೆ ಇದುವರೆಗೂ ವಿಚಾರಣೆ ಮಾಡಿಸಲಿಲ್ಲ! ಏತಕ್ಕಾಗಿ ಹೇಳಿಕೆ ಕೊಟ್ಟಿರಿ? You have not come out with a statement. I am asking him through the Chair. ಮಾನ್ಯ ಅಧ್ಯಕ್ಷರೇ, ತಾವು ದೇಶದ ಜನರಿಗೆ ತಿಳಿದು ಬಂದಂಥ ವಿಷಯಗಳನ್ನು ಮುಚ್ಚಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಈ ಶರಾವತಿ ಕರ್ಮಕಾಂಡದ ಬಗ್ಗೆ ಹಲವಾರು ವಿಷಯಗಳು ಬಂದಿವೆ. ಸಾರ್ವಜನಿಕರ ಪತ್ರಿಯಿಂದಲೂ ಬೇಕಾದಷ್ಟು ವಿಷಯಗಳು ಬಂದಿವೆ. ಹೀಗಿದ್ದರೂ ಕೂಡ ತಾವು ವಿಚಾರಣೆ ನಡೆಸದೇ ಹಾಗೆಯೇ ಮುಚ್ಚಿಟ್ಟಿದ್ದೀರಿ. ಆದುದರಿಂದ ಶರಾವತಿ ಕರ್ಮಕಾಂಡದ ಬಗ್ಗೆ ವಿಳಂಬವಾದರೆ ನಿಜವಾಗಿಯೂ ಜನರಿಗೆ ಅನುಮಾನ ಕಂಡು ಬರುತ್ತದೆ. ಆದುದರಿಂದ ಇದನ್ನು ವಿಳಂಬ ಮಾಡದೆ ವಿಚಾರಣೆ ನಡೆಸಿ, ಈ ಸದನ ಮುಗಿಯುವುದರೊಳಗಾದರೂ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡಿ ಎಂದು ಕೇಳುತ್ತೇನೆ. ನಾನೂ ಕೂಡ ಅಲ್ಲಿಗೆ ಹೋಗಿ ನೋಡಿದ್ದೇನೆ. ಅಲ್ಲಿರತಕ್ಕಂಥ ವಡೆಯನ ಛಾನಲ್ ಒಡೆದುಹೋಗಿದೆ. ಇದರಲ್ಲಿ ಸರ್ಕಾರದ ಜವಾಬ್ದಾರಿ ಇಲ್ಲವೇ ಎಂದು ಕೇಳುತ್ತೇನೆ.

ಇನ್ನು ಮಲೆನಾಡು ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈವೊತ್ತಿನ ದಿವಸ ತಾವು ಸಾವಿರಾರು ಎಕರೆಗಳಿಗೆ ನೀರಾವರಿಯಾಗತಕ್ಕಂಥ ಭದ್ರಾ ಅಣೆಕಟ್ಟು, ತುಂಗಭದ್ರಾ ಅಣೆಕಟ್ಟು, ಘಟಪ್ರಭಾ, ಮಲಪ್ರಭಾ ವಗೈರೆ ಯೋಜನೆಗಳನ್ನು ತೆಗೆದುಕೊಂಡಿದ್ದೀರಿ. ಇದರಿಂದ ಆ ಪ್ರದೇಶದ ಜನರಿಗೆ ನೀರು ಸಿಕ್ಕಲಿ, ಬೇಡ ಅನ್ನುವುದಿಲ್ಲ. ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಒಂದು ಮಾತು

ಹೇಳುತ್ತೇನೆ. ಅದು ಏನೆಂದರೆ ನಮಗೆ ಅಂಥಾ ನೀರಾವರಿ ಅನುಕೂಲ ಯಾವುದೂ ಇಲ್ಲ. ನಾವು ಮೊನ್ನೆ ದಿವಸ ಗುಲ್ಬರ್ಗಕ್ಕೆ ಹೋಗಿದ್ದಾಗ ಅಲ್ಲಿ ಬೋರ್‌ವೆಲ್ ತೆಗೆಯುವುದಕ್ಕೆ 150- 00 ಅಡಿ ಹೋದರೆ ನೀರು ಸಿಕ್ಕುತ್ತದೆ. ಆದರೆ ನಮ್ಮ ಮಲೆನಾಡಿನಲ್ಲಿ 300 ಅಡಿ ಹೋದರೂ ಕೂಡ ನೀರು ಸಿಕ್ಕುತ್ತಾ ಇಲ್ಲ. ಮತ್ತು ನಮ್ಮ ಮಲೆನಾಡಿನಂತಕ್ಕಂಥ ಕೆರೆಗಳಲ್ಲಿ ಹೂಳು ತೆಗೆಯತಕ್ಕಂಥ ಕೆಲಸವನ್ನೂ ಮಾಡಿಲ್ಲಾ. ಅಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಮಳೆಗಾಲದಲ್ಲಿ ಕೆರೆಗಳಲ್ಲಿ ನೀರು ಭರ್ತಿ ಇದ್ದ ಹಾಗೆ ಕಾಣುತ್ತದೆ. ಒಂದು ತಿಂಗಳು ಹೋದರೆ ಮಣ್ಣು ತುಂಬಿಕೊಂಡು ಬಿಡುತ್ತದೆ. ಆದುದರಿಂದ ಅಲ್ಲಿ ಕೆರೆಗಳಲ್ಲಿ ಹೂಳುಗಳನ್ನು ತೆಗೆಸುವ ಕೆಲಸವನ್ನಾದರೂ ಮಾಡಿ ಎಂದು ಹೇಳುತ್ತೇನೆ.

ಇನ್ನು ಮಲೆನಾಡಿನಲ್ಲಿ ಅಂಡರ್‌ಗ್ರೌಂಡ್‌ನಲ್ಲಿ ವಾಟರ್ ತೆಗೆದು ಟ್ಯಾಪಿಂಗ್ ಮಾಡಿ ವ್ಯವಸಾಯ ಮಾಡುವುದಕ್ಕೆ ಹೆಚ್ಚು ಆದ್ಯತೆ ಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮತ್ತು ನನಗೆ ಮಾತನಾಡಲು ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸುತ್ತೇನೆ.

4-30 P.M.

† ಶ್ರೀ ಎ. ಜಿ. ಕೊಡ್ಗಿ (ಬೈಂದೂರು).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಮಂಡಿಸಿದಂಥ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತ ಒಂದೆರಡು ಸೂಚನೆಗಳನ್ನು ಕೊಡಲು ಇಚ್ಛಿಪಡುತ್ತೇನೆ.

ಮಾನ್ಯ ಸಚಿವರು ರೂರಲ್ ಕಮ್ಯೂನಿಕೇಷನ್ ರೋಡ್ಸ್ ದುರಸ್ತಿ ಯೋಜನೆಯನ್ನು ಕೈಗೊಂಡು ನಮ್ಮ ರಾಜ್ಯದಲ್ಲಿ ಉಪಯುಕ್ತವಾದ ಕೆಲಸವನ್ನು ಮಾಡಿದ್ದಾರೆ ಎನ್ನುವುದು ಸಂತೋಷದ ವಿಚಾರ ಆದರೆ ಇದರಲ್ಲಿ ಕೆಲವೊಂದು ನ್ಯೂನತೆಗಳು ಮಾತ್ರ ಎದ್ದು ಕಾಣುತ್ತಿವೆ. ಇದನ್ನು ಸರಿಪಡಿಸದೆ ಹೋದರೆ, ಯಾವ ಮೂಲಭೂತ ಉದ್ದೇಶವಿದೆ ಆ ಉದ್ದೇಶವೇ ಸಾಧನೆಯಾಗದಂತೆ ಅಥವಾ ಸಾರ್ಥಕವಾಗದಂತೆ ಹೋಗಬಹುದು ಎನ್ನುವ ಭೀತಿ ನನಗೆ ಕಾಣುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವನ್ನು ನಾನು ಮನಸ್ಸಿನಲ್ಲಿಟ್ಟು ಹೇಳುವುದಾದರೆ, ಈ ಹೊತ್ತು ಯಾವ ಗ್ರಾಮಾಂತರ ಯೋಜನೆಯ ಅನ್ವಯ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದಾರೆ ಅದು ಹಣದ ಅಭಾವದಿಂದ ಅರ್ಧಕ್ಕೆ ನಿಂತುಹೋಗಿರುವ ಪ್ರಸಂಗಗಳು ಅನೇಕವಿವೆ. ರಸ್ತೆ ಫಾರ್ಮೇಷನ್ನಿಗೆ ಒಂದು ಕಿಲೋ ಮೀಟರ್ ದೂರಕ್ಕೆ 5500 ರೂಪಾಯಿ ಖರ್ಚು ಮಾಡಬೇಕೆಂದು ಗೊತ್ತುಮಾಡಿದೆ. ಇದರಿಂದ ನಮ್ಮ ಕಡೆ ರಸ್ತೆ ಕಾಮಗಾರಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಅಸಾಧ್ಯವಾಗಿರುತ್ತದೆ. ಈ ವಿಚಾರದಲ್ಲಿ ಸರ್ಕಾರ ಸೂಕ್ತ ಗಮನ ಹರಿಸಿ ಮಲೆನಾಡು ಪ್ರದೇಶಗಳಲ್ಲಿ ಹೆಚ್ಚಾಗಿ ಹಣವನ್ನು ಒದಗಿಸಿಕೊಡುವುದು ಅವಶ್ಯಕವೆನ್ನುವುದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಾರೆನ್ನುವ ಭರವಸೆ ನನಗಿದೆ. ನಮ್ಮ ಜಿಲ್ಲೆಗೆ ಬೇಕಾದಂಥ ರಸ್ತೆಗೆ ಒಂದು ಕಿಲೊಮೈಲಿಗೆ 22-23 ಸಾವಿರ ರೂಪಾಯಿ ವೆಚ್ಚ ತಗಲುವ ಅಂದಾಜಿದೆ. ಅದನ್ನು ನಮ್ಮ ಜಿಲ್ಲೆಯ ಸೂಪರಿಂಟೆಂಡಿಂಗ್ ಇಂಜಿನಿಯರ್ ಸರ್ಕಾರದ ಗಮನಕ್ಕೂ ತಂದಿದ್ದಾರೆ. ಇದನ್ನು ಶೀಘ್ರವೇ ಮಂಜೂರು ಮಾಡಿ ನಮ್ಮಲ್ಲಿ ರಸ್ತೆ ಕಾಮಗಾರಿಗಳು ಹೆಚ್ಚಿನ ರೀತಿಯಲ್ಲಿ ಆಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮ ಶೀಘ್ರವಾಗಿ ಕೈಕೊಳ್ಳುವುದಕ್ಕೆ ಇನ್ನೂ ಒಂದೆರಡು ವಿಚಾರಗಳನ್ನು ಸಭೆಯ ಮುಂದೆ ಇಡುವುದಕ್ಕೆ ಇಚ್ಛಿಪಡುತ್ತೇನೆ.

ಗ್ರಾಮಾಂತರ ರಸ್ತೆ ಯೋಜನೆಗೆ ಒಂದೆರಡು ಅಡ್ಡಿ ಆತಂಕಗಳಿವೆ. ಮಲೆನಾಡು ಕ್ಷೇತ್ರದಲ್ಲಿ ಅನೇಕ ಸಣ್ಣ ಸಣ್ಣ ಹಳ್ಳಗಳು ಮತ್ತು ಹೊಳೆಗಳು ಇರುತ್ತವೆ. ಸಾರಿಗೆ ಸಂಪರ್ಕ ವ್ಯವಸ್ಥೆ ಸಂಪೂರ್ಣವಾಗಿ ಆಗಬೇಕಾದರೆ ಈ ಹೊತ್ತು ಸಣ್ಣ ಸೇತುವೆಗಳನ್ನು ರಚಿಸುವುದು ಅವಶ್ಯಕ. ಈ ಯೋಜನೆಯ ಅನ್ವಯ 10 ಅಡಿ ಸೇತುವೆಗಳನ್ನು ರಚಿಸತಕ್ಕ ಅವಕಾಶವಿದೆ. ಇದಕ್ಕಿಂತ ಹೆಚ್ಚು ಇರುವ ದೊಡ್ಡ ಹಳ್ಳಗಳು ಬಂದಲ್ಲಿ ರಸ್ತೆಗಳನ್ನು ಅಲ್ಲಲ್ಲಿ ನಿಲ್ಲಿಸಬೇಕಾದ ಸನ್ನಿವೇಶ ಅನೇಕ ಕಡೆ ಒದಗಿದೆ. ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ಸಂಪರ್ಕವನ್ನು ಒದಗಿಸಿಕೊಡುವ ಯೋಜನೆ ಇರುವುದರಿಂದ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಇಂಥ ಕಡೆಗಳಲ್ಲಿ ಯೋಗ್ಯ ಸೇತುವೆಗಳನ್ನು ರಚಿಸಲಿಕ್ಕೆ ಅವಕಾಶವನ್ನು ಕಲ್ಪಿಸಬೇಕು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ,

ಮಲೆನಾಡು ಪ್ರದೇಶವೆಂದರೆ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಶಿವಮೊಗ್ಗ ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿ ಏನು ರಸ್ತೆ ಕಾಮಗಾರಿ ಈ ಹೊತ್ತು ಮಾಡಿದ್ದಾರೆ ಅದು ಸಂಪೂರ್ಣವಾಗಿ ಹಾಳಾಗಿ ಬರುವ ವರ್ಷ ರಸ್ತೆ ಮಾಡಿದ ವಿಚಾರ ಕಾಣದಂಥ ಸಂದರ್ಭವಿದೆ.

(ಶ್ರೀ ಎ. ಜಿ. ಕೊಡ್ಗಿ)

ಗ್ರಾಮಾಂತರ ರಸ್ತೆ ರಚನೆ ಆಗುವಾಗ ಅದಕ್ಕೆ ಬೇಕಾದ ಮೆಟಲಿಂಗ್ ಸೌಕರ್ಯ ಒದಗಿಸಿ, ಡಾಂಬ್ರು ಹಾಕದೆ ಇದ್ದರೆ ಈ ಯೋಜನೆ ಫಲಕಾರಿಯಾಗಲಾರದು. ಮಾನ್ಯ ಸಚಿವರು ಗಮನ ಹರಿಸಿ ಈ ಯೋಜನೆಯ ಮೂಲ ಉದ್ದೇಶ ಸಾಧಿಸುವುದಕ್ಕೆ ಬೇಕಾದಂಥ ಕಾರ್ಯಕ್ರಮವನ್ನು ರೂಪಿಸಿ ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಮುಂಗಡಪತ್ರದಲ್ಲಿ ಒದಗಿಸಿರುವ ಹಣದ ವಿಚಾರ ಮಾತನಾಡುವುದಾದರೆ ಬಹುಶಃ ಎರಡು ಮಾತು ನಾವು ಸ್ವಲ್ಪ ಕಟುವಾಗಿ ಮಾತನಾಡಬೇಕಾದ ಪ್ರಸಂಗ ಒದಗಿ ಬಂದಿದೆ ಎಂದರೆ ತಪ್ಪಾಗ ಲಾರದು. ರಾಜ್ಯದಲ್ಲಿ ಒಂದು ಕಡೆ ಬರಗಾಲವಿದೆ. ಇದರಲ್ಲಿ ಬಹುಶಃ ಭಿನ್ನಾಭಿಪ್ರಾಯವಿಲ್ಲ. 54 ಕೋಟಿ ರೂಪಾಯಿಗಳ ದೊಡ್ಡ ಯೋಜನೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನೆರವಿನಿಂದ ಮಾಡಿದೆ. ಅಲ್ಲಿ ಆಗಬೇಕಾದ ಕಾಮಗಾರಿಗಳು ಹಲವಾರು. ಆದರೆ ರಾಜ್ಯಸರ್ಕಾರ ಕೇವಲ ಬರಗಾಲ ಪ್ರದೇಶಗಳಿಗೆ ಮಾತ್ರ ಹೆಚ್ಚಿನ ಗಮನವನ್ನು ಹರಿಸುವಂಥ ಚಿತ್ರ ನಮ್ಮ ಕಣ್ಣು ಮುಂದೆ ಇದೆ. ಆ ಕಡೆ ಗಮನ ಹರಿಸಬೇಕಾದ್ದು ಸ್ವಾಭಾವಿಕ. ಆದರೆ ಇತರ ಪ್ರದೇಶಗಳನ್ನು ಸಂಪೂರ್ಣ ವಾಗಿ ಕಡೆಗಣಿಸಿದರೆ ಇಲ್ಲಿಯೂ ಕೂಡ ಇನ್ನೂ ಅನೇಕ ಕಡೆಗಳಲ್ಲಿ ಮುಂದೆ ಬರಗಾಲ, ಕ್ಷಾಮ ಬರು ವಂಥ ಪರಿಸ್ಥಿತಿಗಳು ಬರಬಹುದು. ಅದನ್ನು ಈ ಹೊತ್ತಿನಿಂದಲೇ ತಡೆಗಟ್ಟಬೇಕಾಗಿದೆ ಎನ್ನುವುದು ನನ್ನ ಅಭಿಪ್ರಾಯ.

ಸಣ್ಣ ನೀರಾವರಿ ಯೋಜನೆ ವಿಚಾರವಾಗಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಯೋಜನೆಯನ್ನೂ ಕೈಕೊಂಡ ಹಾಗೆ ಇಲ್ಲ ; ದೊಡ್ಡ ನೀರಾವರಿ ಯೋಜನೆಯನ್ನು ಕೈಗೊಂಡಿದ್ದೂ ಇಲ್ಲ. ದೊಡ್ಡ ನೀರಾವರಿ ಯೋಜನೆಗಳಾದ ವಾರಾಹಿ, ಹಾಲಾಡಿ, ಮುಂತಾದುವು ಬಹುಶಃ ಮದ್ರಾಸ್ ರಾಜ್ಯದಲ್ಲಿರುವಾಗಲೇ ಅಂದಾಜುಗಳು ತಯಾರಾಗಿದ್ದು ಈ ಯೋಜನೆಗಳು ಇನ್ನೂ ಫಲಕಾರಿಯಾಗಿಲ್ಲ. ಕಳೆದ ಬಾರಿ ಕೂಡ ಈ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತಂದಿ ದ್ದೇನೆ. ಅನೇಕ ಪ್ರಶ್ನೆಗಳನ್ನು ಹಾಕಿ ಸರ್ಕಾರದ ಗಮನವನ್ನು ಸೆಳೆದಿದ್ದರೂ ಕೂಡ ಇದುವರೆಗೂ ಫಲಕಾರಿಯಾಗಿಲ್ಲ. ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಇತ್ತ ಕಡೆ ಸೂಕ್ತ ಗಮನವನ್ನು ಹರಿಸಿ ದಕ್ಷಿಣ ಕನ್ನಡ ಜಿಲ್ಲೆಯ ಯೋಜನೆಗಳಿಗೆ ಶೀಘ್ರವೇ ಮಂಜೂರಾತಿಯನ್ನು ದೊರಕಿಸಿಕೊಟ್ಟು ಇಡೀ ಜಿಲ್ಲೆಗೆ ಹೆಚ್ಚು ಪ್ರಯೋಜನವಾಗುವಂಥ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭ ದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಚಿಕ್ಕ ನೀರಾವರಿ ಯೋಜನೆಗಳ ವಿಚಾರ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯ 83-84 ಯೋಜನೆಗಳು ಸರ್ಕಾರದ ಮುಂದೆ ಇವೆ. ಆದರೂ ಯಾವ ಚಿಕ್ಕ ನೀರಾವರಿ ಯೋಜನೆಗಳನ್ನೂ ಮಂಜೂರು ಮಾಡಿಲ್ಲ. ಈಗ ಮಂಜೂರಾತಿ ಅವುಗಳಿಗೆ ದೊರಕಿಸಿ ಕೊಟ್ಟರೂ ಕೂಡ ಮೇ, ಜೂನ್, ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಮಳೆ ವಿಪರೀತ ಇರುವುದರಿಂದ ಯಾವ ಕಾಮಗಾರಿ ಮಾಡಲಿಕ್ಕೂ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಬೇರೆ ಕಾಮಗಾರಿಗಳಿಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಲೆವಲ್‌ನಲ್ಲಿ ಅಥವಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಲೆವಲ್‌ನಲ್ಲಿ ಮಂಜೂರು ಮಾಡಿ ಕೆಲಸಕಾರ್ಯ ಮಾಡ ಲಿಕ್ಕೆ ಏನೊಂದು ಅಧಿಕಾರವಿದೆಯೋ ಅದೇ ರೀತಿಯಲ್ಲಿ ಚಿಕ್ಕನೀರಾವರಿ ಯೋಜನೆಗಳಿಗೆ ಕೂಡ ಪಣ್ಣು ಸಣ್ಣ ಮಟ್ಟದಲ್ಲಿ ಜಿಲ್ಲೆಯಲ್ಲಿರುವ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಂಜೂರಾತಿ ಕೊಟ್ಟು ಕೆಲಸ ಕಾರ್ಯ ನಡೆಯುವಂತೆ ಆಸ್ಪದ ಮಾಡಿಕೊಡಬೇಕೆಂದು ಹೇಳುತ್ತೇನೆ.

ಎಕಾನಮಿ ಆರ್ಡರ್ ವಿಚಾರವಾಗಿ ಒಂದು ಮಾತು ಆಡದೆ ಹೋದರೆ ತಪ್ಪಾದೀತು. ಎಕಾ ನಮಿ ಆರ್ಡರ್‌ನಿಂದ ಮಲೆನಾಡು ಪ್ರದೇಶಗಳಿಗೆ ಬಹಳಷ್ಟು ಪೆಟ್ಟು ಕೊಡುವಂಥ ಆಜ್ಞೆಯಾಗಿ ಪರಿಣಮಿಸುತ್ತದೆ. ಪ್ರತಿವರ್ಷವೂ ಸಾಧಾರಣವಾಗಿ ಜನವರಿ, ಫೆಬ್ರುವರಿ ತಿಂಗಳ ಅಂತ್ಯದಲ್ಲಿ ಒಂದು ಎಕಾನಮಿ ಆರ್ಡರ್ ಜಾರಿಗೆ ತಂದು, ಜೂನ್ ಅಥವಾ ಜುಲೈ ನಲ್ಲಿ ಆ ಆಜ್ಞೆಯನ್ನು ಹಿಂತೆ ಗೆದುಕೊಳ್ಳುವಂಥ ಪರಿಪಾಠವನ್ನು ಕಾಣುತ್ತಿದ್ದೇವೆ. ಇದರ ಪರಿಣಾಮವೇನೆಂದರೆ ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಕಾಮಗಾರಿ ಮಾಡಬೇಕಾದ ಕಾಲ ಡಿಸೆಂಬರ್‌ನಿಂದ ಮೇ ತಿಂಗಳವರೆಗೆ. ಜೂನ್ ಜುಲೈ ತಿಂಗಳಿನಲ್ಲಿ ಆಜ್ಞೆಯನ್ನು ಹಿಂತೆಗೆದುಕೊಂಡರೂ ನಮ್ಮಲ್ಲಿ ಮಳೆ ವಿಪರೀತವಾಗಿ ಬೀಳುವುದರಿಂದ ಯಾವ ಕಾಮಗಾರಿಯನ್ನೂ ಮಾಡುವುದಕ್ಕೆ ಅನುಕೂಲವಾಗುವುದಿಲ್ಲ. ಬೇರೆ ಪ್ರದೇಶಗಳಲ್ಲಿ ಆ ಕಾಲದಲ್ಲಿ ಕಾಮಗಾರಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಹೆಚ್ಚು ಮಳೆ ಬರು ವಂಥ ಮಲೆನಾಡು ಪ್ರದೇಶಗಳಲ್ಲಿ ಜೂನ್ ತಿಂಗಳ ನಂತರ ಯಾವ ಕಾಮಗಾರಿಯೂ ನಡೆಯ ಲಿಕ್ಕೆ ಸಾಧ್ಯವಿಲ್ಲ. ಡಿಸೆಂಬರ್ ನಂತರ ಹೊಸ ಕಾಮಗಾರಿ ತೆಗೆದುಕೊಳ್ಳಲಿಕ್ಕೆ ಎಕಾನಮಿ

ಆರ್ಡರ್‌ನಿಂದ ಅಡ್ಡಿ ಆತಂಕ ಉಂಟಾಗುತ್ತದೆ. ಎರಡು ಮೂರು ವರ್ಷಗಳಿಂದ ಕೂಡ ಇದೇ ರೀತಿ ಪರಿಣಮಿಸುತ್ತಿದೆ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಮಾಡಿ ಕೊಡಲು ಎಕಾನಮಿ ಆರ್ಡರ್ ಹಿಂತೆಗೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮುಂಗಡ ಪತ್ರದಲ್ಲಿ ಒದಗಿಸಿರುವ ಹಣದ ವಿಚಾರವಾಗಿ ಕೂಡ ನಮ್ಮ ಜಿಲ್ಲೆಯಮಟ್ಟಿಗೆ ಶೋಚನೀಯವಾದ ಪರಿಸ್ಥಿತಿ ಇದ್ದ ಹಾಗೆ ಕಾಣುತ್ತದೆ. ರೋಡ್ಸ್, ಬ್ರಿಡ್ಜಸ್, ಸ್ಪೆಷಲ್ ರಿಪೇರ್ಸ್ ಇವುಗಳಿಗೆ ಸಾಕಷ್ಟು ಹಣವನ್ನು ಒದಗಿಸಿಕೊಟ್ಟಿಲ್ಲ. ಕೆಲವು ಕಡೆಗಳಲ್ಲಿ ಕಳೆದ ವರ್ಷ ಏನು ಒದಗಿಸಲಾಗಿತ್ತೋ ಅದಕ್ಕಿಂತಲೂ ಕಡಮೆ ಹಣ ಒದಗಿಸಿದ್ದಾರೆ. ಇದರ ಪರಿಣಾಮವಾಗಿ ನಮ್ಮ ಜಿಲ್ಲೆಯಲ್ಲಿ ಏನು ರಸ್ತೆಗಳಿವೆ ಅದನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಸೇತುವೆಗಳನ್ನು ರಚನೆ ಮಾಡಬೇಕಾದ್ದು ಇದೆ. ಇಂಥ ಸಂದರ್ಭದಲ್ಲಿ ಮುಂಗಡ ಪತ್ರದಲ್ಲಿ ಒದಗಿಸಿರುವ ಹಣದಿಂದ ಯಾವ ಕೆಲಸ ಕಾರ್ಯವನ್ನೂ ಮಾಡಲಿಕ್ಕೆ ಅಸಾಧ್ಯವಾಗಿ ಪರಿಣಮಿಸುತ್ತಿದೆ. ದಯವಿಟ್ಟು ಇದಕ್ಕೆ ಏನಾದರೂ ಹೊಸ ಯೋಜನೆಯನ್ನಾದರೂ ಕೈಕೊಂಡು ಮಲೆನಾಡು ಪ್ರದೇಶದಲ್ಲಿ ಹೆಚ್ಚಿನ ಕಡೆಗಳಲ್ಲಿ ಡಾಂಬರು ಹಾಕಿಸುವುದು, ಹೊಸ ಸೇತುವೆಗಳನ್ನು ಸಣ್ಣ ಸಣ್ಣ ಮೋರಿಗಳನ್ನು ರಚಿಸುವುದು ಇವುಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಕೆಲವು ವಿಚಾರಗಳನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಮೊಟ್ಟ ಮೊದಲನೆಯದಾಗಿ ಶ್ರೀಮಾನ್ ಚನ್ನಬಸಪ್ಪನವರು ಹಿಂದೆ ಇಲ್ಲಿ ಮಂತ್ರಿಗಳಾಗಿದ್ದಾಗ ಕಂಟ್ರಾಕ್ಟರುಗಳ ವರ್ಗೀಕರಣ ಎಂದರೆ ಕ್ಲಾಸು ಒಂದು, ಎರಡನೇ ವರ್ಗ, ಮೂರನೇ ವರ್ಗ ಹಾಗೂ ನಲ್ಕನೆ ವರ್ಗ ಎಂದು ಬೇರೆ ಬೇರೆ ವರ್ಗಗಳ ವರ್ಗೀಕರಣವನ್ನು ಇಲ್ಲಿ ಜಾರಿಗೆ ತಂದರು. ಇದರಲ್ಲಿ ಶರಾವತಿಯಂಥ ಭಾರಿ ಕಾಮಗಾರಿ ಕೆಲಸಗಳನ್ನು ದೊಡ್ಡ ಕಂಟ್ರಾಕ್ಟರುಗಳಿಗೆ ವಹಿಸಿ ಕೆಲಸಗಳನ್ನು ಮಾಡಿದರು, ಆದರೆ ಇಲ್ಲಿಯುವರೆಗೂ ಶರಾವತಿಯಲ್ಲಿ ಆಗಿರುವ ದುರ್ವ್ಯವಹಾರಗಳನ್ನು ತನಿಖೆ ಮಾಡಬೇಕೆಂದು ಹೇಳುತ್ತಿದ್ದರೂ ಇದುವರೆಗೆ ಮಾಡಲಿಲ್ಲ. ಇದರಿಂದ ಸಾರ್ವಜನಿಕ ಹಣ ಅಧಿಕಾರಿಗಳಿಂದ ದುರ್ವ್ಯವಹಾರಗಳಾಗಿ ಇಂದು ಈ ಸ್ಥಿತಿಗೆ ಬಂದಿದೆ. ಇದಕ್ಕಾಗಿ ನನ್ನ ಮೊದಲನೇ ಸಲಹೆ ಇನ್ನು ಮುಂದೆ ಒಂದು ಲಕ್ಷಕ್ಕಿಂತ ಹೆಚ್ಚಿಗೆ ಕೆಲಸಗಳನ್ನು ಯಾವ ಕಂಟ್ರಾಕ್ಟರುಗಳಿಗೂ ಕೊಡದೆ ಅದನ್ನು ಸರಕಾರವೇ ನೇರವಾಗಿ ಅವರ ಅಧಿಕಾರಿಗಳ ಮೂಲಕ ಮಾಡಿಸಬೇಕೆಂದು ಸಲಹೆ ಮಾಡುತ್ತೇನೆ.

ನಮ್ಮಲ್ಲಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಇದೆಯೆಂದು ನಾನು ಭಾವಿಸುತ್ತೇನೆ. ಸಮಾಜವಾದ ಎಂದು ಹೇಳತಕ್ಕ ಒಂದು ಸರಕಾರ ಜನತೆಯ ಸಮಸ್ಯೆಗಳನ್ನು ಅರಿತು ಹೆಚ್ಚಿನ ಒಂದು ಅಧಿಕಾರವನ್ನು ಹಾಗೂ ಪ್ರೋತ್ಸಾಹವನ್ನು ಕೊಡದೇ ಇರುವುದು ತುಂಬಾ ವಿಷಾದಕರಮಾದುದು. ಈ ಸಂದರ್ಭದಲ್ಲಿ ನಾನು ಸುಚಿಸುವುದು ಮೈಸೂರು ರಾಜ್ಯದಲ್ಲಿರುವ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮೂಲಕ ಇದಕ್ಕೆ ಇನ್ನೂ ಅಧಿಕಾರ ವಹಿಸಿ ಮತ್ತು ಹೆಚ್ಚು ಬಂಡವಾಳ ಕೊಟ್ಟು ಒಂದು ಲಕ್ಷಕ್ಕಿಂತ ಹೆಚ್ಚಿನ ಕೆಲಸಗಳನ್ನು ಈ ಕಾರ್ಪೊರೇಷನ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಮಾತನಾಡುತ್ತ ಒಂದು ವಿಚಾರ ಹೇಳಿದರು, ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಮೈಸೂರು ರಾಜ್ಯದಲ್ಲಿ ಅನೇಕ ಸ್ಕ್ಯಾಂಡಲ್ಸ್‌ಗಳು ನಡೆದಿವೆ, ಇಂತಹ ಸ್ಕ್ಯಾಂಡಲ್ಸ್‌ಗಳಲ್ಲಿ ಶರಾವತಿಯ ಸ್ಕ್ಯಾಂಡಲ್ ಕೂಡ ಒಂದು. ಈ ಶರಾವತಿಯ ಕರ್ಮ ಕಾಂಡದ ಬಗ್ಗೆ ಇದುವರೆಗೆ ಇದ್ದ ಸರಕಾರವೂ ವಿಚಾರಣೆ ಮಾಡುತ್ತೇವೆ ಎಂದು ಹೇಳುತ್ತ ಬಂದರು ಮತ್ತು ಆಗ ಶ್ರೀಮಾನ್ ಚನ್ನಬಸಪ್ಪನವರೂ ಕೂಡ ಇದರ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಹೇಳಿದ್ದರು. ಇದುವರೆಗೆ ಈ ಸರಕಾರ ಬಂದು ಸುಮಾರು ಒಂದು ವರ್ಷದ ಮೇಲಾದರೂ ಈ ಶರಾವತಿ ಕರ್ಮ ಕಾಂಡದ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರಾಗಲೀ ಇಲ್ಲವೇ ಮುಖ್ಯ ಮಂತ್ರಿಗಳಾಗಲೀ ಇದುವರೆಗೆ ಮಾಡಲಿಲ್ಲ, ಈ ರೀತಿ ಜನತೆಯ ಕಣ್ಣಿಗೆ ಮಣ್ಣೆರಚುವ ಕೆಲಸಗಳನ್ನು ಶ್ರೀಮಾನ್ ಚನ್ನಬಸಪ್ಪನವರು ಮಾಡಬಾರದು. ಈಗಲಾದರೂ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಚನ್ನಬಸಪ್ಪನವರು ನಿರ್ದಿಷ್ಟವಾಗಿ ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಲಿ ಎಂದು ಸಲಹೆ ಮಾಡುತ್ತೇನೆ ಮತ್ತು ವಿಚಾರಣೆಯನ್ನು ಪೂರ್ತಿ ಮಾಡಿ ಇದರ ಬಗ್ಗೆ ಅವರಿಂದ ಸರಿಯಾದ ಉತ್ತರವನ್ನು ನಿರೀಕ್ಷಿಸುತ್ತೇವೆ, ಆ ರೀತಿ ಮಾಡಬೇಕೆಂದೂ ಅವರಲ್ಲಿ ಒತ್ತಾಯ ಮಾಡುತ್ತೇನೆ. ಶ್ರೀಮಾನ್ ಚನ್ನಬಸಪ್ಪನವರು ನಮ್ಮ ಸಿ. ಐ. ಡಿ. ಗಳ ಮೂಲಕ

(ಶ್ರೀ ಸಿ. ಬೈರೇಗೌಡ)

ಕೆಲವು ಕಡೆ ವಿಚಾರಣೆ ನಡೆಸಿ ಬಹಳ ದಿಟ್ಟತನವಾದ ಕ್ರಮಗಳನ್ನು ತೆಗೆದುಕೊಂಡರು, ಮಾನ್ಯ ಮಂತ್ರಿಗಳು ನುಡಿದಂತೆ ನಡೆಯುವವರು ಎಂದು ನಾವೆಲ್ಲ ತಿಳಿದಿದ್ದೇವೆ. ಇದರಂತೆ ಈಚೆಗೆ ಮಾನ್ಯ ಮಂತ್ರಿಗಳು ಕೆಲವರನ್ನು ಸಸ್‌ಪೆಂಡು ಮಾಡಿದರು, ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ ಯಾರನ್ನು ಸಸ್‌ಪೆಂಡು ಮಾಡಿದ್ದರೋ ಆರ್ಡರನ್ನು ರಿವರ್ಸ್ ಮಾಡುತ್ತಿರುವರೆಂದು ಕೇಳಿಬರುತ್ತಿದೆ. ಯಾವಾವ ಒಬ್ಬರನ್ನು ಲೋಪದೋಷಗಳಾಗಿವೆ ಎಂದು ಅಂತಹ ಅಧಿಕಾರಿಗಳನ್ನು ಸಸ್‌ಪೆಂಡು ಮಾಡಿದ ಮೇಲೆ ಪುನಃ ಅವರಲ್ಲೇನೂ ಇಲ್ಲ ಎಂದು ಅದೇ ಆರ್ಡರನ್ನು ರಿವರ್ಸ್ ಮಾಡಿದರೆ ಇದೇನಾಗುತ್ತದೆ ಎಂದರೆ ಕೆಳಗಿರತಕ್ಕ ಸಣ್ಣ ಸಣ್ಣ ಅಧಿಕಾರಿಗಳಿಗೆ ಒಂದು ರೀತಿಯ ನಗೆಪಾಟಲು ಆಗುತ್ತದೆ. ಲೋಕೋಪಯೋಗಿ ಇಲಾಖೆ ಲಂಚಗೊಳಿತನಕ್ಕೆ ಹೆಸರುವಾಸಿಯಾದ ಖಾತೆ ಎಂದು ಇದ್ದರೂ ಇದನ್ನು ಲೋಕದ ಜನತೆಗೆ ಉಪಯೋಗವಾಗುವಂತೆ ಮಾಡುವ ಇಲಾಖೆ ಮಾಡಬೇಕೆಂದು ಮಾನ್ಯ ಮಂತ್ರಿಗಳೇನೋ ಕೆಲವಾರು ಅಧಿಕಾರಿಗಳನ್ನು ಸಸ್‌ಪೆಂಡು ಮಾಡುವ ಧೈರ್ಯ ಮಾಡಿದರು, ಆದರೆ ಪ್ರಭಾವಕ್ಕೊಳಗಾಗಿ ಇಂದು ಆ ಆರ್ಡರ್ಸ್‌ನ್ನು ರಿವರ್ಸ್ ಮಾಡುತ್ತಾರೆಂದು ಕೇಳುತ್ತೇವೆ. ಇದರ ಬಗ್ಗೆ ಏನಾದರೂ ಒಂದು ರೀತಿಯಾದ ಮಿತಿ ಇರಬೇಕು. ಇದರ ಕಡೆಗೆ ಸರಕಾರ ಲಕ್ಷ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಮ್ಯೂನಿಕೇಷನ್ ಬಗ್ಗೆ ಹೇಳುವಾಗ ನ್ಯಾಷನಲ್ ಹೈವೇಸ್ ಎಂದು ಇದೆ. ಮೈಸೂರು ರಾಜ್ಯದಲ್ಲಿರುವಂತೆ ಇದು ಅನೇಕ ಇತರ ರಾಜ್ಯಗಳಲ್ಲಿಯೂ ಇದೆ. ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚು ರಸ್ತೆಗಳನ್ನು ನ್ಯಾಷನಲ್ ಹೈವೇಸ್ ಶಾಖೆಗೆ ಸೇರಿಸಬೇಕೆಂದು ಕೇಂದ್ರದಲ್ಲಿ ಒತ್ತಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮಲ್ಲಿ ಇನ್ನೂ 200 ಕಿಲೋಮೀಟರು ರಸ್ತೆಗಳನ್ನು ನ್ಯಾಷನಲ್ ಹೈವೇಸ್ ಯೋಜನೆ ಮೂಲಕ ಮಾಡಿಸಬಹುದು, ಇದಕ್ಕೆ ಸರಕಾರ ಆದ್ಯತೆ ಕೊಡಬೇಕು, ಇನ್ನು ನಮ್ಮಲ್ಲಿ ಒಳ್ಳೊಳ್ಳೆಯ ಬಂದರುಗಳೂ ಇವೆ. ಕಾರವಾರ ಇದೆ, ಮಾಲ್ಪೆ ಇದೆ, ಕಾರವಾರ ಹಾಗೂ ಮಾಲ್ಪೆ ಬಹಳ ಉತ್ತಮವಾದ ಬಂದರುಗಳು, ಇಂತಹ ಬಂದರುಗಳನ್ನು ಅಭಿವೃದ್ಧಿ ಪಡಿಸಿದರೆ ನಮ್ಮ ರಾಜ್ಯದಿಂದ ಹೊರಕ್ಕೆ ಸಾಗಾಣಿಕೆ ಮಾಡಲು ಬಹಳ ಅನುಕೂಲವಾಗುತ್ತದೆ ಮತ್ತು ಹೊರದೇಶಗಳಿಂದ ನಮ್ಮ ರಾಜ್ಯಕ್ಕೆ ಸಾಮಾನುಗಳನ್ನು ತರಿಸಲೂ ಸಹಾಯವಾಗುತ್ತದೆ. ನಮ್ಮ ರಾಜ್ಯದಲ್ಲಿರುವ ಎಲ್ಲ ಬಂದರುಗಳನ್ನೂ ಅಭಿವೃದ್ಧಿ ಮಾಡುವುದರ ಕಡೆಗೆ ಸರಕಾರ ಇನ್ನೂ ಹೆಚ್ಚು ಲಕ್ಷ ಕೊಡಬೇಕೆಂದು ಇಲ್ಲಿ ಸೂಚಿಸುತ್ತೇನೆ.

ನಮ್ಮ ರಾಜ್ಯದ ಕೆಲವು ಬರಗಾಲದ ಪ್ರದೇಶಗಳಿಗೆ ಈಗತಾನೇ ನಮ್ಮ ಮಾನ್ಯ ಮಂತ್ರಿಗಳೊಡನೆ ಕೆಲವಾರು ಸದಸ್ಯರೂ ಹೋಗಿ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಬಂದಿದ್ದಾರೆ, ಇಲ್ಲಿನ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಬಂದಿದ್ದಾರೆ, ಮೈಸೂರು ರಾಜ್ಯದ ಜನತೆ ಇಂತಹ ಕಷ್ಟಗಳಿಗೆ ಸಿಕ್ಕಿರುವುದರ ಬಗ್ಗೆ ಇಲ್ಲಿರುವ ಎಲ್ಲ ಸದಸ್ಯರ ಸಹಾನುಭೂತಿಯೂ ಸಹ ಇರಬೇಕಾದ್ದು ನ್ಯಾಯ ಹಾಗೂ ಧರ್ಮ ಎಂದು ನಾನು ಭಾವಿಸುತ್ತೇನೆ. ಗುಲ್ಬರ್ಗಾ ಹಾಗೂ ಬೀದರು ಹಾಗೂ ಇನ್ನಿತರ ಪ್ರದೇಶಗಳಲ್ಲಿ ಯಾವ ರೀತಿಯಾದ ದುರಸ್ತಿ ಕೆಲಸಗಳನ್ನು ಇದುವರೆಗೆ ಮಾಡುತ್ತಿರುವುದನ್ನು ನೋಡಿದಾಗ ಇನ್ನೇನೂ ಹೆಚ್ಚು ಕೆಲಸಗಳನ್ನು ಕೈಗೊಂಡಿರಲಿಲ್ಲ. ಈಚೆಗೆ ಇಲ್ಲಿ ಚೆನ್ನಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ. ಬರಗಾಲಕ್ಕೆ ಸಿಕ್ಕಿರುವ ಆ ಪ್ರದೇಶಗಳಂತೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಕೂಡ ಅನೇಕ ಕಡೆ ಭೀಕರ ಪರಿಸ್ಥಿತಿ ಇದೆ ಎನ್ನುವುದನ್ನು ಸರಕಾರ ಇನ್ನೂ ಕಂಡುಕೊಂಡಿಲ್ಲ. ಇದರ ಕಡೆಗೂ ಗಮನಿಸಬೇಕೆಂದು ಸೂಚಿಸುತ್ತೇನೆ. ನಮ್ಮ ಕಡೆಗೆ ಪರ್ಮನೆಂಟು ರಿಲೀಫ್ ಮೆಷರ್ಸ್‌ಗಳನ್ನು ತೆಗೆದುಕೊಳ್ಳಬೇಕು, ಇದೇ ಪ್ರಕಾರ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಪೂರ್ತಿಯಾದ ಪರಿಹಾರ ಕಾಮಗಾರಿಗಳನ್ನು ಇನ್ನೂ ತೆಗೆದುಕೊಳ್ಳಲಿಲ್ಲ. ಇದರ ಬಗ್ಗೆ ಸಾಕಷ್ಟು ತ್ವರಿತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಸರಕಾರಕ್ಕೆ ಈ ಸಂದರ್ಭದಲ್ಲಿ ಇನ್ನೊಂದು ಸಲಹೆ ಮಾಡಲು ಇಷ್ಟಪಡುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ಯಾವ ಮೇಜರು ನೀರಾವರಿ ಯೋಜನೆಗಳೂ ಇಲ್ಲ. ಇಲ್ಲಿ ಸಣ್ಣ ಸಣ್ಣ ಕೆರೆಗಳು ಬೇಕಾದಷ್ಟು ಇವೆ, ಇವನ್ನು ಹೂಳು ತೆಗೆಸಿ ದುರಸ್ತು ಮಾಡಿದರೆ ಇದರ ಕೆಳಗೆ ನೀರಾವರಿ ಮಾಡಿ ಹೆಚ್ಚು ಬೆಳೆ ಮಾಡಲು ಸಹಾಯವಾಗುತ್ತದೆ. ಇದರಿಂದ ಕೆಲವು ಕಡೆ ನೂರು ಎಕರೆ ಭೂಮಿಗೆ ಅನುಕೂಲವಾಗುತ್ತದೆ. ಇಲ್ಲಿರುವ ಕೆರೆಗಳನ್ನು ಇನ್ನೂ ರಿಪೇರಿ ಮಾಡುವುದರ ಕಡೆಗೆ ಹೆಚ್ಚು ಗಮನಹರಿಸುತ್ತಿಲ್ಲ. ಇಲ್ಲಿರುವ ಸಣ್ಣ ಕೆರೆಗಳನ್ನು ಆದಷ್ಟು ಬೇಗನೆ ರಿಪೇರಿ ಮಾಡಿಸಿಕೊಟ್ಟರೆ ಇಲ್ಲಿನ ಜನರು ಸ್ವಲ್ಪಮಟ್ಟಿಗೆ ವ್ಯವಸಾಯ ಮಾಡಲು ಸಹಾಯವಾಗುತ್ತದೆ ಮತ್ತು ಇದರಿಂದ

ನೂರಾರು ಎಕರೆಗಳಿಗೆ ನೀರಿನ ಸಹಾಯವೂ ಸಿಗಲು ಅನುಕೂಲವಾಗುತ್ತದೆ, ಕೆಲವು ಕಡೆ ಹೊಸ ಕೆರೆಗಳನ್ನೂ ನಿರ್ಮಾಣ ಮಾಡಬೇಕಾಗಿದೆ. ಇದಕ್ಕಾಗಿ ಒಂದು ಸ್ಕೀಂ ಮಾಡಿ ಅದನ್ನೂ ಬೇಗನೆ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನಿಮ್ಮ ಎಂ. ಎಸ್. ಇ. ಬಿ. ನಲ್ಲಿ ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಒಂದು ಯೋಜನೆ ತಯಾರು ಮಾಡಿದ್ದಾರೆ. ಇದರ ವಿವರಗಳೇನೂ ಎನ್ನುವುದು ನಮಗೆ ಇನ್ನೂ ಗೊತ್ತಾಗಿಲ್ಲ. ಆದರೆ ಇದರಲ್ಲಿರುವ ಒಂದು ಪಟ್ಟಿಯಲ್ಲಿ ಕೆಲವು ಊರುಗಳ ಹೆಸರುಗಳು ಇವೆ, ಇಲ್ಲಿಗೆಲ್ಲಾ ದೀಪಗಳನ್ನು ಹಾಕಿಸುತ್ತೇವೆಂದು ಇದೆ. ಆದರೆ ಈ ಪಟ್ಟಿಯಲ್ಲಿ ಕೆಲವು ಊರುಗಳನ್ನು ಹಾಕಿದ್ದಾರೆ. ಆದರೆ ನಮ್ಮ ಕಡೆ ಹೆಸರುಗಳಿರೂ ಊರುಗಳೇ ಇಲ್ಲ, ಇದನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಗಿದೆ, ಎಲ್ಲಿ ನಿಜವಾಗಿ ದೀಪಗಳ ಅವಶ್ಯಕತೆ ಇದೆಯೋ ಅಂತಹ ಊರುಗಳಲ್ಲಿರುವ ಮುಖಂಡರನ್ನು ಸ್ಥಳದ ಜನರನ್ನು ತಿಳಿದುಕೊಂಡು ಆ ಊರುಗಳಿಗೆ ದೀಪಗಳನ್ನು ಒದಗಿಸಿಕೊಡಬೇಕು. ಇದರ ಬಗ್ಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ಕೇಳಿದರೆ ಅವರು ಸರಿಯಾದ ಊರುಗಳ ಹೆಸರುಗಳನ್ನು ಕೊಡುತ್ತಿದ್ದರು, ಇಲ್ಲವೇ ಆಯಾ ಕ್ಷೇತ್ರದಲ್ಲಿರುವ ವಿಧಾನಸಭೆಯ ಸದಸ್ಯರನ್ನು ಕೇಳಿದ್ದರೂ ಇಂತಹ ಊರುಗಳ ಹೆಸರುಗಳು ಸರಿಯಾಗಿ ತಿಳಿಯುತ್ತಿತ್ತು. ಇನ್ನು ಮುಂದೆ ಸರಿಯಾದ ಗ್ರಾಮಗಳ ಹೆಸರನ್ನು ತಿಳಿದುಕೊಂಡು ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂ ಬೇಗನೆ ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಅನೇಕ ಕಡೆ ದೀಪದ ಕನೆಕ್ಷನ್ ಗಳನ್ನು ಕೊಟ್ಟಿದ್ದರೂ ಇನ್ನೂ ಅವರಿಗೆ ಸರ್ವಿಸ್ ಕೊಟ್ಟಿಲ್ಲ, ಅನೇಕ ಕಡೆ ಪಂಚಾಯತಿಯವರು ಅವರ ಪಾಲಿನ ವಂತಿಗೆಯನ್ನು ಕೊಡಲು ಅವರಿಗೆ ಶಕ್ತಿ ಇಲ್ಲದಿರುವುದರಿಂದಾಗಿ ಇಂತಹ ಕಡೆಗಳಲ್ಲಿ ಇನ್ನೂ ಪೂರ್ತಿ ಸರ್ವಿಸ್ ಕೊಡಲಾಗಲಿಲ್ಲ, ಪಂಚಾಯತಿಯಲ್ಲಿ ಹಣವಿಲ್ಲದಿರುವುದರಿಂದ ಇದಕ್ಕೆ ಬೇರೆ ಯಾವ ಮಾರ್ಗದಿಂದಲಾದರೂ ಸಹಾಯ ಮಾಡಿ ಹಳ್ಳಿಗಳಿಗೆ ದೀಪದ ಸೌಕರ್ಯ ಆಗುವಂತೆ ಮಾಡಿ ಕೊಡಬೇಕು. ಪಂಚಾಯಿತಿಯವರ ಹತ್ತಿರ ಇನಿಷಿಯಲ್ ಡಿಪಾಜಿಟ್ ಕಟ್ಟಲು ಹಣ ಇಲ್ಲದಿರುವುದರಿಂದ, ದೀಪಗಳನ್ನು ಹಾಕಿದ್ದರೂ ಸಹ ವಿದ್ಯುಚ್ಛಕ್ತಿ ಇಲಾಖೆಯವರು ಕರೆಂಟ್ ಕೊಟ್ಟಿಲ್ಲ. ಇದರ ಬಗ್ಗೆ ಸರ್ಕಾರದವರು ಒಂದು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ರೂರಲ್ ಎಲೆಕ್ಟ್ರಿಫಿಕೇಷನ್‌ನವರು ಕೆಲವು ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದಾರೆ. 7–8 ತಿಂಗಳ ಕೆಳಗೆ ನಮ್ಮ ಕಡೆ ಸರ್ವೆ ಕೂಡ ಆಯಿತು. ಆ ಕಾರ್ಪೊರೇಷನ್‌ನವರು ನಮಗೆಲ್ಲಾ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಹೇಳಿ ಹೋದರು. ಆದರೆ ಇಲ್ಲಿಯವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಅಲ್ಲಿರತಕ್ಕಂಥ ಅಧಿಕಾರಿಗಳನ್ನು ಕೇಳಿದರೆ, ಆ ಸ್ಕೀಮ್‌ಗಳು ದೆಹಲಿಗೆ ಹೋಗಿವೆ, ಇನ್ನೂ ಮಂಜೂರಾಗಿ ಬಂದಿಲ್ಲ ಎಂದು ಹೇಳುತ್ತಾರೆ. ಹಳ್ಳಿಯಲ್ಲಿರುವ ರೈತರು ಅದನ್ನು ಕಾದು ಕುಳಿತರೆ ಕೆಲಸ ಜಾಗ್ರತೆಯಾಗುವುದಿಲ್ಲ. ಸರ್ಕಾರದವರೇ ಮುಂದೆ ನಿಂತು ಶೀಘ್ರವಾಗಿ ಆ ಕೆಲಸಗಳು ಕಾರ್ಯಗತವಾಗುವಂತೆ ಮಾಡಬೇಕೆಂದು ಸೂಚಿಸ ಬಯಸುತ್ತೇನೆ.

ಇನ್ನು ನಮ್ಮ ಕೋಲಾರ ಜಿಲ್ಲೆಯ ವಿಷಯ ಹೇಳಬೇಕೆಂದರೆ, ಅಲ್ಲಿ ದೊಡ್ಡ ದೊಡ್ಡ ನದಿಗಳಾಗಲೀ, ಜೀವ ನದಿಗಳಾಗಲೀ ಇಲ್ಲ. ಈಗ ಬೆಂಗಳೂರಿಗೆ ಕಾವೇರಿ ನದಿಯ ನೀರನ್ನು ತರುವುದಕ್ಕೆ ಹೊರಟಿದ್ದಾರೆ. ಇಷ್ಟರಲ್ಲಿ ಅದು ಕಾರ್ಯಗತವಾಗುತ್ತದೆ. ಬೆಂಗಳೂರು ನಗರ 3000 ಅಡಿಗಳ ಎತ್ತರದಲ್ಲಿ ಇದೆ. ಆದರೆ ನಮ್ಮ ಕೋಲಾರ ಕೇವಲ 2700 ಅಡಿಗಳ ಎತ್ತರದಲ್ಲಿದೆ. ಈ ಕಾರಣದಿಂದ ಬೆಂಗಳೂರಿನಿಂದ ಕೋಲಾರಕ್ಕೆ ಕಾವೇರಿನದಿಯ ನೀರನ್ನು ಸುಲಭವಾಗಿ ಹರಿಸಬಹುದು. ಈ ಕಾರಣದಿಂದ ಅಲ್ಲಿಯ ಬರಗಾಲ ಪರಿಸ್ಥಿತಿಯನ್ನು ಹೋಗಲಾಡಿಸುವ ಸಲುವಾಗಿ ಕಾವೇರಿ ನದಿಯ ನೀರನ್ನು ಕೋಲಾರ ಜಿಲ್ಲೆಗೂ ಕೊಡುವುದಕ್ಕೆ ಸರ್ಕಾರದವರು ತೀವ್ರಗತಿಯಲ್ಲಿ ಪ್ರಯತ್ನ ಮಾಡಬೇಕೆಂದು ಸೂಚಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಮಾತನಾಡಲು ಬಯಸುತ್ತೇನೆ. ಮೊದಲನೆಯದಾಗಿ ಈ ಇಲಾಖೆಯಲ್ಲಿ ಕೆಲಸ ಮಾಡುವ ಇಂಜಿನಿಯರ್‌ಗಳಲ್ಲಿ ರಾಷ್ಟ್ರೀಯತೆ ಇಲ್ಲವಾಗಿದೆ. ಪ್ರಾಮಾಣಿಕತೆ ಕಡಿಮೆಯಾಗುತ್ತಿದೆ, ಆದಕ್ಕಾಗಿ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದೇನೆಂದರೆ, ವರ್ಷಕ್ಕೆ ಮೂರು ದಿವಸಗಳಾದರೂ ಈ ಬಗ್ಗೆ ಟ್ರೈನಿಂಗ್ ಕೊಟ್ಟರೆ ಅವರಲ್ಲಿ ರಾಷ್ಟ್ರೀಯತೆ ಬೆಳೆದು ಬರಬಹುದು ಮತ್ತು ಪ್ರಾಮಾಣಿಕತನದಿಂದ ಮತ್ತು ಸತ್ಯದಿಂದ ನಡೆದುಕೊಳ್ಳಬಹುದೆಂದು ಕಾಣುತ್ತದೆ. ಮುಖ್ಯವಾಗಿ ಇಂಜಿನಿಯರ್‌ಗಳು ರಾಷ್ಟ್ರದ್ರೋಹವನ್ನು ಎಸಗಬಾರದೆಂದು ಕೇಳಿಕೊಳ್ಳುತ್ತೇನೆ, ಇಂದು ಈ ಇಲಾಖೆಯಲ್ಲಿ

(ಶ್ರೀ ಎನ್. ಎಸ್. ಗುರುಸಿದ್ಧಪ್ಪ)

ಲಂಚವನ್ನು ತೆಗೆದುಕೊಳ್ಳುವ ಬಗ್ಗೆ ಇಂತಿಂಥವರಿಗೆ ಇಷ್ಟಿಷ್ಟು ಎಂದು ಪರ್ಸೆಂಟೇಜನ್ನು ಫಿಕ್ಸ್ ಮಾಡಿಬಿಟ್ಟಿದ್ದಾರೆ. ಯಾವ ಇಲಾಖೆಯಲ್ಲಿಯೂ ಈ ರೀತಿ ಫಿಕ್ಸ್ ಮಾಡಿಲ್ಲ. ಆದರೆ ಈ ಇಲಾಖೆಯಲ್ಲಿ ಮಾತ್ರ 5 ರಿಂದ 15 ಪರ್ಸೆಂಟ್‌ವರೆಗೆ ಫಿಕ್ಸ್ ಮಾಡಿದ್ದಾರೆ. ಈ ಲಂಚದ ಕಾರಣದಿಂದ ನಮ್ಮ ಎಲ್ಲ ಯೋಜನೆಗಳು ಸಹ ತಲೆಕೆಳಗಾಗುತ್ತಿವೆ. ಇಂದಿಗೂ ಈ ಇಲಾಖೆಯಲ್ಲಿ ಸತ್ಯಸಂಧ ಅಧಿಕಾರಿಗಳು ಇದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಇಂತಹ ಅಧಿಕಾರಿಗಳು ಇದ್ದಿದ್ದರಿಂದಲೇ ವಿಧಾನಸೌಧದಂತಹ ಕಟ್ಟಡವನ್ನು ಮತ್ತು ಕೆ.ಆರ್.ಎಸ್. ನಂತಹ ಡ್ಯಾಮ್‌ನ್ನು ಕಟ್ಟಿಸುವುದಕ್ಕೆ ಸಾಧ್ಯವಾಯಿತು. ಹಿಂದೆಲ್ಲಾ ಅನೇಕ ಜನ ಇಂಜಿನಿಯರ್‌ಗಳು ತಮ್ಮ ಬೆವರು ಸುರಿಸಿ ಕೆಲಸ ಮಾಡುವುದರ ಮೂಲಕ ಲೋಕಸೇವೆಯನ್ನು ಮಾಡಿರುವುದಕ್ಕೆ ಸಾಕ್ಷಿಗಳು ಇವೆ. ಆದರೆ ಇಂದು ಸಾಮಾನ್ಯವಾಗಿ ನೋಡುವುದಾದರೆ, ಹೆಚ್ಚಾಗಿ ಲಂಚಕೋರರೇ ಜಾಸ್ತಿಯಾಗಿದ್ದಾರೆ. ಇದರಿಂದ ನಮ್ಮ ಯೋಜನೆಗಳೆಲ್ಲಾ ತಲೆಕೆಳಗಾಗುತ್ತಿವೆ.

ರಸ್ತೆಗಳ ವಿಷಯ ಹೇಳಬೇಕೆಂದರೆ, ನಮ್ಮಲ್ಲಿ ಮಂತ್ರಿಗಳ ರಸ್ತೆ, ಜನ ಸಾಮಾನ್ಯರ ರಸ್ತೆ ಎಂದು ಎರಡು ತರಹ ರಸ್ತೆಗಳಿವೆ. ಮಂತ್ರಿಗಳು ಓಡಾಡುವ ಕಡೆಗಳಲ್ಲಿ ರಸ್ತೆಗಳು ಚೆನ್ನಾಗಿರುತ್ತವೆ. ಆದರೆ ಜನ ಸಾಮಾನ್ಯರು ಓಡಾಡುವ ಕಡೆಗಳಲ್ಲಿ ಚೆನ್ನಾಗಿರುವುದಿಲ್ಲ. ಇದನ್ನು ಮಂತ್ರಿಗಳು ನೋಡಬೇಕಾದರೆ ತಾವು ಪ್ರವಾಸ ಹೋಗುವ ಕಾಲದಲ್ಲಿ ಇಂತಹ ರಸ್ತೆಗಳ ಮೂಲಕವೇ ಹೋಗುತ್ತೇವೆಂದು ಮುಂಚೆಯೇ ತಿಳಿಸದೆ, ಮಾಮೂಲು ರಸ್ತೆಗಳು ಬಿಟ್ಟು ಬೇರೆ ರಸ್ತೆಗಳಲ್ಲಿ ಸಂಚಾರಮಾಡಿದ್ದೇ ಆದರೆ ಹಳ್ಳಿಗಾಡಿನ ರಸ್ತೆಗಳು ಯಾವ ರೀತಿ ಇವೆ ಎಂಬುದು ಗೊತ್ತಾಗುತ್ತದೆ. ಮಂತ್ರಿಗಳು ಇಂಟೀರಿಯರ್ ರಸ್ತೆಗಳಲ್ಲಿ ಸಂಚಾರ ಮಾಡಿ ಜನಸಾಮಾನ್ಯರ ಕಷ್ಟಸುಖಗಳನ್ನು ತಿಳಿದುಕೊಳ್ಳಬೇಕಲ್ಲದೆ, ಕೇವಲ ಹೊಗಳುಭಟ್ಟರು ಇರುವ ಕಡೆಗಳಿಗೆ ಹೋಗಿ ಬಂದರೆ ಜನರ ಕಷ್ಟಸುಖಗಳು ಗೊತ್ತಾಗುವುದಿಲ್ಲ. ಇಂದು ಎಷ್ಟೋ ಜನರಿಗೆ ಲೋಕೋಪಯೋಗಿ ಮಂತ್ರಿಗಳು ಯಾರು ಎಂಬುದು ಗೊತ್ತಿಲ್ಲ. ಇಂತಹ ಕಡೆಗಳಿಗೆ ಮಂತ್ರಿಗಳು ಪ್ರವಾಸ ಹೋಗಿ ಜನರ ಕಷ್ಟಸುಖ ವಿಚಾರಿಸಬೇಕು. ರಸ್ತೆಗಳ ಸ್ಥಿತಿಯನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಕಂಟ್ರಾಕ್ಟರ್‌ಗಳು ಸಹ ಅನೇಕ ರೀತಿಯಿಂದ ಮೋಸಮಾಡಿ, ಇಂದು ರಸ್ತೆಗಳಲ್ಲಿ ಎತ್ತಿನಗಾಡಿಗಳು ಸಹ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ನನ್ನ ಕ್ಷೇತ್ರದ ರಸ್ತೆಗಳ ಬಗ್ಗೆ ವಿವರಿಸಬೇಕೆಂದರೆ, ಅದು ದೇವರಿಗೇ ಪ್ರೀತಿ. ಕಾಲುವೆ ಏರಿ ಮೇಲೆ ಮಣ್ಣು ಹಾಕಿಸುತ್ತಾರೆ. ಮಳೆಗಾಲ ಬಂತು ಎಂದರೆ ಮಣ್ಣು ಎಲ್ಲ ಸ್ಕಿಡ್ ಆಗಿ ಅನೇಕ ಕಾರುಗಳು ಕೆರೆಗಳಿಗೆ ಬಿದ್ದ ಪ್ರಸಂಗಗಳೂ ಇವೆ. ಯಾವ ರಸ್ತೆಗಳ ರಿಪೇರಿಯನ್ನೂ ಮಾಡಿಸಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ನೀವು ಆಡಳಿತ ಕಾಂಗ್ರೆಸ್‌ಗೆ ಸೇರಿಬಿಡಿ. ಎಲ್ಲ ರಸ್ತೆಗಳನ್ನು ರಿಪೇರಿ ಮಾಡಿಸಿಕೊಡುತ್ತಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಮಾನ್ಯ ಮಂತ್ರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುವವರಾಗಿದ್ದಾರೆ. ಆದರೆ ಅವರ ಒಂದು ದಕ್ಷತೆ ನನ್ನ ಕ್ಷೇತ್ರಕ್ಕೆ ಇನ್ನೂ ಬಂದಿಲ್ಲ. ನನ್ನ ಕ್ಷೇತ್ರದಲ್ಲಿ ಯಾವ ಸೇತುವೆಗಳ ಕೆಲಸವೂ ಆಗಿಲ್ಲ. ಮಳೆಗಾಲ ಬಂತು ಎಂದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುವುದಕ್ಕಾಗುವುದಿಲ್ಲ. ಅಷ್ಟೊಂದು ನೀರು ನಿಂತು ಬಿಡುತ್ತದೆ. ಮಳೆ ಬಂದಾಗ ಜನರು ಏನಾದರು ಜಮೀನುಗಳಲ್ಲಿ ಇದ್ದರೆ, ಅವರು ಎರಡು ಮೂರು ದಿವಸಗಳವರೆಗೆ ಮನೆಗೆ ಬರುವುದಕ್ಕಾಗುವುದಿಲ್ಲ. ಅಷ್ಟೊಂದು ನೀರು ಜಮೀನುಗಳಲ್ಲಿ ನಿಂತು ಬಿಡುತ್ತದೆ. ಮಹಿಳೆಯರು ಆ ಕಾಲದಲ್ಲಿ ತಮ್ಮ ಮಾನ ರಕ್ಷಣೆಮಾಡಿ ಎಂದು ಕೂಗಿಕೊಳ್ಳುತ್ತಿರುತ್ತಾರೆ. ಈ ಎಲ್ಲ ಕಾರಣಗಳಿಂದ ಸರಿಯಾದಂಥ ರಸ್ತೆಗಳನ್ನು ಮತ್ತು ಸೇತುವೆಗಳನ್ನು ನಮ್ಮ ಭಾಗದಲ್ಲಿ ಮಾಡಿಸಿಕೊಡಬೇಕೆಂದು ಅನೇಕ ಮನವಿ ಪತ್ರಗಳನ್ನು ಸಲ್ಲಿಸಿದಾಗ್ಯೂ ಕೂಡ ಯಾವ ಪ್ರಯೋಜನವೂ ಆಗಿಲ್ಲ. ಇನ್ನು ಮುಂದಾದರೂ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಭಾಗದಲ್ಲಿ ಕಬಿನಿ ನದಿ ಹರಿಯುತ್ತದೆ. ಈ ಕಾರಣದಿಂದ ಎರಡು ಲಿಫ್ಟ್ ಇರಿಗೇಷನ್‌ಗಳನ್ನು ಹಾಕಿಕೊಟ್ಟರೆ ಸುಮಾರು 14 ಲಕ್ಷ ಎಕರೆಗೆ ಅನುಕೂಲವಾಗುತ್ತದೆ. ಆದರೆ ಇದು ಸರ್ಕಾರದವರ ಕೈಯಲ್ಲಿ ಆಗುತ್ತಿಲ್ಲ. ರೈತರಿಗೆ ಬೇಕಾದ ಬೀಜ, ಗೊಬ್ಬರ ಮತ್ತು ನೀರನ್ನು ಒದಗಿಸಿಕೊಟ್ಟಿದ್ದೇ ಆದರೆ ನಮ್ಮ ರೈತರು ಯಥೇಚ್ಛವಾಗಿ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ. ಆದರೆ ಸರ್ಕಾರದವರು ಇದರ ಕಡೆಗೆ ಲಕ್ಷ ಕೊಡದಿರುವುದರಿಂದ ಸುಮಾರು 14 ಲಕ್ಷ ಎಕರೆ ಜಮೀನು ಇಂದು ಹಾಳಬಿದ್ದಿದೆ. ಕಾಲುವೆಗಳ ರಿಪೇರಿ ಕೆಲಸವನ್ನು ಯಾವಾಗಲೂ

ಏಪ್ರಿಲ್ ಅಥವಾ ಮೇ ತಿಂಗಳುಗಳಲ್ಲಿ ಮಾಡಿಸಬೇಕು. ಆದರೆ ಯಾವಾಗಲೂ ಕಾಲುವೆಗೆ ನೀರು ಬಿಡುವ ಸಮಯದಲ್ಲಿ ಮಾಡಿಸುವುದಕ್ಕೆ ಪ್ರಾರಂಭಮಾಡುತ್ತಾರೆ. ಇದರಿಂದ ನೀರು ಬಿಡುವುದು ನಿಧಾನವಾಗಿ ರೈತರು ಜುಲೈ ತಿಂಗಳಲ್ಲಿ ನಾಟಿಹಾಕಬೇಕಾದ ಸಂದರ್ಭ ಬಂದಿದೆ. ಈ ರೀತಿ ನಿಧಾನವಾಗಿ ನಾಟಿ ಹಾಕುವುದರಿಂದ ಎಕರೆಗೆ 2-3 ಫಲ್ಲದಷ್ಟು ಭತ್ತದ ಬೆಳೆ ಕಡಿಮೆಯಾಗುತ್ತಿದೆ. ಈ ರೀತಿ ತೊಂದರೆಯಾಗುವುದನ್ನು ತಪ್ಪಿಸಬೇಕು. ಮುಖ್ಯವಾಗಿ ಬೇಸಿಗೆಯಲ್ಲಿ ರಾಗಿ ಮತ್ತು ಕಡಲೆಯನ್ನು ಬೆಳೆಯುವುದಕ್ಕೆ ನೀರಿನ ಅನುಕೂಲವನ್ನು ಕಲ್ಪಿಸಿಕೊಡಬೇಕು. ರೈತರು ಬೆಳೆ ಬೆಳೆಯುವುದಕ್ಕೆ ಇಂದು ಉತ್ಸುಕರಾಗಿದ್ದಾರೆ. ಆದರೆ ಸರ್ಕಾರದವರೆ ಸರಿಯಾದ ಪ್ರೋತ್ಸಾಹ ಕೊಡುತ್ತಿಲ್ಲ. ಇದನ್ನು ಮಾನ್ಯ ಮಂತ್ರಿಗಳು ತಮ್ಮ ಮನಸ್ಸಿಗೆ ಹಾಕಿಕೊಳ್ಳಬೇಕು. ಇಂದು ಇಂಜಿನಿಯರ್‌ಗಳು ಸೈಕಲಾಜಿಸ್ಟ್ ಆಗಿದ್ದಾರೆಂದು ಹೇಳಬಹುದು. ಅವರುಗಳು ರಾಜಕಾರಣಿಗಳ ಮನಸ್ಸನ್ನು ತಿಳಿದುಕೊಂಡು ಅದರಂತೆ ಕೆಲಸ ಮಾಡುತ್ತಿದ್ದಾರೆ. ನೀರಿನ ಅನುಕೂಲ ಸರಿಯಾಗಿ ಇಲ್ಲದಿರುವ ಕಡೆಗಳಲ್ಲಿಯೂ ಕಟ್ಟೆಗಳನ್ನು ಕಟ್ಟಿಸಿಬಿಟ್ಟಿದ್ದಾರೆ. ಇದರಿಂದ ನಮ್ಮ ಯೋಜನೆಗಳೆಲ್ಲಾ ತಲೆಕೆಳಗಾಗುತ್ತಿವೆ. ಆಯಿರಹಳ್ಳಿಯ ಹತ್ತಿರ ಒಂದೂಕಾಲು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಟ್ಟೆಯನ್ನು ಕಟ್ಟಿಸಿದ್ದಾರೆ. ಅದರಿಂದ ಎರಡು ಎಕರೆಗೂ ಸಹ ನೀರಾವರಿಯಾಗುತ್ತಿಲ್ಲ. ಅದೇ ರೀತಿ ಇನ್ನೊಂದು ಕಡೆ 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಟ್ಟೆ ಕಟ್ಟಿಸಿದ್ದಾರೆ. ಅದರಿಂದ ಅರ್ಧ ಎಕರೆಗೂ ಸಹ ನೀರಾವರಿಯಾಗುತ್ತಿಲ್ಲ. ರಾಜಕಾರಣಿಗಳನ್ನು ಮೆಚ್ಚಿಸುವುದಕ್ಕೆ ಈ ರೀತಿ ನೀರು ಇಲ್ಲದಿರುವ ಕಡೆ ಕಟ್ಟೆಗಳನ್ನು ಕಟ್ಟಿಸಿದರೆ ಅದರಿಂದ ದೇಶದ ಜನರ ಕಲ್ಯಾಣವಾಗುತ್ತದೆಯೇ ಎಂದು ಕೇಳುತ್ತೇನೆ. ಇನ್ನು ಮುಂದೆ ಈ ರೀತಿಯಾಗುವುದಕ್ಕೆ ಮಾನ್ಯ ಮಂತ್ರಿಗಳು ಅವಕಾಶ ಕೊಡಬಾರದು.

ಇನ್ನು ರೂರಲ್ ಎಲೆಕ್ಟ್ರಿಫಿಕೇಷನ್ ಬಗ್ಗೆ ಹೇಳಬೇಕೆಂದರೆ, ಇದರಲ್ಲಿಯೂ ಸಹ ರಾಜಕೀಯ ನಡೆಯುತ್ತಿದೆ. ಎರಡು ಸಾವಿರ ಮನೆಗಳು ಇರುವ ಕಡೆ ವಿದ್ಯುಚ್ಛಕ್ತಿ ಕೊಡುತ್ತಿಲ್ಲ, ಆದರೆ ನಾಲ್ಕು ಮನೆಗಳು ಇರುವ ಕಡೆ ಕೊಡುತ್ತಿದ್ದಾರೆ. ನನ್ನ ಕ್ಷೇತ್ರದ ಹೆಸರು ಬಿಳಿಗೆರೆ. ಅಲ್ಲಿಯೂ ಸಹ ವಿದ್ಯುಚ್ಛಕ್ತಿಯನ್ನು ಕೊಟ್ಟಿಲ್ಲ. ಜನರು ಕೇಳುತ್ತಿದ್ದರೂ ಸಹ ಕೊಟ್ಟಿಲ್ಲ. ಈ ಸಾಲಿನಲ್ಲಿ ನಮ್ಮ ಕ್ಷೇತ್ರದಿಂದ ಒಂದು ಊರನ್ನು ಮಾತ್ರ ಈ ಯೋಜನೆಯಲ್ಲಿ ಸೇರಿಸಿದ್ದಾರೆಂದು ಕೇಳಿದ್ದೇನೆ. ಒಂದನ್ನಾದರೂ ಸಹ ಏತಕ್ಕೆ ಸೇರಿಸಬೇಕಾಗಿತ್ತು ಎಂದು ಕೇಳುತ್ತೇನೆ. 2-3 ಸಾವಿರ ಜನರು ಇರುವ ಕಡೆಯೂ ಸಹ ವಿದ್ಯುಚ್ಛಕ್ತಿಯನ್ನು ಕೊಡದಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ನಮ್ಮ ಭಾಗದಲ್ಲಿ ರಿಲೀಫ್ ವರ್ಕ್ಸ್ ಎಂದು ಮಾಡಿಸಿದ್ದಾರೆ. ಇದಕ್ಕಾಗಿ ಸರ್ಕಾರದವರು ದೊಡ್ಡ ಮನಸ್ಸುಮಾಡಿ ಒಂದು ಲಕ್ಷ 70 ಸಾವಿರ ರೂಪಾಯಿಗಳನ್ನು ಒದಗಿಸಿದ್ದಾರೆ. ರಿಲೀಫ್ ವರ್ಕ್ಸ್ ಎಂದರೆ ರಸ್ತೆಯ ಮೇಲೆ ಮಣ್ಣು ಹಾಕಿಸುವುದು ಮಳೆಗಾಲ ಬಂತು ಎಂದರೆ ರಸ್ತೆಗಳಲ್ಲಿ ಓಡಾಡುವುದಕ್ಕಾಗುವುದಿಲ್ಲ. ನಂದಿಗುರುಪುರದ ಹತ್ತಿರ ಒಂದು ಕಲ್ವರ್ಟ ಕಟ್ಟಿಸಿದ್ದಾರೆ. ಅದನ್ನು ಕಟ್ಟಿಸಿದ ಮೇಲೆ ಎತ್ತಿನ ಗಾಡಿಗಳು ಸಹ ಓಡಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ರಸ್ತೆಗಳ ರಿಪೇರಿ ಕೆಲಸವನ್ನು ಸರಿಯಾಗಿ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎಂ.ಎಸ್.ಇ.ಬಿ. ವಿಚಾರ ಹೇಳಬೇಕೆಂದರೆ, ಒಂದು ಲಕ್ಷದ 90 ಸಾವಿರ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಸಪ್ಲೈ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಪಂಪ್‌ಸೆಟ್ಟುಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಹೋಗಿ ನೋಡುತ್ತಿಲ್ಲ. ಒಂದೊಂದು ಸಲ ಓಲ್ಟೇಜ್ ಜಾಸ್ತಿಯಾಗಿ ಮೋಟಾರ್‌ಗಳು ಸುಟ್ಟುಹೋಗುತ್ತಿವೆ. ಮತ್ತೆ ಕೆಲವು ಸಲ 5-6 ಪಂಪ್‌ಸೆಟ್ಟುಗಳು ಏಕ ಕಾಲದಲ್ಲಿ ಸ್ಟಾರ್ಟ್ ಆದರೆ ಓಲ್ಟೇಜ್ ಜಾಸ್ತಿ ಇಲ್ಲದೆ ಸರಿಯಾಗಿ ಪಂಪ್‌ಸೆಟ್ಟುಗಳು ಕೆಲಸವನ್ನೇ ಮಾಡುವುದಿಲ್ಲ. ಇಂದು ಐ.ಪಿ. ಸೆಟ್ಟುಗಳು ಏನೋ ಜಾಸ್ತಿಯಾಗಿವೆ. ಆದರೆ ಯಾವ ಪಂಪ್‌ಸೆಟ್ಟುಗಳಿಗೂ ಸಹ ಇಂದು ಸರಿಯಾಗಿ ಕರೆಂಟ್ ಸಪ್ಲೈಯಾಗುತ್ತಿಲ್ಲ. ನಂದಿ ಗುಂಡಪುರದಲ್ಲಿ ವೋಲ್ಟೇಜ್ ಡ್ರಾಪ್ ಆಗಿದೆ. ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗಿದೆ. ಎಂದು ಕಂಪ್ಲೇಂಟ್‌ಬಂದಿದೆ. ಇದನ್ನು ಸರ್ಕಾರದವರು ಗಮನವಿಟ್ಟು ಸರಿಪಡಿಸಬೇಕು. ನನ್ನ ಕ್ಷೇತ್ರದಲ್ಲಿ ಒಂದು ಕಡೆ ನ್ಯಾಷನಲ್ ಹೈವೇನಲ್ಲಿ ಜಮೀನನ್ನು ಒತ್ತುವರಿ ಮಾಡಿದ್ದಾರೆ. ಆ ಬಗ್ಗೆ ಪರಿಹಾರವನ್ನು ಒದಗಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಮನವಿ ಪತ್ರವನ್ನು ಕೊಟ್ಟಿದೆ. ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಬಹಳ ದಕ್ಷರು ಎಂದು ಹೇಳುತ್ತಾರೆ. ಆದರೆ ಆ ಬಗ್ಗೆ ಇನ್ನೂ ಪರಿಹಾರ ದೊರಕಿಲ್ಲ. ಏತಕ್ಕೆ ಉದಾಶೀನ ಮಾಡಿದ್ದಾರೋ ನನಗೆ ಅರ್ಥವಾಗುವುದಿಲ್ಲ.

(ಎನ್. ಎಸ್. ಗುರುಸಿದ್ದಪ್ಪ)

5-00 P.M.

ಇನ್ನು ಕಡೆಯದಾಗಿ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ರಸ್ತೆಗಳು ಬಹಳ ಅವ್ಯವಸ್ಥೆಯಾಗಿವೆ. ಅವುಗಳ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಬೇಕು. ಈಗಾಗಲೇ ನಾನು ಹೇಳಿದ ಹಾಗೆ ನಮ್ಮ ಕ್ಷೇತ್ರದಲ್ಲಿ ಲಿಫ್ಟ್ ಇರಿಗೇಷನ್ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಲಿಫ್ಟ್ ಇರಿಗೇಷನ್ನಿಗೆ ಪಂಪುಸೆಟ್ಟುಗಳನ್ನು ಹಾಕಿಸಿಕೊಟ್ಟು ಬೇಸಿಗೆ ಬೆಳೆ ಬೆಳೆಯುವುದಕ್ಕೆ ಸಹಾಯ ಮಾಡ ಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಮಾನ್ಯ ಸಭಾಧ್ಯಕ್ಷರೆ, ಈ ಸದನದ ಮುಂದೆ ನಮ್ಮ ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿ ಪ್ರತಿ ವರ್ಷ ಮಳೆಬಾರದೆ ಬಹಳ ತೊಂದರೆಯಾಗಿದೆ. ಅಲ್ಲಿ ವರ್ಷಕ್ಕೆ 15-16 ಇಂಚು ಮಳೆ ಬೀಳುತ್ತದೆ. ಆ ಒಂದು ಪ್ರದೇಶಕ್ಕೆ ಯಾವ ಒಂದು ಪೆರೆನಿಯಲ್ ಇರಿಗೇಷನ್ ಆಗಲೀ, ದೊಡ್ಡ ಕೆರೆಗಳ ನಿರ್ಮಾಣಕ್ಕಾಗಲೀ ಅವಕಾಶ ಇಲ್ಲ. ಹಿರಿಯೂರು ತಾಲ್ಲೂಕಿನಲ್ಲಿ ವಾಣಿವಿಲಾಸ ಸಾಗರವನ್ನು ಕಟ್ಟಿರುವುದರಿಂದ ಹೊಸದುರ್ಗ ತಾಲ್ಲೂಕಿನಲ್ಲಿ ಸಣ್ಣಪುಟ್ಟ ಕೆರೆಗಳನ್ನು ಕಟ್ಟುವುದಕ್ಕೆ ಅಗ್ರಿಮೆಂಟ್ ಪ್ರಕಾರ ಅವಕಾಶ ಇಲ್ಲ. ಆದರೆ ಈಗ ಅಲ್ಲಿ ಹಾಲಿ ಇರತಕ್ಕ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಜಾಗ್ರತೆ ಅಲ್ಲಿ ಈಗ ಹಾಲಿ ಇರತಕ್ಕ ಕೆರೆಗಳನ್ನು ರಿಪೇರಿ ಮಾಡಿಸಿಕೊಟ್ಟು ರೈತರಿಗೆ ಸಣ್ಣ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಈ ತಾಲ್ಲೂಕು ಪ್ರತಿ ವರ್ಷವೂ ಕೂಡ ಬರಗಾಲಕ್ಕೆ ತುತ್ತಾಗಿ ಮಳೆಬಾರದೆ ಬಹಳ ತೊಂದರೆ ಯುಂಟಾಗುತ್ತಿದೆ. ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಮತ್ತು ತುಮಕೂರು ಜಿಲ್ಲೆ ಈ ಪ್ರದೇಶಗಳಿಗೆ ಅನುಕೂಲವಾಗುವಂತೆ ಅಪ್ಪರ್ ಭದ್ರಾ ಪ್ರಾಜೆಕ್ಟ್ ನಿರ್ಮಾಣ ಮಾಡಿಕೊಡ ಬೇಕೆಂದು ನಾವು ಅನೇಕ ಸಾರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಆದರೆ ಸರ್ಕಾರದವರು ಇದು ವರೆಗೂ ಕೂಡ ಅದನ್ನು ಕಾರ್ಯಗತ ಮಾಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ತುಮಕೂರು ಜಿಲ್ಲೆಯ ಸಿರ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಮೊಳಕಾಲ್ಮೂರು, ಹೊಸದುರ್ಗ, ಚಳ್ಳಕೆರೆ, ಜಗಳೂರು ಮುಂತಾದ ಪ್ರದೇಶಗಳಲ್ಲಿ ಸಾಧಾರಣವಾಗಿ ಮಳೆ ಬೀಳುವುದಿಲ್ಲ. ಆದ್ದರಿಂದ ಆ ಪ್ರದೇಶದಲ್ಲಿ ಪ್ರತಿ ವರ್ಷವೂ ಬರಗಾಲ ಬರುತ್ತಿರುತ್ತದೆ. ಆದ್ದರಿಂದ ಸರ್ಕಾರದವರು ಅಲ್ಲಿ ರಿಲೀಫ್ ವರ್ಕ್ಸ್‌ಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದಕಾರಣ ಈ ಅಪ್ಪರ್ ಭದ್ರಾ ಯೋಜನೆಗೆ ಆ ಹಣ ವನ್ನು ವೆಚ್ಚಮಾಡಿದರೆ ಆ ಪ್ರದೇಶಕ್ಕೆ ಒಂದು ಖಾಯಂ ಆದ ಪರಿಹಾರವನ್ನು ಒದಗಿಸಿದ ಹಾಗಾಗು ತ್ತದೆ. ಆದ್ದರಿಂದ ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಲ್ಲಿ ಅಪ್ಪರ್ ಭದ್ರಾ ಪ್ರಾಜೆಕ್ಟ್ ಅನ್ನು ಕಾರ್ಯಗತಮಾಡಿಕೊಡಬೇಕು. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ಸಹಾಯ ಮಾಡಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹೊಸದುರ್ಗ ತಾಲ್ಲೂಕಿನಲ್ಲಿ ರಸ್ತೆಗಳ ವಿಷಯವನ್ನು ಹೇಳುವುದಾದರೆ ಅಲ್ಲಿ 200 ಮೈಲಿ ಗಳ ಹೊಸ ಸ್ಟೇಟ್ ಫಂಡ್ ರಸ್ತೆಯನ್ನು ಮಾಡಿಸಿದ್ದಾರೆ. ಆ ರಸ್ತೆಯಲ್ಲಿ ಸಂಚಾರ ಬಹಳ ಇದೆ. ಆದ್ದ ರಿಂದ ರಸ್ತೆಗಳು ಅಲ್ಲಿ ಬಹಳ ನಾದುರಸ್ತಾಗಿವೆ. ಆ ರಸ್ತೆಯ ರಿಪೇರಿಗಾಗಿ ಸರ್ಕಾರದವರು ಕಳೆದ ಒಂದು ವರ್ಷದಿಂದ ಯಾವ ಹಣವನ್ನೂ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ಅಲ್ಲರತಕ್ಕ 200ಮೈಲಿ ರಸ್ತೆಯಲ್ಲಿ ಕೊನೆಯ ಪಕ್ಷ 100 ಮೈಲಿ ರಸ್ತೆಯನ್ನಾದರೂ ರಿಪೇರಿ ಮಾಡಿಕೊಟ್ಟರೆ ಬಸ್ಸುಗಳ ಸಂಚಾರಕ್ಕೆ ಅನುಕೂಲವಾಗುತ್ತದೆ. ಇದರಿಂದ ಜನಗಳ ಪ್ರಯಾಣಕ್ಕೆ ಸೌಲಭ್ಯವನ್ನು ಒದಗಿಸಿಕೊಟ್ಟ ಹಾಗಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಆ ಕೆಲಸವನ್ನು ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. 200 ಮೈಲಿ ಸ್ಟೇಟ್ ಫಂಡ್ ರಸ್ತೆಯಲ್ಲಿ ಕಳೆದ 25 ವರ್ಷಗಳಿಂದ 50 ಮೈಲಿಗೂ ಕೂಡ ಟಾರ್ ರಸ್ತೆ ಮಾಡಿಸಿಲ್ಲ. ಕೇವಲ 30-40 ಮೈಲಿ ಮಾತ್ರ ಟಾರ್ ಮಾಡಿಸಿದ್ದಾರೆ. ಆದ್ದರಿಂದ ಸರ್ಕಾರದವರು ಇನ್ನು ಉಳಿದ ರಸ್ತೆಯನ್ನು ಟಾರ್ ಮಾಡಿಸಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹೊಸದುರ್ಗಾ ತಾಲ್ಲೂಕಿನಲ್ಲಿ ಐರನ್ ವೋರ್ ಕ್ಯಾರಿಯಿಂಗ್ ರಸ್ತೆ ಇದೆ. ಅದನ್ನು ಇಂಪ್ರೂವ್ ಮಾಡಬೇಕು. ಹೊಸದುರ್ಗಾ–ಮಂಗಳೂರು ನ್ಯಾಷನಲ್ ಹೈವೇ ರಸ್ತೆಮಾಡಬೇಕು. ಅದರಲ್ಲಿ

ಕಟ್ಟಿಣದ ಅದುರನ್ನು ಸಾಗಿಸುತ್ತಾರೆ. ಅದನ್ನು ರಿಪೇರಿ ಮಾಡಿಕೊಬೇಕೆಂದು ಅನೇಕ ಸಾರಿ ಮನವಿ ಮಾಡಿಕೊಂಡಿದ್ದೇವೆ. ಅದನ್ನು ಸರ್ಕಾರದವರು ಕಾರ್ಯಗತ ಮಾಡಿಲ್ಲ. ಕಳೆದ ವರ್ಷ ನಮ್ಮ ಹೊಸದುರ್ಗಾ ತಾಲ್ಲೂಕಿಗೆ ಒಂದು ಪಿ ಡಬ್ಲ್ಯು ಸಬ್ ಡಿವಿಜನ್ ಮಾಡಿಕೊಟ್ಟಿದ್ದಾರೆ. ಅದಕ್ಕೆ ನಾವು ಚಿರರುಣಿಗಳಾಗಿದ್ದೇವೆ. ನಮ್ಮ ತಾಲ್ಲೂಕು ಹಾಗೂ ತುಮಕೂರು ಜಿಲ್ಲೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ತೆಂಗಿನಕಾಯನ್ನು ಬೆಳೆಯುತ್ತಾರೆ. ಅಲ್ಲಿ ಮಳೆ ಬಂದಾಗ ತೆಂಗಿನ ತೋಟದಲ್ಲಿ ಮಣ್ಣೆಲ್ಲವೂ ಕೊಚ್ಚಿ ಹೋಗುತ್ತದೆ. ಆದ್ದರಿಂದ ಈ ಕೋಕನಟ್ ಏರಿಯಾದಲ್ಲಿ ಪಬ್ಲಿಕ್‌ವರ್ಕ್ಸ್ ಇಲಾಖೆಯಿಂದ ಪಿಕಪ್‌ಗಳನ್ನು ಹಾಕಿಕೊಟ್ಟು ಜಮೀನು ಕೊರೆಯದಂತೆ ಅನುಕೂಲ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಹೊಸದುರ್ಗಾ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೋಡುವುದಕ್ಕಾಗಲೀ ಕಟ್ಟಡಗಳನ್ನು ಕಟ್ಟುವುದಕ್ಕಾಗಲಿ ಯಾರೂ ಕಂಟ್ರಾಕ್ಟರುಗಳು ಮುಂದೆ ಬರಂತ್ತಿಲ್ಲ. ಏತಕ್ಕೆಂದರೆ ಸರ್ಕಾರದವರು ಈಗ ಅನೇಕ ವರ್ಷಗಳಿಂದ ಪಿ ಡಬ್ಲ್ಯು ಷೆಡ್ಯೂಲ್ ರೇಟನ್ನು ಹೆಚ್ಚಿಗೆ ಮಾಡುವುದಕ್ಕೆ ಹೋಗಿಲ್ಲ. ಆದ್ದರಿಂದ ಯಾವ ಕಂಟ್ರಾಕ್ಟರುಗಳೂ ಬಾವಿಗಳನ್ನು ತೋಡಿಸುವುದಕ್ಕಾಗಲೀ, ಕಟ್ಟಡವನ್ನು ಕಟ್ಟುವುದಕ್ಕಾಗಲೀ ಮುಂದೆ ಬರುತ್ತಿಲ್ಲ. ಆದ್ದರಿಂದ ಈ ಪಿ ಡಬ್ಲ್ಯು ಡಿ ಷೆಡ್ಯೂಲ್ ಆಫ್ ರೇಟನ್ನು ಜಾಸ್ತಿಮಾಡಿ ಆ ಕೆಲಸಗಳನ್ನು ಮಾಡಿಸುವುದಕ್ಕೆ ಕಂಟ್ರಾಕ್ಟರು ಮುಂದೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಷಯದಲ್ಲಿ ನಾನು ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಪದೇ ಪದೇ ನಿಂತು ಹೋಗುತ್ತದೆ. ಅಲ್ಲಿ ಒಂದು ಸ್ಟೆಪ್‌ಡೌನ್ ಸ್ಟೇಷನ್ ಮಾಡಿಸಿಕೊಡಬೇಕು. ಅಲ್ಲಿ ಒಂದು ಸ್ಟೆಪ್‌ಡೌನ್ ಸ್ಟೇಷನ್ ಮಾಡಿಸಿಕೊಡುವುದಕ್ಕೆ ಮಂಜೂರಾಗಿದೆ. ಆದರೆ ಅದು ಕಳೆದ ಎರಡು ವರ್ಷಗಳಿಂದ ಕಾರ್ಯಗತವಾಗಿಲ್ಲ. ಆದಷ್ಟು ಜಾಗ್ರತೆ ಇದನ್ನು ಮಾಡಿಸಿಕೊಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಅಲ್ಲಿ ಸ್ಟೆಪ್‌ಡೌನ್ ಸ್ಟೇಷನ್ ಕಟ್ಟಿ ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜಾಗುವ ಹಾಗೆ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ರೂರಲ್ ಎಲೆಕ್ಟ್ರಿಫಿಕೇಷನ್ ವಿಚಾರದಲ್ಲಿ ಸಂಬಂಧಪಟ್ಟ ತಾಲ್ಲೂಕಿನ ಶಾಸಕರೊಡನೆ ಸರ್ಕಾರದವರು ಕನ್‌ಸಲ್ಟ್ ಮಾಡಬೇಕು. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ನಮ್ಮ ಹೊಸದುರ್ಗ ತಾಲ್ಲೂಕಿನಲ್ಲಿರತಕ್ಕ 280 ಹಳ್ಳಿಗಳ ಪೈಕಿ ಕೇವಲ 40 ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಇನ್ನೂ 210 ಹಳ್ಳಿಗಳಿಗೆ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿದೆ. ಆ ಹಳ್ಳಿಗಳಿಗೆ ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈಗ ಜರೂರಾಗಿ 95 ಗ್ರಾಮಗಳಿಗೆ ವಿದ್ಯುಚ್ಛಕ್ತಿಯ ಅವಶ್ಯಕತೆ ಇದೆ. ಅವುಗಳಿಗೆ ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾವು ಸಂಬಂಧಪಟ್ಟ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದೇವೆ. ಆದ್ದರಿಂದ ಆ ಹಳ್ಳಿಗಳಿಗೆ ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಈ ಸಂದರ್ಭದಲ್ಲಿ ನನಗೆ 4 ಮಾತುಗಳನ್ನು ಹೇಳುವುದಕ್ಕೆ ಅವಕಾಶಮಾಡಿ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಫೋರ್ಟ್).—ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಮಗಾರಿ ಇಲಾಖೆಯ ಮಂತ್ರಿಯವರು ಮಂಡಿಸಿರತಕ್ಕಂತಹ ಬೇಡಿಕೆಯ ಬಗ್ಗೆ ಎರಡು ಸಲಹೆಗಳನ್ನು ಮತ್ತು ಕೆಲವು ಟೀಕೆಗಳನ್ನು ಮಾಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಈ ಖಾತೆಗೆ ಸಾಧಾರಣವಾಗಿ ಎಲ್ಲಖಾತೆಗಿಂತಲೂ ಹೆಚ್ಚಾಗಿ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಖರ್ಚಾಗತಕ್ಕಂತಹ ಹಣ ನಾಗರೀಕರ ಹಿತದೃಷ್ಟಿಯಿಂದ ಸಮರ್ಪಕವಾಗಿ ಖರ್ಚು ಆಗದೆ ಇರುವುದು ಒಂದು ವ್ಯಥೆ ಪಡತಕ್ಕಂತಹ ವಿಚಾರ.ಈಗ ಮುಖ್ಯವಾಗಿ ಆಂಧ್ರ ಪ್ರದೇಶದಲ್ಲಿ ಮತ್ತು ತಮಿಳ್ನಾಡಿನಲ್ಲಿ ಇರಿಗೇಶನ್‌ಗೆ ಸಾಕಷ್ಟು ಪ್ರಾಧಾನ್ಯತೆಯನ್ನು ಕೊಡುತ್ತಿದ್ದಾರೆ. ಅದನ್ನು ನಾನು ಸಹ ನೋಡಿದ್ದೇನೆ, ಆದರೆ ನಮ್ಮ ರಾಜ್ಯದಲ್ಲಿ ಈ ಕೆಲಸಗಳು ತ್ವರಿತವಾಗಿ ಆಗದಿರುವುದರಿಂದ ನಮ್ಮ ರಾಜ್ಯದ ಆಹಾರ ಸಮಸ್ಯೆ ಕಠಿಣವಾಗಿ ಅದಕ್ಕೆ ಮಾಡತಕ್ಕಂತಹ ಖರ್ಚು ಸಹ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಇದೆ. ಆದ್ದರಿಂದ ಇರಿಗೇಶನಿಗೆ ಆದಷ್ಟು ಹೆಚ್ಚು ಹಣ ಖರ್ಚು ಮಾಡಿ ಕೆಲಸ ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಮತ್ತು ಈಗ ಅನೇಕ ಪದವೀಧರರಾಗಿದ್ದಂತಹ ಇಂಜಿನಿಯರುಗಳು ಮತ್ತು

(ಶ್ರೀ ಟಿ. ಆರ್. ಶಾಮಣ್ಣ)

ಡಿಪ್ಲೊಮಾ ಹೋಲ್ಡರ್ಸ್ ಕೆಲಸ ಸಿಗದೆ ಬಹಳ ಶ್ರಮ ಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ನಮಗೆ ಎಲ್ಲಿಯವರೆಗೆ ಅವರಿಗೆ ಕೆಲಸ ಕೊಡುವುದು ಕಷ್ಟವಾಗುತ್ತದೆಯೋ, ಅಲ್ಲಿಯ ವರೆಗೆ ನಾವು ಅವರಿಗೆ ಅವರ ಕಾಲ ಮೇಲೆ ನಿಂತುಕೊಳ್ಳಲು ಏನಾದರೂ ಸಹಾಯವನ್ನು ಮಾಡಬೇಕಾಗುತ್ತದೆ. ಅವಕ್ಕೋಸ್ಕರ ಅವರಿಗೆ ಹೆಚ್ಚು ಉದ್ಯೋಗವನ್ನು ಒದಗಿಸುವ ಸಲುವಾಗಿ ಅವರೇ ಸ್ವಂತವಾಗಿ ಕಂಟ್ರಾಕ್ಟ್ ಕೆಲಸ ಮಾಡಿ, ಇಲ್ಲವೇ ಸ್ವಂತ ಕಾರ್ಖಾನೆಗಳನ್ನು ಮಾಡಿ ಜೀವನ ಮಾಡಲು ಸರ್ಕಾರದವರು ಬೇಕಾದಂತಹ ಸಹಾಯವನ್ನು ಕೊಡಬೇಕು. ಅಂಥ ಅವಕಾಶವನ್ನು ಒದಗಿಸಲು ಸರ್ಕಾರ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಕಾಮಗಾರಿ ಇಲಾಖೆಯಲ್ಲಿ ಹೆಚ್ಚು ಟೆಂಡರ್ ಕೆಲಸ ಬಹಳ ವಿಳಂಬವಾಗುತ್ತಿದೆ. ಇದರಿಂದಾಗಿ ಕಾಲ ಹೆಚ್ಚು ಹೋಗುವುದರಿಂದ ಮಾಡಬೇಕಾದಂತಹ ಖರ್ಚು ಸಹ ಹೆಚ್ಚಾಗುತ್ತಿದೆ. ಆದ್ದರಿಂದ ಟೆಂಡರ್ ಕರೆಯುವಾಗ ಸರಿಯಾದ ಟೆಂಡರ್‌ದಾರರು ಸಿಗದಿದ್ದರೆ ಆ ಕೆಲಸವನ್ನು ಸರ್ಕಾರದವರು ವಹಿಸಿಕೊಂಡು ಮಾಡುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಸರ್ಕಾರಕ್ಕೆ ಸಹ ನಷ್ಟವಾಗುವಂತಹ ಹಣವನ್ನು ತಪ್ಪಿಸಿದ ಹಾಗೆ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಚಾಮರಾಜಪೇಟೆಯಲ್ಲಿ ರಾಮಸ್ವಾಮಿ ದೇವಸ್ಥಾನದ ಹತ್ತಿರ ಒಂದು ಕಲ್ಯಾಣ ಮಂಟಪವನ್ನು ಕಟ್ಟಬೇಕೆಂದು ನಾಲ್ಕು ವರ್ಷಗಳಿಂದ ಟೆಂಡರ್ ಕರೆದು ಒಬ್ಬರಿಗೆ ಕೊಟ್ಟರು. ಎರಡು ಲಕ್ಷಕ್ಕೆ ಟೆಂಡರ್ ಕೊಟ್ಟರೂ, ಅವರು ಅರ್ಧದಲ್ಲಿಯೇ ನಿಲ್ಲಿಸಿ ಹೋದರು. ಆದ್ದರಿಂದ ಅದನ್ನು ಮುಗಿಸಬೇಕಾದರೆ ಈಗ ಮೂರುವರೆ ಲಕ್ಷ ರೂಪಾಯಿ ಖರ್ಚು ಮಾಡಬೇಕಾಗಿ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಯವರು ಈ ಟೆಂಡರ್ ಕೆಲಸಗಳನ್ನು ಸಮರ್ಪಕವಾಗಿ ನಡೆಸುವಂತೆ ಒಂದು ವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿಯ ಉತ್ಪಾದನೆ ನಮ್ಮ ರಾಜ್ಯದಲ್ಲಿ ಹೆಚ್ಚು ಇದ್ದರೂ, ನಮಗೆ ಬೀಳುವಂತಹ ಖರ್ಚು ಹೆಚ್ಚು. ವರ್ಷ ವರ್ಷ ಕನ್‌ಸ್ಯೂಮರ್ಸ್‌ನಿಂದ ಹೆಚ್ಚು ಹೆಚ್ಚು ವಸೂಲು ಮಾಡಿದರೂ ಸಹ ಎಲೆಕ್ಟ್ರಿಸಿಟಿ ಬೋರ್ಡಿಗೆ ನಷ್ಟವಾಗುವುದಕ್ಕೆ ಕಾರಣವೇನೆಂಬುದನ್ನು ತಿಳಿಸಬೇಕು. ಇದಕ್ಕೆ ಏನು ನಿಜವಾದ ಕಾರಣವೆಂದು ಮಾನ್ಯ ಮಂತ್ರಿಯವರು ನಮಗೆ ತಿಳಿಸಬೇಕು. ಇವತ್ತು ನಮಗೆ ವಿದ್ಯುಚ್ಛಕ್ತಿಯ ಬರ ಬಂದಿದೆ. ಆದರೆ ಬರ ಬಾರದಿದ್ದರೂ ಪ್ರತಿವರ್ಷ ಲಾಸ್ ಆಗುವುದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಬೇಕಾಗಿದೆ. ಅಲ್ಲದೆ ನಮ್ಮ ರಾಜ್ಯದಲ್ಲಿ ಆದಷ್ಟು ಪವರ್ ಜಾಸ್ತಿ ಉತ್ಪಾದನೆ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಪೋರ್ಟ್ಸ್ ವಿಚಾರ ಹೇಳುವುದಾದರೆ, ನಾನು ಎಸ್ಟಿಮೇಟ್ ಕಮಿಟಿಯಲ್ಲಿದ್ದುಕೊಂಡು ಅನೇಕ ಬಂದರುಗಳನ್ನು ನೋಡಿಕೊಂಡು ಬಂದಿದ್ದೇನೆ. ಅನೇಕ ಸಂದರ್ಭಗಳಲ್ಲಿ ಅಲ್ಲಿ ಡ್ರೆಜರ್ಸ್ ಇಲ್ಲದೆ ಪೋರ್ಟಿನ ಸರಿಯಾದ ಉಪಯೋಗವನ್ನು ಪಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸರ್ಕಾರದವರು ಹೆಚ್ಚು ಡ್ರೆಜರ್ಸ್ ತರಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅದಲ್ಲದೆ ಕಾರವಾರ ಬಂದರನ್ನು ಇನ್ನೂ ಹೆಚ್ಚಾಗಿ ಉತ್ತಮಪಡಿಸಿ, ಅದರ ಸುತ್ತುಮುತ್ತಲು ಅನೇಕ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದರೆ, ಕೈಗಾರಿಕೆಯಲ್ಲಿ ಹಿಂದುಳಿದಿರತಕ್ಕಂತಹ ಕಾರವಾರ ಜಿಲ್ಲೆಗೂ ಅನುಕೂಲವಾಗುತ್ತದೆ ಮತ್ತು ಅಲ್ಲಿಯ ಜನರಿಗೆ ಉದ್ಯೋಗಾವಕಾಶವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ. ಅಲ್ಲಿಯ ಬಂದರನ್ನು ಅಭಿವೃದ್ಧಿಮಾಡುವುದರ ಜೊತೆಗೆ ಕಾರವಾರ ರೈಲ್ವೆಯನ್ನು ಸಹ ಆದಷ್ಟು ಜಾಗ್ರತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಕಾರ್ಪೊರೇಶನ್‌ನಲ್ಲಿ ಅವ್ಯವಹಾರ ಇದೆಯೆಂದು ಅದನ್ನು ವಿಜಿಲೆನ್ಸ್ ಕಮಿಶನಿಗೆ ಎನ್‌ಕ್ವಾಯರಿ ಮಾಡುವುದಕ್ಕೆ ಕೊಟ್ಟು ಒಂದು ವರ್ಷವಾಯಿತು. ಈ ಸಂದರ್ಭದಲ್ಲಿ ಕೆಲವು ಇಂಜಿನಿಯರುಗಳನ್ನು, ಸೂಪರ್‌ವೈಸರುಗಳನ್ನು ಸಸ್ಪೆನ್‌ಶನ್ನಿನಲ್ಲಿಟ್ಟರು. ಆದರೆ ಆ ಮೇಲೆ ಯಾರು ಪ್ರಭಾವವನ್ನು ಬೀರಿದರು ಮತ್ತು ಯಾರು ಹಣವನ್ನು ಖರ್ಚು ಮಾಡಿದರು, ಅಂಥವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಆದರೆ ಬಾಕಿ ಉಳಿದ 21 ಜನರ ಬಡ ನೌಕರರು ಏನಿದ್ದಾರೆ, ಅವರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳದೆ ಅನಾವಶ್ಯಕವಾಗಿ ಕಳೆದ 15 ತಿಂಗಳಿಂದ ಅವರಿಗೆ ಸಂಬಳ ಸಹ ಸ್ವಲ್ಪ ಭಾಗ ಕೊಟ್ಟು ಹಿಂಸೆ ಕೊಡುತ್ತಿದ್ದಾರೆ. ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಯವರಿಗೆ ಹೇಳಿದ್ದೇನೆ. ಅವರು ಪಿ ಡಬ್ಲ್ಯು ಡಿ ಮಂತ್ರಿಯವರಿಗೆ ಹೇಳಿ ಎಂದು ಹೇಳಿದ್ದಾರೆ, ಇವರ ಹತ್ತಿರ ಹೇಳಿದರೆ ಇವರು ಪೌರಾಡಳಿತ ಸಚಿವರ ಹತ್ತಿರ ಹೇಳಿ ಎಂದು ಹೇಳುತ್ತಿದ್ದಾರೆ, ಇದರ ಬಗ್ಗೆ ಸರ್ಕಾರದವರು ಒಂದು ತೀರ್ಮಾನವನ್ನು

ಬೇಗನೇ ತೆಗೆದುಕೊಂಡು ಆ ಜನರ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳುತ್ತೇನೆ. ಇದನ್ನು ಹೇಳುವಾಗ ನಾನು ಇವತ್ತು ತಪ್ಪು ಮಾಡಿದವರಿಗೆ ಬೆಂಬಲ ಕೊಡಬೇಕೆಂಬ ಉದ್ದೇಶದಿಂದ ಹೇಳುತ್ತಾ ಇಲ್ಲ. ಆದರೆ ಇದನ್ನು ಬಹಳ ಕಾಲದಿಂದ ಇಟ್ಟುಕೊಂಡು ಬರುವುದು ಒಳ್ಳೆಯದಲ್ಲ. ಯಾರು ಹಣ ಖರ್ಚು ಮಾಡಿ, ಪ್ರಭಾವ ಬೀರಿ ಹೋಗಿದ್ದಾನೋ, ಅವನು ಹೋದ. ಆದರೆ ಕೆಳಗಡೆ ಇರತಕ್ಕ ಕಾರ್ಪೊರೇಷನ್ ನೌಕರರ ಗತಿ ಹಾಗೆಯೇ ಇದೆ. ಇದನ್ನು ಮಂತ್ರಿಯವರು ಗಮನಿಸ ಬೇಕೆಂದು ಹೇಳುತ್ತೇನೆ.

ಇನ್ನು ಟೆಂಡರ್ ರೇಟಿಗಿಂತ ಹೆಚ್ಚು ಶೆಡ್ಯೂಲ ರೇಟ್ ಬರತಕ್ಕಂತಹ ಸಂದರ್ಭಗಳಲ್ಲಿ ಸರ್ಕಾರ ದವರೇ ಡಿಪಾರ್ಟ್‌ಮೆಂಟಲಾಗಿ ಕೆಲಸ ಮಾಡತಕ್ಕಂತಹ ಒಂದು ಆರ್ಗನೈಸೇಶನ್ ಇಟ್ಟುಕೊಂಡು ಕೆಲಸ ಮಾಡಿಸಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಕಂಟ್ರಾಕ್ಟ್ ಕೊಡುವುದರ ಜೊತೆಗೆ, ಎಲ್ಲಿ ಟೆಂಡರ್ ರೇಟ್ ಹೆಚ್ಚಾಗುತ್ತದೆ, ಮತ್ತು ಕಂಟ್ರಾಕ್ಟರ್ಸ್ ಮುಂದೆ ಬರುವುದಿಲ್ಲ ಅಂಥ ಕಡೆ ಗಳಲ್ಲಿ ಸರ್ಕಾರದವರು ಕೆಲಸ ಮಾಡಿಸಬಹುದು. ಇನ್ನು ಅನೇಕ ರಸ್ತೆಗಳನ್ನು ಮಾಡುವಾಗ ವಾಹನ ಸಂಚಾರ ಎಲ್ಲಿ ಜಾಸ್ತಿ ಇವೆ, ಅಲ್ಲಿ ಸಿಮೆಂಟ್ ಕಾಂಕ್ರೀಟ್ ಹಾಕಿದರೆ ಒಳ್ಳೆಯದು. ಇದ ರಿಂದ ರಸ್ತೆ ಸಹ ಒಳ್ಳೆಯದಾಗುತ್ತದೆ ಮತ್ತು ಖರ್ಚು ಸಹ ಕಡಿಮೆಯಾಗುತ್ತದೆ. ಆದ್ದರಿಂದ ಸಿಮೆಂಟ್ ಸುಲಭವಾಗಿ ಸಿಗುವ ಕಾಲದಲ್ಲಿ ಅಂಥ ರಸೆಗಳಿಗೆ ಕಾಂಕ್ರೀಟ್ ಹಾಕಿಸಬೇಕೆಂದು ಹೇಳು ತ್ತೇನೆ. ಅದೇ ರೀತಿ ರೂರಲ್ ರೋಡುಗಳನ್ನು ಅಪ್‌ಗ್ರೇಡ್ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ಬೆಂಗಳೂರು ನಗರದಲ್ಲಿ ರಸ್ತೆಗಳಿಗಾಗಿ ಒಂದು ಕೋಟಿ ರೂಪಾಯಿಗಳನ್ನು ವರ್ಷೇ ವರ್ಷೇ ಖರ್ಚುಮಾಡುತ್ತಾರೆ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಲ್ಲ 5 ಕೋಟಿ ರೂಪಾ ಯಿಗಳನ್ನು ಬೆಂಗಳೂರಿನಲ್ಲಿ ಕಲೆಕ್ಟ್ ಮಾಡಿದರೂ 4 ಕೋಟಿ ರೂಪಾಯಿಗಳನ್ನು ಕಂಪನ್ಸೇಷನ್ ಕೊಡುತ್ತಾರೆ ನಮ್ಮ ರಾಜ್ಯದಲ್ಲಿ ಕೆಲವು ಕಡೆಗಳಲ್ಲಿ ರಾಜ್ಯದ ಹೆದ್ದಾರಿಗಳು ಹಾಗೂ ರಾಷ್ಟ್ರದ ಹೆದ್ದಾರಿಗಳು ಹೋಗುತ್ತವೆ. ಈ ರಾಷ್ಟ್ರೀಯ ಹೆದ್ದಾರಿಗಳನ್ನು ಬಹಳ ಬೇಗನೆ ಮಿಲಟರಿ ರೋಡ್ ಗಳಾಗಿ ಹಾಗೂ ಸ್ಟೇಟ್ ಹೈರೋಡ್‌ಗಳಾಗಿ ಉಪಯೋಗಿಸಿ ಸಾಕಾದಷ್ಟು ಹಣವನ್ನು ಕಾರ್ಪೊ ರೇಷನ್ನಿಗೆ ಕೊಡಬೇಕಾಗುತ್ತದೆ. ಹಾಗೆ ಕೊಡದೇ ಹೋದರೆ, ಮೋಟಾರ್ ವೆಹಿಕಲ್ಸ್ ಟಾಕ್ಸ್ ವರಮಾನ ಬಹಳ ಕಡಿಮೆಯಾಗುತ್ತದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಮಂತ್ರಿಗಳು ಪಿ. ಡಬ್ಲ್ಯು. ಡಿ. ಇಲಾಖೆಯ ಮೇಲೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಕೆಲವಾರು ಸಲಹೆಗಳನ್ನು ಹೇಳಲಿಚ್ಛಿಸುತ್ತೇನೆ. ಇವತ್ತಿನ ದಿವಸ ಪಿ. ಡಬ್ಲ್ಯು. ಡಿ. ಇಲಾಖೆ ಏನಾಗಿದೆಯೆಂದರೆ ತನ್ನ ಒಂದು ನೀತಿಯನ್ನು ಕಳೆದುಕೊಂಡಿದೆ ಎಂಬುದಾಗಿ ನಾನು ಕೆಲವು ಉದಾಹರಣೆಗಳೊಂದಿಗೆ ಸಮರ್ಥಿಸಲು ಇಚ್ಛಿಸುತ್ತೇನೆ. ಏಕೆಂದರೆ, ಹಿಂದಿನ ಕಾಲದಲ್ಲಿ ಕಟ್ಟಿರತಕ್ಕ ಕೆರೆಗಳು, ಕಟ್ಟಿರತಕ್ಕ ಬಾವಿಗಳು, ಕಟ್ಟಿರತಕ್ಕ ಗುಡಿ ಗೋಪುರ ಗಳನ್ನು ಇವತ್ತು ನಾವು ನೋಡಿದ್ದ ಪಕ್ಷದಲ್ಲಿ, ಇವತ್ತಿನದಿವಸ ಮಾಡುತ್ತಾ ಇರತಕ್ಕ ಕೆಲಸ ಹಿಂದಿನ ಕಾಲದಲ್ಲಿ ಆಗುತ್ತಾ ಇಲ್ಲ. ಈಗ ಇರತಕ್ಕ ಕೆಲಸವೇನು, ಮತ್ತು ನಮ್ಮ ಎದುರುಗಡೆ ಇರತಕ್ಕ ಕೆಲವು ಕಾಲುವೆಗಳನ್ನು ಪ್ರತ್ಯಕ್ಷವಾಗಿ ಉದಹರಿಸಬಹುದು. ಏಕೆಂದರೆ ಹಿಂದಿನ ಕಾಲದಲ್ಲಿ ಕಟ್ಟಿರ ತಕ್ಕ ಕೆರೆಗಳು, ದೇವಸ್ಥಾನಗಳ ಪಕ್ಕದಲ್ಲಿರತಕ್ಕ ಕೆರೆಗಳು ಹಾಗೂ ಅಲ್ಲಿರತಕ್ಕ ಗುಡಿ ಗೋಪುರ ಗಳನ್ನು ತೆಗೆದುಕೊಂಡರೆ, ಎಷ್ಟು ಕೆಲಸಗಳು ಅಲ್ಲಿ ಆಗಬೇಕಾಗಿತ್ತೋ ಅಷ್ಟು ಕೆಲಸಗಳು ಆಗಿಲ್ಲ. ಇವತ್ತಿನದಿವಸ ಅನೇಕ ಕೆರೆಗಳ ರಿಪೇರಿ ಕೆಲಸಕಾರ್ಯಗಳ ಬಗ್ಗೆ ಇನ್ನೂ ಫೈನಲ್ ಬಿಲ್ ಆಗದೇ ಇರುವುದು, ಅನೇಕ ಬಿಲ್‌ಗಳು ಇನ್ನೂ ಪೆಂಡಿಂಗ್‌ನಲ್ಲಿರುವ ಪರಿಸ್ಥಿತಿ ನಮ್ಮ ಮುಂದಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದಾರೆ. ಅವರ ವಿಚಾರವಾಗಿ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಅವರು ಬಹಳ ದಕ್ಷರು, ಯೋಗ್ಯರು ದಕ್ಷತೆಯಿಂದ ಕೆಲಸ ಮಾಡತಕ್ಕ ಶಕ್ತಿಯುಳ್ಳವರು. ಅಂತಹವರೇ ಇಲ್ಲಿ ಕೂತಿರುವಾಗ ಪಿ. ಡಬ್ಲ್ಯು. ಡಿ. ಇಲಾಖೆ ಬಹು ಬೇಗನೆ ತನ್ನ ಸ್ಟಾಂಡರ್ಡ್ ಏನು ಇದೆ ಅದನ್ನು ಉತ್ತಮಪಡಿಸುವುದಕ್ಕೆ ಖಂಡಿತವಾಗ ಪ್ರಯತ್ನ ಪಡುತ್ತಾರೆಂಬ ಭರವಸೆ ನಮಗೆಲ್ಲರಿಗೂ ಇದೆ.

ಇನ್ನು ನಾನು ಕೋಲಾರ ಜಿಲ್ಲೆಯ ವಿಚಾರವನ್ನು ತೆಗೆದುಕೊಂಡರೇ ಈ ಜಿಲ್ಲೆಯಲ್ಲಿ ಮಳೆ 16 ಇಂಚಿನಿಂದ 25 ಇಂಚಿನವರೆಗೂ ಬಿದ್ದು ಬಹಳಮಟ್ಟಿಗೆ ವ್ಯವಸಾಯ ಹಾಗೂ ಲಿಫ್ಟ್ ಇರ್ರಿಗೇಷನ್ ಎಂಬುದಾಗಿ ನಾವೇನು ಹೇಳುತ್ತೇವೋ ಅದು ಅಲ್ಲಿನ ಕೆರೆಗಳನ್ನು ಅವಲಂಬಿಸಿದೆ. ಅಲ್ಲಿ ಅನೇಕ ವಿಧವಾದ ದೊಡ್ಡದೊಡ್ಡ ನದಿಗಳಾಗಲೀ ತಲಪರಿಗಳಾಗಲೀ ಇಲ್ಲ. ಕೋಲಾರ ಜಿಲ್ಲೆಯಲ್ಲಿ ಸಂಪೂರ್ಣವಾಗಿ ನೀರಾವರಿ ಯೋಜನೆಯೆಂದರೆ ಕೆರೆಗಳನ್ನು ಕಟ್ಟುವ ಯೋಜನೆ. ನಮ್ಮ

(ಶ್ರೀ ಏ. ಕೃಷ್ಣರಾವ್)

ಪ್ರದೇಶದಲ್ಲಿರತಕ್ಕ ಅನೇಕ ಗ್ರಾಮಗಳಲ್ಲಿ ಹರಿದು ಹೋಗತಕ್ಕ ನೀರನ್ನು ಉಪಯೋಗಿಸಿಕೊಂಡು ಅಲ್ಲಿ ಹೊಸದಾಗಿ ಕೆರೆಗಳನ್ನಾಗಲೀ, ಅಥವಾ ಕಾಲುವೆಗಳನ್ನಾಗಲೀ ಮಾಡುವುದಕ್ಕೆ ಆಗದೇ ಇರುವುದರಿಂದ ಅಲ್ಲಿ ವ್ಯವಸಾಯ ಕೆಲಸ ಮಾಡುವುದೇ ಬಹಳ ಕಷ್ಟವಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ ಗೌರಿಬಿದನೂರು ತಾಲ್ಲೂಕಿನಲ್ಲಿ ಮುದಲೂರು ಎಂಬ ಒಂದು ಕೆರೆ ಇದೆ. ಅದಕ್ಕೆ ಹಿಂದೆಯೇ 10 ಸಾವಿರ ರೂಪಾಯಿಗಳಷ್ಟು ಮಂಜೂರಾಯಿತು. ಅಲ್ಲಿ ಅಗ್ರಿಮೆಂಟರ್ ಜೋನ್ ಮಾಡಿರುವುದರಿಂದ, ಅಲ್ಲಿನ ಪ್ರದೇಶವನ್ನು ಅಕ್ವಿಸಿಷನ್ ಮಾಡುವುದಕ್ಕಾಗುವುದಿಲ್ಲ. ಇದರಿಂದ ಕಷ್ಟದಲ್ಲಿರತಕ್ಕ ರೈತರಿಗೆ ಹಾಗೂ ಕಷ್ಟದಲ್ಲಿರತಕ್ಕ ಎಲ್ಲ ಜನಾಂಗದವರಿಗೂ ಇಂತಹ ಒಂದು ಅನ್ಯಾಯ ಆಗುತ್ತಿದೆ. ಅದನ್ನು ಪರಿಹಾರ ಮಾಡಬೇಕೆಂದು ನಾನು ಈ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಕೋಲಾರ ಜಿಲ್ಲೆ ಹಿಂದುಳಿದಿರತಕ್ಕ ಜಿಲ್ಲೆ ಬಹಳ ಅದನ್ನು ನಾನು ಪುನಃ ಹೇಳಬೇಕಾಗಿಲ್ಲ. ಈಗ ರಾಯಲಸೀಮೆ ಭಾಗದಲ್ಲಿರತಕ್ಕ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ—ಈ ಮೂರು ಜಿಲ್ಲೆಗಳ ಕೆಲವು ಭಾಗಗಳನ್ನು ನೋಡಿದರೆ ಆಂಧ್ರ ಪ್ರದೇಶದಲ್ಲಿ ರಾಯಲಸೀಮೆ ಬೋರ್ಡ್ ಎಂಬುದಾಗಿ ಮಾಡಿ ತಜ್ಞರನ್ನು ಕರೆದು ನೀರಿನ ಸೌಲಭ್ಯಗಳನ್ನು ಕಲ್ಪಿಕೊಡಬೇಕೆಂಬ ವಿಚಾರವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ವ್ಯವಸಾಯದ ಮೂಲಕ ಅಲ್ಲಿನ ಹಿಂದುಳಿದ ಪ್ರದೇಶಗಳನ್ನು ಮುಂದಕ್ಕೆ ತರಲು ಪ್ರಯತ್ನ ಮಾಡುತ್ತಿದ್ದಾರೆ. ಆಂಧ್ರ ಪ್ರದೇಶದಲ್ಲಿ ಇಂತಹ ವ್ಯವಸಾಯವನ್ನು ಮಾಡಲಿಲ್ಲವೆಂಬ ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಅಂತಹ ಒಂದು ಬೋರ್ಡನ್ನು ರಚಿಸಿ ಇಲ್ಲಿರತಕ್ಕ ಜನಗಳಿಗೆ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಹಾಗೆಯೇ ರಿಲೀಫ್ ವರ್ಕ್ಸ್ ವಿಷಯವಾಗಿ ಹೇಳಬೇಕೆಂದರೆ, ಕೇವಲ ಕೆರೆಗಳಿಂದ ಮಣ್ಣು ಎತ್ತಿ ಹಾಕಿದರೆ ಏನೂ ಪ್ರಯೋಜನವಾಗುದಿಲ್ಲ. ಆದ್ದರಿಂದ ಪರ್ಮನೆಂಟ್ ರಿಲೀಫ್ ವರ್ಕ್ಸನ್ನು ಮಾಡಬೇಕು, ನಮ್ಮ ಜಿಲ್ಲೆಯಲ್ಲಿ ಎಲ್ಲಿ ನೀರು ಸಿಗುತ್ತದೋ ಅಲ್ಲಿ ಶಾಶ್ವತವಾದ ರಿಲೀಫ್ ಕಾಮಗಾರಿಗಳನ್ನು ಮಾಡಬೇಕಾಗುತ್ತದೆ. ಅದಕ್ಕಾಗಿ ಸರಿಯಾದಂಥ ತಜ್ಞರನ್ನು ಕರೆಸಿ ಪರ್ಮನೆಂಟಾಗಿ ರಿಲೀಫ್ ವರ್ಕ್ಸನ್ನು ಕೂಡಲೇ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಗೌರಿಬಿದನೂರು ತಾಲ್ಲೂಕಿನಲ್ಲಿ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳಲ್ಲಿ ಅಪ್ಪರ್ ಭದ್ರಾದಿಂದ ನೀರನ್ನು ತರುವುದಕ್ಕೆ ಅವಕಾಶವಿದೆಯೆಂದು ಕೆಲವರು ತಜ್ಞರು ಹೇಳುತ್ತಾರೆ. ಅಲ್ಲಿಂದ ನೀರನ್ನು ಅಲ್ಲಿನ ಎಲ್ಲಾ ತಾಲ್ಲೂಕುಗಳಿಗೆ ತರಿಸಿಕೊಟ್ಟರೆ ಖಂಡಿತವಾಗಿ ಜನತೆಯ ಶ್ರೇಯೋಭಿವೃದ್ಧಿಗೆ ಬಹಳಮಟ್ಟಿಗೆ ಅವಕಾಶವಾಗುತ್ತದೆ. ಇನ್ನು ನಮ್ಮ ತಾಲ್ಲೂಕಿನ ವಿಚಾರವಾಗಿ ಹೇಳಬೇಕಾದರೆ, ಸುಮಾರು 10-12 ವರ್ಷಗಳಿಂದ ಸರ್ಕಾರದ ಬೊಕ್ಕಸದಿಂದ ಖರ್ಚು ಮಾಡಿರತಕ್ಕ ಹಣ ಕೇವಲ ಫೀಡರ್ ಚಾನಲ್ಸ್ ಏನಿದೆಯೋ ಅವಕ್ಕೇ ಲಕ್ಷಾಂತರ ರೂಪಾಯಿಗಳವರೆಗೂ ಖರ್ಚಾಗುತ್ತಿದೆ. ಅದನ್ನು ಈಗ ಸರ್ಕಾರದಲ್ಲಿ ಮಧ್ಯದಲ್ಲಿಯೇ ನಿಲ್ಲಿಸಿದ್ದಾರೆ. ಇದಕ್ಕೆ ಉದಾಹರಣೆಗೆ ಹೇಳುವುದಾದರೆ, ಹುದುಗೂರು–ಚಿಕ್ಕೆರೆ ಫೀಡರ್ ಚಾನಲ್‌ಗೆ ನಾಲ್ಕು ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿದ್ದಾರೆ. ಸೋನಗನಹಳ್ಳಿ ಫೀಡರ್ ಚಾನಲ್, ಗದರೆ ಫೀಡರ್ ಚಾನಲ್, ಕಲ್ಲೂಡಿ ಫೀಡರ್ ಚಾನಲ್, ದೊಡ್ಡ ಮಲ್ಲೆ ಕೆರೆ ಫೀಡರ್ ಚಾನಲ್. ಕೆಲಸ ಅರ್ಧವಾಗಿ ನಿಂತಿದೆ. ವಟದ ಹೊಸಹಳ್ಳಿ ಹಾಗೂ ಹೊಸೂರು ಕನಿ ಕೆರೆ, ಫೀಡರ್ ಚಾನಲ್, ತೊಂಡೇ ಬಾವಿ ಫೀಡರ್ ಚಾನಲ್. ಶ್ರೀನಿವಾಸಗರ್—ನಗರಗೆರೆ ಫೀಡರ್ ಚಾನಲ್, ದಿದಿನಾಯಕನಪಾಳ್ಯ ಫೀಡರ್ ಚಾನಲ್ ಕೆಲಸಗಳು ಬಹು ಜಾಗ್ರತೆಯಾಗಿ ಆಗಬೇಕು. ಇನ್ನು ಅನೇಕ ಕೆರೆಗಳಿಂದ ಹತ್ತಾರು ಎಕರೆಗಳಷ್ಟು ನೀರಾವರಿ ಯಾಗುವುದಕ್ಕೆ ಅವಕಾಶವಿದೆ. ಅದನ್ನು ಸರ್ಕಾರದವರು ಮಾಡಬೇಕು. ಹೊಸ ಕೆರೆಗಳನ್ನು ಸ್ಥಾಪನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ ಈಗಾಗಲೇ ಅನೇಕ ಹೊಸ ಕೆರೆಗಳ ಸರ್ವೇ ಕೆಲಸ ಆಗಿದೆ. ನಮ್ಮಲ್ಲಿ ಇವತ್ತಿನವರಗೆ ಯಾವ ಹೊಸ ಕೆರೆಗಳ ನಿರ್ಮಾಣವಾಗಿಲ್ಲ. ಮುದೂರು, ಬೆಂಡಿಗನ—ಬ್ಯಯಲಳ್ಳಿ ರಿಜರ್ವಾಯರ್ ಕೆಲಸ ಇನ್ನೂ ಆಗಿಲ್ಲ, ಅದನ್ನು ಮಾಡಬೇಕು. ರಾಮ ಲಕ್ಷಣ ಕೆರೆ, ವೀರಮ್ಮನಹಳ್ಳಿ ಕೆರೆ, ಕೊಡಿಗಕೆರೆ, ಈ ಕೆರೆಗಳ ಕೆಲಸಗಳನ್ನು ಆದಷ್ಟು ಜಾಗ್ರತೆಯಾಗಿ ಸರ್ಕಾರದವರ ಕೈಗೊಳ್ಳಬೇಕು. ಇವುಗಳನ್ನು ನಿರ್ಮಾಣಮಾಡಿ ಅಲ್ಲಿನ ರೈತರಿಗೆ ವ್ಯವಸಾಯಕ್ಕೆ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಇನ್ನು ಕೆಲವು ರೆಸ್ಟೊರೇಷನ್ ವರ್ಕ್ಸ್ ಹಾಗೆಯೇ ಇವೆ. ಅನೇಕ ಕೆರೆಗಳ ಸೇತುವೆಗಳ ಕಾರ್ಯ ಏನೂ ನಡೆದಿಲ್ಲ. ಹಾಗೂ ರಸ್ತೆಗಳ ಸೇತುವೆ ಕೆಲಸಗಳನ್ನೂ ಸಹ ಮಾಡಬೇಕಾಗಿದೆ. ಗೌರಿಬಿದನೂರಿನಲ್ಲಿ ಸರಿಯಾದ ಸೇತುವೆಗಳು ಇಲ್ಲದೆ ಅನೇಕ ಸರ್ಕಾರೀ ಬಸ್ಸುಗಳು ಓಡಾಡುವುದಕ್ಕೆ ತೊಂದರೆಯಾಗಿದೆ. ಸರಿಯಾದ ಅಪ್ರೋಚ್ ರಸ್ತೆಗಳು ಇಲ್ಲ. ಇದ

ರಿಂದ ತಾಲ್ಲೂಕಿನಿಂದ ಬೇರೆ ತಾಲ್ಲೂಕುಗಳಿಗೆ ಬಸ್‌ಗಳಲ್ಲಿ ಓಡಾಡುವುದಕ್ಕೆ ಬಹಳ ತೊಂದರೆ ಯಾಗಿದೆ. ತೊಂಡೇಬಾವಿ—ಮಂಚೇನಹಳ್ಳಿ ಮಾರ್ಗದಲ್ಲಿ ರಸ್ತೆ ಸೇತುವೆ ಕೆಲಸ ಅತಿ ಜಾಗ್ರತೆ ಮಾಡಬೇಕು. ಮಾನ್ಯ ಶ್ರೀ ಚನ್ನಬಸಪ್ಪನವರು ಅನೇಕ ವರ್ಷಗಳಿಂದಲೂ ನಿಂತಿರತಕ್ಕ ರಸ್ತೆ ಕಾಮಗಾರಿಗಳನ್ನು ಜಾಗ್ರತೆಯಾಗಿ ಮಾಡಿಸುತ್ತಾ ಇರುವುದರಿಂದ ಮತ್ತು 50 ಮೈಲಿಯವರೆಗೆ ರಸ್ತೆ ಕಾಮಗಾರಿ ತೆಗೆದುಕೊಳ್ಳುತ್ತೇವೆಂದು ಒಂದು ದಿಟ್ಟತನದಿಂದ ತೀರ್ಮಾನವನ್ನು ತೆಗೆದು ಕೊಂಡಿರುವುದು, ಆ ಒಂದು ಸೌಕರ್ಯ ಎಲ್ಲಾ ತಾಲ್ಲೂಕುಗಳಿಗೂ ಕೊಡುತ್ತೇವೆಂದು ಹೇಳಿರುವುದು ನಿಜವಾಗಿ ಶ್ಲಾಘನೀಯವಾದ ವಿಚಾರ ಮತ್ತು ಅದಕ್ಕೆ ಅವರು ಅಭಿನಂದನೆಗೆ ಅರ್ಹರು.

ಇನ್ನು ಗೌರಿಬಿದನೂರಿನಿಂದ—ಬಾಗೇಪಲ್ಲಿಯ ಮಾರ್ಗವಾಗಿ ವಿದುರಾಶ್ವತ್ಥಕ್ಕೆ ಒಂದು ರಸ್ತೆ ಯನ್ನೂ, ತೊಂಡೇಬಾವಿಯಿಂದ—ನಾಗಲಮಡಿಕೆ ಮಾರ್ಗವಾಗಿ ಬೆಂಡಿಗಾನಹಳ್ಳಿಯವರೆಗೆ ಒಂದು ರಸ್ತೆಯನ್ನೂ, ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸಾಗಿಸಲು ಮಂಚೇನಹಳ್ಳಿಯಿಂದ ದಂಡಿಗಾನಹಳ್ಳಿ ರಸ್ತೆಯನ್ನೂ ಮಾಡಬೇಕಾದ್ದು ಬಹಳ ಅವಶ್ಯಕವಾಗಿದೆ. ಮಂಚೇನಹಳ್ಳಿ—ದಂಡಿಗಾನಹಳ್ಳಿಯ ರಸ್ತೆಯನ್ನು ಮಾಡದಿದ್ದರೆ ಕಬ್ಬನ್ನು ಸಾಗಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಇನ್ನು ಹೊಸೂರಿಂದ ಮಧುಗಿರಿಯ ಬಾರ್ಡರ್‌ವರೆಗೆ—ಬಿಳಿಗೆರೆ, ಬಿಸಲಹಳ್ಳಿ ಬ್ಯಾಲ್ಯದ ಮಾರ್ಗ ವಾಗಿ ಒಂದು ರಸ್ತೆಯನ್ನೂ ಮಾಡಬೇಕಾಗಿದೆ. ಇಷ್ಟು ಹೊಸ ರಸ್ತೆಗಳನ್ನು ನಮ್ಮ ತಾಲ್ಲೂಕಿನಲ್ಲಿ ಮಾಡಬೇಕಾದ್ದಿದೆ. ಇವೆಲ್ಲವೂ ಆಗಲೇಬೇಕು. ಈ ಎಲ್ಲಾ ರಸ್ತೆಗಳನ್ನೂ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

5-30 P.M.

ಇನ್ನು ವಿದ್ಯುಚ್ಛಕ್ತಿಯ ವಿಚಾರಕ್ಕೆ ಬಂದರೆ ಈಗ ಇದು ಶೇ. 25 ರಷ್ಟು ಕಟ್ ಆಗಿದೆ. ಅಲ್ಲಿ ಕೆಲವು ಹಳ್ಳಿಗಳಲ್ಲಿ 2—3 ಸಾವಿರ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಿಗೂ ಕೂಡ ಒಂದು ಫ್ಲೋರ್ ಮಿಲ್ಲನ್ನು ಹಾಕುವುದಕ್ಕೆ ಪವರನ್ನು ಕೊಡುತ್ತಿಲ್ಲ. ಅಲ್ಲಿ ಬೆಳಗಿನಿಂದ ಕೂಲಿ ಮಾಡಿ ಸಾಯಂಕಾಲ ಮನೆಗೆ ಬರತಕ್ಕ ಜನರಿಗೆ ಸೇರು ಎರಡು ಸೇರು ಕಾಳನ್ನು ಹಿಟ್ಟುಮಾಡಿಸುವುದಕ್ಕೆ ಅವಕಾಶವಿಲ್ಲ ದಂತಾಗಿದೆ. ಇವಕ್ಕೆ ಸರ್ಕಾರದವರು ಮಾನ್ಯತೆ ಕೊಡಬೇಕೆಂದು ಆ ಜನರಿಗೆ ಹೆಚ್ಚು ವಿದ್ಯುಚ್ಛಕ್ತಿ ಪವರನ್ನು ಒದಗಿಸಬೇಕೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಚನ್ನಬಸಪ್ಪನವರು ಮಂಡಿಸಿರತಕ್ಕ ಬೇಡಿಕೆಯ ಸಂದರ್ಭದಲ್ಲಿ ಅವರಿಗೆ ನಾನು ಬಹಳ ಕಳಕಳಿಯಿಂದ ಮನವಿ ಮಾಡಿ ಕೊಳ್ಳುವುದು ಏನೆಂದರೆ—ನಮ್ಮ ಮಲೆನಾಡಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಅಲ್ಲಿ ಅನೇಕ ದೊಡ್ಡ ದೊಡ್ಡ ಫಲವತ್ತಾದ ಪ್ರದೇಶಗಳೆಲ್ಲಾ ನೀರು ಮುಳುಗಾಗಿ ಅಲ್ಲಿದ್ದ ಅನೇಕರು ಅನೇಕ ಕಷ್ಟನಷ್ಟಗಳಿಗೂ ತೊಂದರೆಗಳಿಗೂ ಒಳಗಾಗಿದ್ದಾರೆ. ನಮ್ಮ ಮಲೆನಾಡಿನ ಜನರು ತ್ಯಾಗ ಮಾಡತಕ್ಕ ಸನ್ನಿವೇಶ ಬಂದಾಗ ಅವರು ಹಿಂದು ಮುಂದು ನೋಡತಕ್ಕವರಲ್ಲ. ಆದರೆ ನಮ್ಮ ಮೈಸೂರಲ್ಲಿ ಅದರಲ್ಲೂ ಜೋಗಕ್ಕೆ ಸಮೀಪವಾಗಿ ಒಂದು ಅಣು ವಿದ್ಯುತ್ ಕೇಂದ್ರವನ್ನು ಸ್ಥಾಪಿಸತಕ್ಕ ಸಂದರ್ಭ ಉಂಟೆಂದೂ ಅದರ ಸಮೀಕ್ಷೆ ನಡೆಯುತ್ತಿದೆಯೆಂದು ವರ್ತಮಾನ ಕೇಳುತ್ತಿದ್ದೇನೆ. ಇದಕ್ಕೆ ಬಹಳ ಲಗತ್ತಾದಂಥ ಒಂದು ಒಳ್ಳೆಯ ಪ್ರದೇಶ ಶರಾವತಿಗೆ ಹತ್ತಿರದಲ್ಲೇ ಇವೆ. ಆದುದರಿಂದ ಆ ಶರಾವತಿಯ ಸಮೀಪದಲ್ಲೇ ಈ ಅಣು ವಿದ್ಯುತ್ ಕೇಂದ್ರವನ್ನು ಮಾಡಬೇಕೆಂದು ನಾನು ಸರ್ಕಾರದವರನ್ನು ಅಗ್ರಹ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಅವನ್ನು ನಾನು ಕೇಳು ತ್ತಿರುವ ಪ್ರದೇಶದಲ್ಲೇ ಮಾಡುವಂತೆ ರಾಜ್ಯಸರ್ಕಾರದವರು ಕೇಂದ್ರಕ್ಕೆ ಶಿಫಾರಸ್ಸುಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ಶರಾವತಿ ಜಲವಿದ್ಯುತ್ ಕೇಂದ್ರದ ಸ್ಥಾಪನೆಗಾಗಿ ನಮ್ಮಲ್ಲಿ ಅನೇಕರು ತಮ್ಮ ಮನೆ ಮಠಗಳನ್ನು ಕಳೆದುಕೊಂಡರು. ಅವರಿಗೆ ಇಲ್ಲಿ ಸಿಕ್ಕುತ್ತಿದ್ದ ಕೂಲಿ ಕೆಲಸಗಳನ್ನು ಕಳೆದು ಕೊಂಡರು. ಅಂಥ ನಿರ್ಗತಿಕ ಜನರಿಗೆ ಕೆಲವರಿಗಾದರೂ ನಿಮ್ಮ ಜಲವಿದ್ಯುತ್ ಕೇಂದ್ರದ ಆಫೀಸಿನಲ್ಲಿ ಕಡೆಗೆ ನಾಲ್ಕನೇ ದರ್ಜೆಯ ಪೀವನ್—ಜವಾನನ ಕೆಲಸ ಕೊಡತಕ್ಕ ವಿಚಾರದಲ್ಲಿ ತಮ್ಮ ಇಲಾಖೆಯ ಆ ಸೂಪರಿಂಟೆಂಡೆಂಟ್‌ರಿಗಾಗಲಿ ಅಥವಾ ಎಗ್ಸಿಕ್ಯುಟೀವ್ ಇಂಜಿನಿಯರುಗಳಿಗಾಗಲಿ ಒಂದು ಸೌಜನ್ಯತೆ ತೋರಿಸುವುದಕ್ಕೆ ಅವರಿಗೆ ಮನಸ್ಸು ಬರಲಿಲ್ಲ. ಮೊದಲು ಯಾರು ಅದೇ ಜಾಗದಲ್ಲಿ ಸುಖವಾಗಿ ಆಸ್ತಿಗಳನ್ನು ಮಾಡಿಕೊಂಡು ಇರುತ್ತಿದ್ದರೋ ಅಂಥವರು ಈ ದಿವಸ ಬೀದಿಯ ಭಿಕಾರಿ ಗಳಾಗಿ ರಸ್ತೆಯಲ್ಲಿ ಅಲೆಯುತ್ತಿದ್ದಾರೆ. ಇಂಥವರಿಗೆ ಜವಾನನ ಕೆಲಸ ಕೊಡುವುದಕ್ಕೂ ಅವರಿಗೆ

(ಶ್ರೀ ಕಾಗೋಡು ತಿಮ್ಮಪ್ಪ)

ಮನಸ್ಸು—ಕರುಣೆ ಬರಲಿಲ್ಲ. ಅಲ್ಲಿ ಈಗಲೂ ಶ್ರಮಜೀವಿಗಳಿಗೆ ಕೊಡಬೇಕೆಂದರೆ ಸಾಕಷ್ಟು ಕೆಲಸಗಳಿವೆ, ಆ ವರಾಹಿ ವಿದ್ಯುತ್ ಕೇಂದ್ರದ ಕೆಲಸ ಬೇರೆ ನಡೆಯುತ್ತಿದೆ. ಇಂಥ ಕಡೆಗಳಲ್ಲಿ ಎಲ್ಲಿಯಾದರೂ ಈ ಶ್ರಮಜೀವಿಗಳಿಗೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮಲ್ಲಿ ಒಂದು ಗಾದೆ ಇದೆ—'ಮನೆಗೆ ಮಾರಿ, ಪರರಿಗೆ ಉಪಕಾರಿ' ಎಂದು. ಅಲ್ಲಿ ಸಾಮಾನ್ಯವಾಗಿ ಯಾರು ತಮ್ಮ ಪ್ರದೇಶಗಳನ್ನು ಕಳೆದುಕೊಂಡಿದ್ದಾರೋ ಅಂಥ ಹಳ್ಳಿಗ ಜನರಿಗಾದರೂ ಇಲ್ಲವೇ ಇದು ಮಲೆನಾಡು ಎಂಬ ದೃಷ್ಟಿಯಿಂದಲಾದರೂ ಆ ಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಪವರನ್ನು ಒದಗಿಸಬೇಕಾಗಿದೆ. ಇಲ್ಲಿಗೆ ನಾಲ್ಕು ವರ್ಷಗಳ ಕೆಳಗೆ ಮಂಜೂರಾದ ಅಂದಾಜುಗಳಿನ್ನೂ ಹಾಗೇ ಮೂಲೆಗೆ ಬಿದ್ದಿವೆ. ಕಾರ್ಗಲ್—ಅಂಬರಗೋಡ್ ಇದರ ಒಂದು ಅಂದಾಜು 1972–73ರಲ್ಲಿ ಮಂಜೂರಾಗಿದ್ದರೂ ಇನ್ನೂ ಅದು ಕಾರ್ಯಗತವಾಗಲಿಲ್ಲ. ಹಾಗೇ ನಗರದಿಂದ ಕರೂರುವರೆಗೆ ಇದು 1971–72ರಲ್ಲಿ ಮಂಜೂರಾಯಿತು. ಇನ್ನೂ ಕೆಲಸ ಆಗಲಿಲ್ಲ. ಕಾರುಗಲ್ಲಿನಿಂದ ಅಂಬರಗೋಳ ಅಥವಾ ಕೊಂಜವಳ್ಳಿ, ಅಥವಾ ಕೋಗಾರ್‌ವರೆಗೆ ವಿದ್ಯುತ್ ಸರಬರಾಯಿ ಮಾಡುವುದಕ್ಕೆ ಬಹಳ ಹಿಂದೆಯೇ 1971–72ರಲ್ಲಿ ಮಾಡಿದ್ದ ಪಟ್ಟಿಯಲ್ಲಿ ಇದು ಸೇರಿದ್ದರೂ ಈ ಕೆಲಸಗಳೊಂದೂ ಆಗಿಲ್ಲ. ಅಲ್ಲಿ ಇನ್ನೂ ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ. ಇಂಥ ಉದಾಹರಣೆಗಳು ಇನ್ನೂ ಎಷ್ಟೋ ಇವೆ.

ಇನ್ನು ಮಲೆನಾಡಿನ ರಸ್ತೆ ಸಾರಿಗೆ ವಿಚಾರ ಮಾನ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ ಯೆಂದು ನಾನು ನಂಬಿದ್ದೇನೆ. ರಾಜ್ಯದ ಬೇರೆಬೇರೆ ಪ್ರದೇಶಗಳಲ್ಲಿ ರಸ್ತೆಗಳನ್ನು ಆರ್. ಸಿ. ಸಿ. ಮಾಡುವುದಕ್ಕೂ, ಮಲೆನಾಡಿನಲ್ಲಿ ಮಾಡುವುದಕ್ಕೂ ಬಹಳ ವ್ಯತ್ಯಾಸವಿದೆ. ಬೇರೆ ಕಡೆ ಬರಿ ಒಂದು ಮಣ್ಣಿನ ರಸ್ತೆ ಮಾಡಿದರೂ ಕೂಡ ಅದು ಅನೇಕ ಕಾಲದವರೆಗೂ ಇರಬಹುದು. ಆದರೆ ಮಲೆನಾಡಿನಲ್ಲಿ ಮಣ್ಣಿನ ರಸ್ತೆ ಮಾಡಿದರೆ ಅದಕ್ಕೆ ಸಕಾಲದಲ್ಲಿ ಜಲ್ಲಿ ಇತ್ಯಾದಿಗಳನ್ನು ಹಾಕದಿದ್ದರೆ ಅದು ಉಳಿಯುಲಿಕ್ಕೆ ಸಾಧ್ಯವೇ ಇಲ್ಲ. ಮಲೆನಾಡಿನಲ್ಲಿ ಮೋರಿಗಳನ್ನು ಮತ್ತು ಕಲ್ವರ್ಟುಗಳನ್ನು ಮೊದಲು ಮಾಡಬೇಕು. ಇಲ್ಲವಾದರೆ ಅಲ್ಲಿ ರಸ್ತೆ ಇತ್ತು ಎಂಬ ಕುರುಹು ಕೂಡ ಮಳೆಬಿದ್ದಾದನಂತರ ಅಲ್ಲಿರುವುದಿಲ್ಲ. ರಾಜ್ಯದ ಬೇರ ಬೇರೆ ಕಡೆಗಳಲ್ಲಿ ಈ ಕಲ್ವರ್ಟು ಗಳನ್ನು ಮಾಡಲು ಒಂದು ಮೈಲಿಗೆ 5 ಸಾವಿರ ರೂಪಾಯಿಗಳೆಂದು ನಿಗದಿ ಮಾಡಿದ್ದರೆ, ಅಲ್ಲಿ ಮೈಲಿಗೆ 4-5 ಕಲ್ವರ್ಟುಗಳು ಇದ್ದರೆ ಹೆಚ್ಚಾಯಿತು. ಮಲೆನಾಡಿನಲ್ಲಿ ಹಾಗಲ್ಲ ಇಲ್ಲಿ ಮೈಲಿಗೆ ಕನಿಷ್ಟ 10 ಕಲ್ವರ್ಟುಗಳಾದರೂ ಇದ್ದೇ ಇರುತ್ತವೆ. ಇಲ್ಲವೇ ಗುಡ್ಡವನ್ನು ಕಡಿದು ಬೇರೆ ಕಡೆಗಳಿಗೆ ಹೋಗಬೇಕು. ಆದುದರಿಂದ ಸರ್ಕಾರದವರು ರಾಜ್ಯದ ಇತರೇ ಭಾಗಗಳಿಗೆ ಇಟ್ಟುಕೊಂಡಿರತಕ್ಕ ಈ ರಸ್ತೆ ಕಾಮಗಾರಿಯ ಯಾರ್ಡ್ ಸ್ಟಿಕ್ಕನ್ನೇ ಮಲೆನಾಡಿಗೂ ಅನ್ವಯ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಮಲೆನಾಡಿನ ಮಟ್ಟಿಗೆ ಈ ರೂಲ್ಸ್‌ನ್ನು ರಿಲ್ಯಾಕ್ಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆರೆಗಳಲ್ಲಿ ಹೂಳನ್ನು ತೆಗೆಸತಕ್ಕ ವಿಚಾರದಲ್ಲಿ ಅಲ್ಲಿ ಸರ್ಕಾರದವರು ಏನೇನು ಪ್ರಯತ್ನ ಮಾಡಿಲ್ಲ. ಅದನ್ನು ಮಾಡದಿದ್ದರೆ ಆ ಕೆರೆಗಳಲ್ಲಿ ನೀರೇ ನಿಲ್ಲುವುದಿಲ್ಲ. ಅಲ್ಲದೆ ಅಲ್ಲಿ ದೊಡ್ಡ ನೀರಾವರಿ ಕಾಮಗಾರಿಗಳಿಗೆ ಅವಕಾಶವಿಲ್ಲ. ಆದುದರಿಂದ ಕ್ರಾಸ್ ಪ್ರೋಗ್ರಾಂನಲ್ಲಿ ಕೆರೆಗಳಲ್ಲಿನ ಹೂಳನ್ನು ತೆಗೆಸುವುದಕ್ಕೆ ಸರ್ಕಾರದವರು 3 ಲಕ್ಷ ರೂಪಾಯಿಗಳನ್ನು ಪರೀಕ್ಷಾರ್ಥವಾಗಿ ಒದಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಸಾಮಾನ್ಯವಾಗಿ ಜನರಿಗೆ ಮೇ, ಜೂನ್, ಜುಲೈ ತಿಂಗಳು ಗಳಲ್ಲಿ ಕೆಲಸವಿರುವುದಿಲ್ಲ, ಅಂಥಾ ವೇಳೆಯಲ್ಲಿ ದಿನಕೂಲಿಯ ಮೇಲೆ ಕೆಲಸ ಮಾಡಿಸಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆಗಳಲ್ಲಿ ಮುಚ್ಚಿರತಕ್ಕ 10 ಕ್ಯುಬಿಕ್ ಮೀಟರ್ ಮಣ್ಣನ್ನು ತೆಗೆದರೆ ಅಲ್ಲಿ ಒಂದು ಎಕರೆಗೆ ಆಗುವಷ್ಟು ನೀರನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಕೊನೆಯಪಕ್ಷ 20–25 ಸಾವಿರ ರೂಪಾಯಿ ಖರ್ಚಾಗುವುದು. ಇಷ್ಟು ಖರ್ಚುಮಾಡಿ ಹೂಳು ತೆಗೆಯುವುದಕ್ಕೆ ಸಾಧ್ಯವೇ, ಅದರಿಂದ ಪ್ರಯೋಜನವೆಷ್ಟಾಗುವುದು ಎಂಬದನ್ನು ಯೋಚನೆಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—4 ಕೆರೆಗಳನ್ನು ಸ್ಯಾಂಪಲ್‌ಗೆ ತೆಗೆದುಕೊಂಡು ತಾಲ್ಲೂಕು ಬೋರ್ಡ್ ಕೆಲವು ದಿವಸಗಳಲ್ಲಿ ಕಾರ್ಯಗತ ಮಾಡಲು ವ್ಯವಸ್ಥೆಯಾಗಿದೆ. ನಿಮ್ಮ ಅಧಿಕಾರಿಗಳಿಗೆ ಧೈರ್ಯವಿದ್ದರೆ ಪ್ರಾಮಾಣಿಕವಾಗಿ ಕೆಲಸಮಾಡಿದರೆ ಮಾಡಬಹುದು. ನಾವು ಸ್ಯಾಂಪಲ್ ಮಾಡಿ ತೋರಿಸುತ್ತೇವೆ. ಹೆಚ್ಚು ಹಣ ಖರ್ಚುಮಾಡದೆ ಕೆಲಸಮಾಡಲು ಸಾಧ್ಯವಾಗುತ್ತದೆ. ಮಲೆನಾಡಿ ನಲ್ಲಿ ಹೂಳು ತೆಗೆಯದಿದ್ದರೆ ಸಹಾಯವಾಗುವುದಿಲ್ಲ, ಈ ದೃಷ್ಟಿಯಿಂದ ಮಲೆನಾಡಿನ ಬಗ್ಗೆ ಒಂದು

ಸ್ಯಾಂಪಲ್ ಸರ್ವೆ ಮಾಡಿ ಅದರಿಂದ ಉಪಯೋಗವೆಷ್ಟಿದೆ ಎಂದು ನಿರ್ಧಾರಮಾಡುವ ದೃಷ್ಟಿಯಿಂದ ಮತ್ತು ಅದರ ಉಪಯೋಗವೆಷ್ಟಿದೆ ಎಂಬ ದೃಷ್ಟಿಯಿಂದ ಕೆಲವು ಕೆಲಸ ತೆಗೆದುಕೊಳ್ಳಬೇಕು. ಮಲೆನಾಡು ಪ್ರದೇಶದಲ್ಲಿ ಹೂಳು ತೆಗೆಯುವ ಕೆಲಸವನ್ನು ಆರಂಭಿಸಬೇಕು. ಜೊತೆಗೆ ಮಲೆನಾಡು ಪ್ರದೇಶದಲ್ಲಿ ರಸ್ತೆ ಬಗ್ಗೆ ಹೆಚ್ಚು ಗಮನಕೊಡಬೇಕು. ಹತ್ತಿಪ್ಪತ್ತು ವರ್ಷಗಳಿಂದ ತಮ್ಮ ಇಲಾಖೆ ರಸ್ತೆಗಳು ಏನಿವೆ ಅವನ್ನು ಟಾರ್ ಮಾಡಿ ಅಪ್‌ಗ್ರೇಡ್ ಕೂಡ ಮಾಡಿಲ್ಲ. ಸಾಗರದಿಂದ ಕರೂರಿಗೆ ಸುಮಾರು 40 ಮೈಲಿ ರಸ್ತೆಯಿದೆ, ಅಲ್ಲಿ ಸೇತುವೆ ಒಂದು ಬೇಕಾಗಿದೆ. ಅದಿಲ್ಲದೆ ತೊಂದರೆಯಾಗಿದೆ. ಆ ರಸ್ತೆಗೆ ಮಧ್ಯೆ 9 ಮೈಲಿಗೆ ಟಾರು ಹಾಕಿದ್ದಾರೆ: 40 ಮೈಲಿ ರಸ್ತೆಯಲ್ಲಿ ಕೇವಲ 9 ಮೈಲಿಗೆ ಮಾತ್ರ ಟಾರು ಹಾಕಿದ್ದಾರೆ. ಒಂದು ರಸ್ತೆ ಎಷ್ಟು ಉದ್ದವಿದ್ದರೂ ಪ್ರಾರಂಭದಿಂದ ಕೊನೆಯ ವರೆಗೂ ಟಾರು ಹಾಕಬೇಕು. ನೀವು ಸೃಷ್ಟಿ ಮಾಡಿದ್ದೀರಿ ಅದನ್ನು. ಈ ಸಮಸ್ಯೆಯನ್ನು ಬಗೆ ಹರಿಸುವ ದೃಷ್ಟಿಯಿಂದ ಈ ಪ್ರದೇಶದ ಎಲ್ಲಾ ರಸ್ತೆಗಳಿಗೂ ಟಾರು ಹಾಕಬೇಕು. ಲಾಂಚ್ ಹಾಕುವುದಾಗಿ ಹೇಳಿದ್ದೀರಿ, ಹಾಕಿಲ್ಲ, ಈಗಿರುವ ಲಾಂಚಿನಿಂಧ ಯಾವ ಸಹಾಯವೂ ಆಗಿಲ್ಲ. ಕಳಸವಳ್ಳಿಯ ಹತ್ತಿರ ಸಾಗರ ತಾಲ್ಲೂಕಿನಲ್ಲಿ ಲಾಂಚ್ ಹಾಕಿದ್ದೀರಿ. ಈಗಿರುವ ವ್ಯವಸ್ಥೆಯಿಂದ ಜನರು ಸುತ್ತಲೂ 15 ಮೈಲಿ ನಡೆದುಕೊಂಡು ಹೋಗಬೇಕಾಗಿದೆ, ಸಾಮಾನುಗಳನ್ನು ತಲೆಯಮೇಲೆ ಹೊತ್ತುಕೊಂಡು ಸಾಗಿಸಬೇಕಾಗಿದೆ. ಆದುದರಿಂದ ಅಲ್ಲಿ ಒಂದು ಸೇತುವೆ ನಿರ್ಮಾಣಮಾಡಬೇಕು. ಅದಕ್ಕೆ ಒಂದು ಕೋಟಿ ರೂಪಾಯಿ ಖರ್ಚಾಗಬಹುದು. ಅದನ್ನು ಮಾಡಿದರೆ ಬೈಂದೂರಿಗೆ ನೇರವಾಗಿ ಮಾರ್ಗವಾಗುವುದು. ಅಲ್ಲಿಗೆ ಮಂತ್ರಿಗಳು ಭೇಟಿ ಕೊಟ್ಟು ವಿವರ ತಿಳಿಯಬಹುದು. ಮಲೆನಾಡಿನ ಬಗ್ಗೆ ವಿಶೇಷ ಜವಾಬ್ದಾರಿ ವಹಿಸಬೇಕು ಎಂದು ಕೇಳಿಕೊಂಡು ನನ್ನ ಮಾತನು ಮುಗಿಸುತ್ತೇನೆ.

STATEMENT BY MINISTER FOR PUBLIC WORKS AND ELECTRICITY

re : Visit of the Study Team to the Drought Areas in the State

SRI H. M. CHANNABASAPPA (Minister for Public Works and Electricity).—I would like to make a statement on relief measures in the drought affected areas of the State. I request you kindly to permit me to make the statement by sitting.

During discussions on scarcity conditions on the Floor of this House (Assembly) on the 9th April, 1973, the Chief Minister drew the attention of Honourable Members of this House (Assembly) to the fact that the drought conditions prevalent in some parts of North Karnatak are unprecedented and unheard of in living memory. He also added that the magnitude of relief works undertaken is something stupendous. He acknowledged that in an undertaking of stupendous magnitude manned and executed by thousands of executives at various levels to relieve millions of people from distress, there is bound to be lapses, defects, deficiencies and shortcomings. He further declared in unequivocal terms that Government would do every thing humanly possible to set matters right wherever and whenever they go wrong.

The Chief Minister made it abundantly clear that a challenging war against nature cannot be fought by Government—all by itself, without the willing co-operation of all sections of the people, both in and out of the Legislature. He, therefore, made a fervent appeal seeking the willing co-operation of the Members of this House in general and of the Opposition in particular. He announced that he